ಚಿಂತನ ಬಯಲು

ತ್ರೈಮಾಸಿಕ

ISSN 2278-2192

ಸಂಪುಟ : 8, ಸಂಚಿಕೆ : 4 ಎಪ್ರಿಲ್– ಜೂನ್ 2020

Volume : 8, Issue : 4 April - June 2020

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 8, Issue 4, April - June 2020

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size	:	Dy 1/8
Paper Used	:	70 GSM
Pages	:	64
Price	:	Rs. 50

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. 'ಚೇರಮಕಾವ್ಯಂ' : ವಸ್ತುವಿಶ್ಲೇಷಣೆ

❖ ಲಕ್ಷ್ಮೀಕಾಂತ / 5

2. ಅಡಿಗರ ಗದ್ಯದಲ್ಲಿ ರಾಷ್ಟ್ರ ಕಟ್ಟುವ ಬಗೆ

❖ ಡಾ. ಅಜಕ್ಕಳ ಗಿರೀಶ ಭಟ್ / 11

3. ಚ.ನ. ಶಂಕರ್‌ರಾವ್‌ರಿಂದ ಸಮಾಜಶಾಸ್ತ್ರಕ್ಕೊಂದು ಅನುಪಮ ಕೊಡುಗೆ

❖ ಡಾ. ಮಾಧವ ಎಂ.ಕೆ. / 19

4. ಭಾರತದ ಸ್ವಾತಂತ್ರ್ಯ ದಿನಾಚರಣೆ ಒಂದು ಸಂಭ್ರಮವೋ? ಹೊಸ ಸವಾಲೋ?

❖ ರೊನಾಲ್ಡ್ ಪ್ರವೀಣ್ ಕೊರೆಯಾ / 33

5. ಸಾಫ್ಟ್‌ವೇರ್ ಪ್ರಪಂಚದ ಅನುಭವ ತೆರೆದಿಡುವ ವಸುಧೇಂದ್ರರ ಕತೆಗಳು

❖ ಡಾ. ಎಚ್.ಕೆ. ವೆಂಕಟೇಶ / 39

6. ಶಂಕರ, ಅದ್ವೈತ, ಕ್ಯಾಂಟ್ ಮತ್ತು ವಿಚಾರವಾದ

❖ ಶ್ರೀನಾಥ್ ಎಚ್. ಎಸ್. / 56

7. ಒಂದು ಪ್ರತಿಕ್ರಿಯೆ

❖ ಡಾ. ವಿಶ್ವಾಸ / 64

ಸಂಪಾದಕೀಯ

ಹಳೆಗನ್ನಡವೆಂದಾಗ ಪಂಪ, ರನ್ನ, ಜನ್ನ ಹೀಗೆ ಕೆಲವು ಪ್ರಸಿದ್ಧ ಕವಿಗಳ ಸುತ್ತ ನಮ್ಮ ವಿಮರ್ಶೆ, ವಿಶ್ಲೇಷಣೆ ವಿಚಾರಗೋಷ್ಠಿಗಳು ಸುತ್ತುವುದನ್ನು ಸಹಜವಾಗಿ ಕಾಣುತ್ತೇವೆ. ನಡುಗನ್ನಡ ಎಂದಾಗ ವಚನ, ಕುಮಾರವ್ಯಾಸ, ಲಕ್ಷ್ಮೀಶ, ದಾಸರು ಇವರೆಲ್ಲ ಚರ್ಚೆಯ ಕೇಂದ್ರದಲ್ಲಿ ಇರುತ್ತಾರೆ. ಹೀಗಿರುವಾಗ ಚೇರಮಾಂಕನಂಥ ಕಲಿಯ ಕಾವ್ಯವನ್ನು ಚರ್ಚಿಸುವುದರಲ್ಲಿ ಔಚಿತ್ಯವಿದೆ. ಚೇರಮ ಕಾವ್ಯದ ಬಗ್ಗೆ ಒಂದು ಲೇಖನ ಈ ಸಂಚಿಕೆಯಲ್ಲಿದೆ. ಅಡಿಗರ ಪದ್ಯಗಳ ಬಗ್ಗೆ ಚರ್ಚೆಯಾದಷ್ಟು ಗದ್ಯ ಬರಹಗಳ ಚರ್ಚೆ ನಡೆದಿಲ್ಲ. ಅಡಿಗರ ಗದ್ಯದ ಬಗ್ಗೆ ಹೊಸ ಒಳನೋಟ ಸಿಗಲಿ ಎಂಬ ದೃಷ್ಟಿಯಿಂದ ಒಂದು ಲೇಖನವಿದೆ. ಇತರ ಲೇಖನಗಳು ಕೂಡ ವಿವಿಧ ನೆಲೆಗಳಲ್ಲಿ ಚರ್ಚೆಯನ್ನು ಬೆಳೆಸಬಲ್ಲವು ಎಂಬ ವಿಶ್ವಾಸವಿದೆ. ಓದುಗರ ಪ್ರತಿಕ್ರಿಯೆಗಳಿಗೆ ಸ್ವಾಗತ.

ಸಂ.

‘ಚೇರಮಕಾವ್ಯಂ’ : ವಸ್ತುವಿಶ್ಲೇಷಣೆ

ಲಕ್ಷ್ಮೀಕಾಂತ
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ–583276

‘ಚೇರಮಕಾವ್ಯಂ’ ಚೇರಮಾಂಕನ ಕೃತಿ. ಈತ ವೀರಶೈವ ಕವಿಯಾಗಿದ್ದು, ಈತನ ಕಾಲ ಕ್ರಿ.ಶ. ಸು.1526 ಎಂದು ತಿಳಿದುಬರುತ್ತದೆ. ಚೇರಮಾಂಕನು ತನ್ನನ್ನು ತಾನು ‘ನವರಸಭಾವಲಕ್ಷಣಾಲಂ–ಕಾರನಿಪುಣ’ ಎಂದು ವಿಶೇಷಿಸಿಕೊಂಡಿದ್ದಾನೆ. ‘ಚೇರಮಕಾವ್ಯಂ’ನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಲಾಗಿದೆ. ಇದೊಂದು ವರ್ಣಕ ಕಾವ್ಯವಾಗಿದ್ದು, ಗುಬ್ಬಿಯ ಮಲ್ಲಣಾರ್ಯರ ಕೃಪೆಯಿಂದ ಈ ಕೃತಿಯನ್ನು ಬರೆದಿರುವುದಾಗಿ ಚೇರಮಾಂಕನು ಹೇಳೊಕೊಂಡಿದ್ದಾನೆ. ಹರಿಹರನ ತರುವಾಯ ಚೇರಮನನ್ನು ಕುರಿತು ಷಟ್ಪದಿಯಲ್ಲಿ ಕಾವ್ಯವನ್ನು ರಚಿಸಿರುವವರಲ್ಲಿ ಈತ ಎರಡನೆಯವನಾಗಿದ್ದಾನೆ.

ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನ ಸಂಸ್ಥೆಗೆ ಸೇರಿದ ‘ಗ’ ಪ್ರತಿ ಮತ್ತು ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ್ ಲೈಬ್ರರಿಯಲ್ಲಿರುವ ಮೂಲಮಾತೃಕೆಯಾದ ‘ಕ’ ಪ್ರತಿ ಇವೆರಡೂ ಪ್ರತಿಗಳ ಸಹಾಯದಿಂದ ಪ್ರಸ್ತುತ ಕಾವ್ಯವನ್ನು ಪರಿಷ್ಕರಿಸಿರುವುದಾಗಿ ಕೃತಿಯ ಸಂಪಾದಕರಾದ ಎನ್.ಬಸವಾರಾಧ್ಯ ಅವರು ಹೇಳಿಕೊಂಡಿದ್ದಾರೆ.

ಈ ಕಾವ್ಯದ ಕಥಾವಸ್ತು ಪುರಾತನವಾಗಿದ್ದು, ಅರುವತ್ತು ಮೂವರು ಶಿವಭಕ್ತರಲ್ಲಿ ಒಬ್ಬನಾದ ‘ಚೇರಮ’ ಈ ಕಾವ್ಯದ ಕೇಂದ್ರಬಿಂದುವಾಗಿದ್ದಾನೆ.

“ಭೂವಳಯದನುವನಾನಾರದಂಬಿನ್ನವಿಸೆ
ಪಾವನಚರಿತ್ರನೆನಿಸುವ ಭಸಿತಕಾಯನಂ
ದೇವದೇವಂ ಕಳುಪೆ ಧರಣೀತಳಕ್ಕೆ ಚೇರಮನಾಗಿ ನಡೆತಂದನು”

ಎಂಬ ಮೊದಲ ಸಂಧಿಯ ಸೂಚನಾ ಪದ್ಯದಲ್ಲಿ ನಾರದನ ಬಿನ್ನಪಕ್ಕೆ ಓಗೊಟ್ಟ ಶಿವನು ಭಸಿತಕಾಯನನ್ನು ಭೂಮಿಗೆ ಕಳುಹಿಸಿ ವೀರಶೈವಧರ್ಮವನ್ನು ಪ್ರತಿಷ್ಠಾಪಿಸುವಂತೆ ತಿಳಿಸುವ ಕಥಾವಸ್ತುವನ್ನು ಕೃತಿಯು ಒಳಗೊಂಡಿದೆ. ಈ ಕಾರಣವಾಗಿ ಭಸಿತಕಾಯನು ಚೇರಮನಾಗಿ ಭೂಮಿಯಲ್ಲಿ ಅವತರಿಸುವನು. ನಂತರ ನಂಬಿಯಣ್ಣನ ಜೊತೆಗೂಡಿ ಶೈವಧರ್ಮವನ್ನು ಸಾರಿ ಪುನಃ ಶಿವನ ಸಾನಿಧ್ಯವನ್ನು ಸೇರುವ ಕಥಾಹಂದರ ಕೃತಿಯ ವಿಶೇಷಗಳಲ್ಲೊಂದು. ಇದರ ಜೊತೆಗೆ ಭಸಿತಕಾಯನು ಚೇರಮನಾಗಿ ಜನಿಸುವ ಸಂದರ್ಭ, ಆತನ ದಿಗ್ವಿಜಯಗಳ ವರ್ಣನೆ, ಚೈತ್ರಕಾಲದ ಸಂಗತಿಗಳು ಹಾಗೂ ನಂಬಿಯಣ್ಣನ ಕಥಾ ವಿವರಗಳು ಪ್ರಸ್ತುತ ಕೃತಿಗೆ ವಿಶಿಷ್ಟವಾದ ಮೆರುಗನ್ನು ನೀಡಿವೆ.

ಕೃತಿಯ ಪ್ರಾರಂಭದ ಮೂರು ಪದ್ಯಗಳಲ್ಲಿ ಪರ್ವತ ಸಾರ್ವಭೌಮನಾದ ಭೋಗ ಮಲ್ಲೇಶ್ವರನನ್ನು ಸ್ತುತಿಸಲಾಗಿದೆ. ನಂತರದ ಪದ್ಯದಲ್ಲಿ ಜಗನ್ಮಾತೆಯಾದ ಗಿರಿಜೆಯನ್ನು ಸ್ಮರಿಸಿದ್ದಾನೆ. ವಿಘ್ನೇಶ್ವರನನ್ನು ಕುರಿತು **“ಕೇರಳಾಧಿಪಚರಿತ್ರಮಂ ನಡಸುನೀನಳ್ಕಜೆಂದೆ”**[1] ಎಂದು ಬೇಡಿಕೊಂಡಿದ್ದಾನೆ. ನಂತರ ಷಣ್ಮುಖ, ನಂದಿ, ಭೃಂಗಿ ಹಾಗೂ ವೀರಭದ್ರನನ್ನು ಹೊಗಳಿದ್ದಾನೆ.

ಈ ವಿವರಗಳು ಕವಿಯು ವೀರಶೈವನೆಂಬುದನ್ನು ಖಚಿತಪಡಿಸುತ್ತವೆ. ನಂತರದ ಪದ್ಯದಲ್ಲಿ ಚಿದಂಗನೆನಿಸಿದ ತನ್ನ ಗುರು ಚೆನ್ನ ವೀರೇಶನನ್ನು, ಗುಬ್ಬಿಯ ಮಲ್ಲಣಾಚಾರ್ಯ ಪೌತ್ರ ಸಂಸ್ತೋತ್ರಪಾತ್ರ, ಕರ್ನಾಟಲಕ್ಷಣ ವಿಶಾರದ, ಬಸವೇಶ್ವರ ಪುರಾಣಾರ್ಥ ಭೋಗಿಯೆನಿಸಿದ ಮಲ್ಲಣಾರ್ಯರನ್ನು, ಸೋಲೂರ ಭಾಸುರ ಚಿಕ್ಕಬಸವ ಇವರುಗಳನ್ನು ಸ್ತುತಿಸಿದ್ದಾನೆ. ಮುಂದಿನ ಪದ್ಯಗಳಲ್ಲಿ ಪೂರ್ವ ಕವಿಗಳಾದ ವಾಲ್ಮೀಕಿ, ಮಯೂರ, ಹಲಾಯುಧ, ಕವಿಕುಮುದ ಸೋಮೇಶ, ಭೋಜ, ಬಾಣರನ್ನು ಸ್ತುತಿಸಿದ್ದಾನೆ. ಇವರನ್ನು ನೆನೆದು ಕೇರಳಾಧೀಶ್ವರ ಚರಿತ್ರವನ್ನುತಾನು ಬಿತ್ತರಿಸುತ್ತಿರುವುದಾಗಿ ಕವಿ ಹೇಳಿಕೊಂಡಿದ್ದಾನೆ. ನಂತರದ

"ಅರಸನರ್ಥವನಿತ್ತುಶರಣರ್ಗೆಯಾ ಕೆಱಿಯ
ಮರುಳಿಂದೆ ಕಟ್ಟಿಸುತ ಬಯಲಾದ ಹಿರಿಯ ಪ
ದ್ಮರಸರವರಣುಗನುಱಿ ರಾಮಾನುಜನ ಶಿಷ್ಯನಂ ಭಂಗಿಸುತ್ತಾತನ ।
ಪೊರೆದನಾ ವೀರಬಲ್ಲಾಳನ ಸಭೆಯೊಳಗಿರ್ದು
ಕರಮರ್ದನಂಗೆಯ್ದು ಮಹಿಮೆಗವನಿಪನೆಱಿಗೆ
ಬರುತ ಹಂಪೆಯೊಳೀಶಭಕ್ತರಂ ನುತಿಸಿದ ಹರೀಶನಂ ಬಲಗೊಂಬೆನು"[2]

ಎಂಬ ಪದ್ಯದಲ್ಲಿ ಕೆರೆಯ ಪದ್ಮರಸ, ಕುಮಾರ ಪದ್ಮರಸ ಹಾಗೂ ಹರೀಶ್ವರ ಇವರುಗಳನ್ನು ಸ್ತುತಿಸಿದ್ದಾನೆ. ನಂತರ ಚಿಕವೀರೇಶಮೂರ್ತಿ, ನಾಗಲಿಂಗಸೆಟ್ಟಿ, ಗಂಗಪ್ಪ ಸೆಟ್ಟಿಯರನ್ನು ಸ್ತುತಿಸುತ್ತ, ಸದ್ಭಕ್ತರ ಆಣತಿಯಂತೆ ಈ ಕೃತಿಯನ್ನು ಹೇಳುತ್ತಿರುವುದಾಗಿ ತಿಳಿಸಿದ್ದಾನೆ.

"ಬಿಟ್ಟಕಣ್ಣವರೂರಸುಧೆಯಸವಿಮನವಲರ್ದು
ನಟ್ಟುಕೂಡುವ ಲತಾಂಗಿಯ ಸೋಂಕು ಪುಳಕವಳ
ವಟ್ಟು ಹಾಡುವಗಾನರಸದಿಂಪು ಜಾಜಿಯೊಳ್ಪರಲಕಂಪುಗಳ ಸೊಂಪು ।
ಕಟ್ಟಕ್ಕಜೆನ ಸುತನರೂಪು ನಲ್ವಿನ ಸೈಪು
ಮುಟ್ಟಿ ಪಂಚೇಂದ್ರಿಯಂ ನಲಿವವೊಲ್‌ಗಂಗಪ್ಪ
ಸೆಟ್ಟಿಯಾತ್ಮಜಚೇರಮಂ ಪೇಳ್ದ ರಸಕಾವ್ಯವೆಸೆವುದಖಿಳರಿಗೆ ಸೇವ್ಯ"[3]

ತನ್ನಕಾವ್ಯದ ಸೊಬಗನ್ನು ಕುರಿತು ಮಾತನಾಡುತ್ತ ಅದು ಬಿಟ್ಟ ಕಣ್ಣವರೂರ ಸುಧೆಯ ಸವಿಯಾಗಿದೆ. ಮನವಲರ್ದು ನಟ್ಟುಕೂಡುವ ಲತಾಂಗಿಯ ಸೋಂಕು. ಪುಳಕ ತುಂಬಿ ಹಾಡುವ ಗಾನರಸದ ಇಂಪು. ಜಾಜಿ ಹೂವಿನ ಕಂಪಿನ ಸೋಂಪಿನಂತಿರುವುದು. ಇಂತಹ ಕೃತಿಯು ಕಟ್ಟಕ್ಕಜೆನ ಸುತನರೂಪನ್ನು ಒಳಗೊಂಡ ಗಂಗಪ್ಪಸೆಟ್ಟಿಯ ಮಗನಾದ ಚೇರಮನು ಹೇಳಿದ ರಸಕಾವ್ಯವೆನಿಸುವುದು ಅಖಿಳರಿಗೆ ಎಂದು ಅತಿ ವಿನಯದಿಂದ ಹೇಳಿಕೊಂಡಿದ್ದಾನೆ. ಅಲ್ಲದೆ ಈ ಪದ್ಯದಲ್ಲಿ 'ಗಂಗಪ್ಪಸೆಟ್ಟಿ' ಚೇರಮನ ತಂದೆ ಎಂಬುದು ತಿಳಿಯುತ್ತದೆ. ಮುಂದುವರೆದು ಸತ್ಕವಿ ಮಲ್ಲಣಾರ್ಯ ಗುರುವರನ ಕೃಪೆಯಿಂದ ಚೇರಮಾಂಕನು ಶಿವನ ಪುರಕ್ಕೆ ಧಾಳಿಯನಿಟ್ಟ ಚೇರಮಚರಿತ್ರವನ್ನು ಹೇಳುವೆನು ಎಂದು ಹೇಳಿಕೊಂಡಿದ್ದಾನೆ. ಜೊತೆಗೆ ಕಸದೊಳಗೆ ಸೇರಿಕೊಂಡಿರುವ ಚಿನ್ನದರಜವನ್ನು ಪಾದರಸವು ಗ್ರಹಿಸಿ ಅರ್ಥವನ್ನುಂಟು ಮಾಡುವಂತೆ "ರಸಿಕರೆನ್ನಯ ಕೃತಿಯೊಳುಳ್ಳಲೇಸಂ ಕೊಂಡುತಪ್ಪಿರಲುತಿದ್ದಿಸಲಹಿ"[4] ಎಂದು ವಿನಯದಿಂದ ಕೇಳಿಕೊಂಡಿದ್ದಾನೆ.

"ನಾರದನಬಿನ್ನಪಕೆಭಸಿತಕಾಯನಶಿವಂ
ಧಾರುಣಿಗೆ ಕಳುಪೆ ಚೇರಮನೆನಿಸಿ ರಕ್ಷಾವಿ

ಚಾರಮಂ ಪರಕಲಿಸಿ ಭವನನುಜ್ಞೆಯ ಭದ್ರಗಾಯಕಂಗಿಷ್ಟವಿತ್ತು ।
ಆ ರುಚಿರ ನಂಬ್ಯಣ್ಣನೊಡನಿರ್ದು ಬಳಿಕವಂ
ಮಾರಾರಿಯೂರ್ಗೆಯ್ದೆ ಹಿಂದೆ ಥಾಳಿಯ ಪೋಗಿ
ಚಾರುಕಾವ್ಯವನಲ್ಲಿ ಕೇಳಿಸಿದನೆಂಬ ಕಥೆಯಿದಕೆ ಮೊದಲಾವುದೆನಲು"[5]

ಎಂಬ ಪ್ರಸ್ತುತ ಪದ್ಯಭಾಗದಲ್ಲಿ ಕವಿಯು ಕೃತಿಯ ಮುಖ್ಯ ವಸ್ತುವಿನ ಕಡೆ ನಮ್ಮ ಗಮನವನ್ನು ಸೆಳೆಯುತ್ತಾನೆ. ನಾರದನ ಕೋರಿಕೆಗೆ ಓಗೊಟ್ಟು ಭಸಿತಕಾಯನನ್ನು ಶಿವನು ಭೂಮಿಗೆ ಕಳುಹಿಸಿದ ವಿವರಗಳು ಕಂಡುಬರುತ್ತವೆ. ಈರೀತಿ ಭೂಮಿಗೆ ಬಂದ ಭಸಿತಕಾಯನು 'ಚೇರಮ' ಎಂಬ ಹೆಸರಿನಿಂದ ರಕ್ಷಾ ವಿಚಾರವನ್ನು ಪರಿಕಲಿಸಿ ಶೈವ ಧರ್ಮವನ್ನು ಪ್ರಚುರ ಗೊಳಿಸುವ ಕಥಾ ಹಂದರವಿದೆ. ಜೊತೆಗೆ ನಂಬಿಯಣ್ಣನು ಚೇರಮನ ಜೊತೆ ನಿಂತ ವಿಚಾರವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

ನಂತರ ಕೃತಿಯಲ್ಲಿ ಸಿಂಧು ದೇಶದ ವರ್ಣನೆ ಇದ್ದು, ಅದು ಚಂದ್ರಸೂರರೆಂಬ ಚೆಲ್ವರಸುಗಳ ಮಲ್ಲ ಸಾಧನೆಗೆಂದು ಸವೆದು ತಂದಿಟ್ಟ ಕನಕ ಸ್ತಂಭವೂ ಎಂಬಂತೆ ಕಂಗೊಳಿಸುತ್ತಿತ್ತು. ಮುಂದುವರೆದು ಬೆಳ್ಳಿ ಬೆಟ್ಟದ ಅಗ್ರದೊಳಿದ್ದ ಕೈಲಾಸಪುರ, ರಜತಗಿರಿನಿಲಯನಾದ ಶಿವನ ಒಡ್ಡೋಲಗದ ವರ್ಣನೆ ಇದೆ. ಆ ಒಡ್ಡೋಲಗವು ಸುರ ಸಮೂಹ, ಕಿನ್ನರರ ನಿವಹ, ಗರುಡರೊತ್ತೊತ್ತೆ, ಗಂಧರ್ವಕೋಟಿ, ತುರಗ ಸಂಚಯ, ವಿದ್ಯಾಧರರು, ವರರಂಭೆಯೂರ್ವಶಿ ಮೊದಲಾದವರಿಂದ ರಾರಾಜಿಸುತ್ತಿರಲು, ಭಾವ ಶುದ್ಧದೊಳೆದ್ದು ಕೈಮುಗಿದ ನಾರದನು ತಾನು ಎಲ್ಲಿಂದ ಬಂದೆಯೆಂಬುದನ್ನು ಭಿನ್ನವಿಸುತ್ತ,

"ಕಾಶಿಕೇತಾರಗಯೆಸಿರಿಸೈಳ ಕಾಳಹ
ಸ್ತೀಶನಗರಂ ಕಾಂಚಿ ಮಧುರೆ ಸೇತುವಿನ ರಾ
ಮೇಶ ತಿರುವಾರೂರ ಪೊನ್ನಾಂಬಲಂ ಮುಖ್ಯ ಶಿವನಿಳಯಮಂ ನೋಡುತ ।
ದೇಶಕಗ್ಗಳವೆನಿಪ ಕೇರಳಕೆ ಬಂದೆನಘ
ನಾಶ ತಿರುವಂಜಕಳನಾಥನಂ ದಿವ್ಯ ಸಂ
ಕಾಶಗಣಯೂಥನಂ ವರವೃಷವರೂಢನಂ ಕಂಡೆನಾನಂದದಿಂದೆ"[6]

ಎಂದು ತಿಳಿಸಿ ವಾಲ್ಮೀಕೀಶನ ಸೇವೆಗೆ ಎಲೆದೇವ ಕೇರಳದ ತಿರುವಂಜಕಳದೇವನಿಗೆ 'ಭಕ್ತನಪ್ಪಂತೊರ್ವರಾಯನನ್ನು ನೀವು ಕಲ್ಪಿಸಿ ಕಳುಪಬೇಕೆಂದು' ಶಿವನಿಗೆ ಸಾಷ್ಟಾಂಗದಿಂದ ನಾರದನು ನಮಿಸಿ "ನಿನ್ನಂಬಿಟ್ಟಗೆಯ್ಸಿದಮಹೀವರಗೆ ಕರಿಕಾಲಚೋಳಗೆಣೆಯಪ್ಪನಂ ಕಳುಪೆಂದು"[7] ಚೇರಮ ಕಾವ್ಯದ ಕಥಾರಂಭಕ್ಕೆ ನಾರದನು ಮುನ್ನುಡಿಯನ್ನು ಬರೆಯುತ್ತಾನೆ.

ಇದಕ್ಕೆ ಒಡಂಬಟ್ಟ ಶಿವನು ಭಸಿತಕಾಯನನ್ನು ನೋಡಿ "ಧಾರುಣಿಗೆನೀಂ ಪೋಗಿ ರಾಯನಾಗೈಚೇರ ಕೇರಳಕ್ಕೆನೆ"[8] ಎನ್ನಲು ಭಸಿತಕಾಯನು "ರಾಜ್ಯಾಂತರಂನರಕವೆಂಬಾ –ವೇದವುಂಟಯ್ಯ, ನಿನ್ನಣುಗನಾದೆನ್ನಭೂವರನಮಾಡಲೇಕೆ"[9] ಎನ್ನಲು 'ಅಳುಕದಿರು, ಮತ್ಪುತ್ರನಾದ ಆ ವಿಮಳನಂಬಿಯಣ್ಣನು ಹೋಗಿರುವನು. ನೀನು ಅವನೊಳಗೆ ಯಾವಾಗಲೂ ಸ್ನೇಹಿತನಾಗಿದ್ದು, ಮದ್ಭಸಿತ ಮಹಿಮೆಯನ್ನು ತೋರು' ಎಂದು ಕಳುಹಿಸಿಕೊಟ್ಟನು. ಆ ಕೇರಳನಾಡು ದುರ್ಗುಣಗಳ ಕೇಡಾಗಿ, ಸೌಖ್ಯದೀಡಾಗಿ ಕಂಗೊಳಿಸುತ್ತಿತ್ತು.

ಹೀಗಿರಲು ಮಕ್ಕಳಿಲ್ಲದೆ ಕೊರಗುತ್ತಿದ್ದ ಪುಷ್ಪಚಾಪ(ಮೀನಕೇತನ) ಮತ್ತು ಗುಣವತಿಯರ ಮಗನಾಗಿ ಭಸಿತಕಾಯನು ತಿರುವಂಜಕಳನಾಥನ ವರಪ್ರಸಾದದಿಂದ ಜನಿಸಿದನು. 'ಚೇರಮ'

ಎಂಬ ಹೆಸರಿನಿಂದ ಬೆಳೆಯುವ ಈತನು ಹಲವು ರಾಜರುಗಳನ್ನು ಗೆದ್ದ ವಿವರಗಳಿವೆ. ಚೇರಮನಿಗೆ ಪಾಂಡ್ಯನ ಮಗಳಾದ 'ಸೌಂದರಾಂಗಿ'ಯನ್ನು ಕೊಟ್ಟು ವಿವಾಹ ಮಾಡುವರು. ಮಧುರೆಯ ಪಟ್ಟಣದೊಳಗೆ ನಡೆಯುವ ಇವರಿಬ್ಬರ ವಿವಾಹೋತ್ಸವದ ವರ್ಣನೆ ಚಿತ್ರಕಾವ್ಯದಂತಿದೆ. ಜೊತೆಗೆ "ಕಮಲೆಯೆಂಬೆಳೆವೆಣ್ಣುಕುವರಂಗೆ ತೈಲವೊತ್ತಿದಳುಕರಕಮಲದಿಂ ಕುರುಳಾಡೆಕೂಡೆ ಕೂಡೆ"[10] ಹಾಗೂ ಮಂಗಳಮಪ್ಪ ಅಲಂಕಾರವನ್ನು "ಚೇರಮಂಗಲರ್ವಿನಲರ್ವಿಲ್ಲಿಗಲರಂಗ ತೊಡಿಸುವಂತೆ"[11] ಎಂಬ ಸಾಲುಗಳು ಮದುವೆಯ ಮನೆಯ ನೈಜಚಿತ್ರಣವನ್ನು ತಿಳಿಸಿ ಕೊಡುತ್ತವೆ. ಈ ರೀತಿಯಾಗಿ ಮಧುಮಗನೆನಿಸಿದ ಚೇರಮನು ಎರಡನೆಯ ಮನ್ಮಥನೆನಿಸಿ ಹಾಗೂ ಕೇರಳಾಧಿಪನೆನಿಸಿ ಮೆರೆಯುತ್ತಿದ್ದನು.

ಇತ್ತ ಚೇರಮಾಂಕನ ತಂದೆಯು ಶಿವಪುರಕ್ಕೆ ಹೋದನು. ಇದರಿಂದ ವೈರಾಗ್ಯ ಪ್ರೇರಿತನಾದ ಚೇರಮನು ರಾಜ್ಯದ ಜನತೆಯನ್ನು 'ನೀವಾರು ನಾವಾರೆನುತ್ತ' ತಪಕ್ಕೆ ಹೋಗಲು ನಿಶ್ಚಯಿಸುತ್ತಾನೆ. ಈ ನಡುವೆ 'ಮಾಯಾರಿ'ಯ ಅಶರೀರವಾಣಿಯಂತೆ ತನ್ನ ನಿರ್ಧಾರದಿಂದ ಹಿಂದೆ ಸರಿದ ಚೇರಮ ಮತ್ತೆ ರಾಜ್ಯಕ್ಕೆ ಹಿಂತಿರುಗಿ ರಾಜ್ಯದ ಆಳ್ವಿಕೆಯನ್ನು ಮುಂದುವರೆಸುವನು.

ನಂತರ ಕೃತಿಯಲ್ಲಿ ಬರುವ ವಸಂತಕಾಲದ ಆಗಮನದ ವರ್ಣನೆಯು ಅದ್ಭುತವಾಗಿದೆ.

"ಘನವಾದಮಾಗಿಯೋಡಿತ್ತುಸವಿಯಪ್ಪಮಾ
ವಿನ ತಳಿರ್ ಮೂಡಿತ್ತು ಕೋಕಿಲಕುಲಂ ಮಿಸುಗು
ವಿನಿದು ಸರದಿಂದ ಪಾಡಿತ್ತು ಬಂದುದು ಚೈತ್ರವಖಿಳಜನಸುಖದ ನೇತ್ರ।
ವನಪಾಲನಂತದಂಕಂಡು ನಡೆಗೊಂಡು ಸೊಂ
ಪಿನ ಪಣ್ಣರಲ್ದಂದು ನೃಪಗೆ ಶರಣೆಂದು ಭೋಂ
ಕನೆ ಮುಗಿದ ಕೈಯ್ಯೊಳಿದಿರೊಳ್ನಿಂದು ಬಿನ್ನೈಸಿದಂ ಬನಕೆ ಬಪ್ಪುದೆಂದು"[12]

ನಂತರದಲ್ಲಿ ನಂಬಿಯಣ್ಣನ ವಿವರಗಳಿದ್ದು, ಏರುವರುಷದ ಹರೆಯದವನಾಗಿದ್ದ ನಂಬಿಯಣ್ಣ ಹಾಗೂ ನರಸಿಂಗ ಮೊನೆಯರ ಮದಗಜದ ಸಂಗತಿಗಳಿವೆ. ಮುಂದುವರೆದು ನಂಬಿಯಣ್ಣನ ವಿವಾಹದ ಸಮಯದಲ್ಲಿ ಶಿವನು ಶೈವ ವೃದ್ಧ ಬ್ರಾಹ್ಮಣನ ವೇಷಧಾರಿಯಾಗಿ ಬಂದು, ಸೌಂದರನೆಂಬ ಈತ ತನ್ನ ತೊತ್ತಿನ ಕಂದ. ಸಾಕ್ಷಿ ಬೇಕಿದ್ದರೆ ತಿರುವೆಣ್ಣನಲ್ಲೂರ್ಗೆ ಬನ್ನಿರೆಂದು ಕರೆದುಕೊಂಡು ಹೋಗಿ ಅಲ್ಲಿ ಆತನ ತೊತ್ತುತನವನ್ನು ನಿರೂಪಿಸುವ ವಿವರಗಳು ಹರಿಹರನ 'ನಂಬಿಯಣ್ಣನ ರಗಳೆ'ಯಲ್ಲಿನ ವೃದ್ಧ ಮಾಹೇಶ್ವರನ ಪ್ರಸಂಗವನ್ನು ನೆನಪಿಸುತ್ತದೆ. ನಂಬಿಯಣ್ಣನ ಸಂಗತಿಗಳನ್ನು ಕೇಳಿ ತಿಳಿದ ಚೇರಮನುಆತನನ್ನು ಭೇಟಿಯಾಗಿ ತನ್ನರಮನೆಗೆ ಕರೆತಂದು ಸತ್ಕರಿಸುವ ವಿವರಗಳಿವೆ. ನಂತರದಲ್ಲಿ ಚೇರಮನೊಡಗೂಡಿ ಹಲವು ಕಾರ್ಯ ಗಳನ್ನು ಮಾಡುವ ನಂಬಿಯಣ್ಣನು ಮರಳಿ ಕೈಲಾಸಕ್ಕೆ ವಾಪಸ್ಸಾಗುತ್ತಾನೆ. ಮತ್ತೆ ತಾನು ಹಿಂದಿನ ಪುಷ್ಪದತ್ತನೆಂಬ ಗಣ ಪದವಿಯನ್ನು ಪಡೆದು 'ಚಿತ್ತಶುದ್ಧದೊಳು ಚೇರಮನಸತ್ಕಾವ್ಯಮಂ ಕೇಳಲೆಂದುಜ್ಜುಗಿಸುವ' ಸಂಗತಿಗಳೊಂದಿಗೆ ಕೃತಿಯು ಮುಕ್ತಾಯ ಗೊಳ್ಳುವುದು ಕಂಡುಬರುತ್ತದೆ. ಇವುಗಳ ಜೊತೆಗೆ 'ಉಪ್ಪಾರತಿ', 'ಬೆಂದಹುಣ್ಣಂ ಕಂಬಿಯೊಳಗಿಕ್ಕಿ ಕೀಸಿದವೊಲಂತೆ' ಎಂಬ ದೇಸಿನುಡಿ ಹಾಗೂ ನಾಣ್ಣುಡಿಗಳು ನಮ್ಮ ಗಮನವನ್ನು ಸೆಳೆಯುತ್ತವೆ.

"ಇದು ಸಕಲಭಕ್ತ ಪದಪದ್ಮ ಮಧುಕರಪುಣ್ಯ
ಸದನಗುಬ್ಬಿಯ ಮಲ್ಲಣಾರ್ಯರ ಕೃಪಾಪಾತ್ರ

ಮುದಿತ ನವರಸ ಭಾವ ಲಕ್ಷಣಾಲಂಕಾರ ನಿಪುಣನೆಂದೆನಿಸಿ ಮೆಱೆವ ।
ಚದುರಚೇರಮನೊರೆದಚೇರಮಚರಿತ್ರಮಂ
ಪದಪಿಂದ ಬರೆದೋದಿ ಕೇಳಿ ವಿಸ್ತರಿಸುವ
ಗೊರ್ದಗಿರ್ಪುದಾಯುರಾರೋಗ್ಯ ಸಂಪದ ಸರ್ವಸಿದ್ಧಿ ಸತ್ಯಂ ತಥ್ಯವು"[13]

ಎಂಬ ಪದ್ಯ ಭಾಗವುಕೃತಿಯ ಪ್ರತಿ ಸಂಧಿಯ ಕೊನೆಯಲ್ಲಿ ಕಂಡುಬರುತ್ತದೆ. ತನ್ನ ಕೃತಿಯು ಗುಬ್ಬಿಯ ಮಲ್ಲಣಾರ್ಯರ ಕೃಪೆಯನ್ನು ಪಡೆದು 'ನವರಸಭಾವಲಕ್ಷಣಾಲಂಕಾರ ನಿಪುಣ' ಎಂದೆನಿಸಿ ಮೆರೆಯುತ್ತಿರುವ ಚದುರನಾದ ಚೇರಮನು ಬರೆದ ಚೇರಮ ಚರಿತ್ರವನ್ನು ಒಲವಿನಿಂದ ಬರೆದು ಓದಿ ಕೇಳಿ ವಿಸ್ತರಿಸಿದರೆ ಅವರಿಗೆ ಆಯುರಾರೋಗ್ಯ ಸಂಪದ ಸರ್ವ ಸಿದ್ಧಿಗಳು ಲಭಿಸುವವು ಎಂದಿದ್ದಾನೆ. ಈ ವಿಚಾರಗಳು ಕಾವ್ಯ ಪ್ರಯೋಜನಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುವ ಜೊತೆಗೆ ಪ್ರತಿಯೊಂದು ಕೃತಿಯ ಭಾವವೂ ಪ್ರಯೋಜನ ದೃಷ್ಟಿಯೇ ಆಗಿರುವುದು ಕಂಡುಬರುತ್ತದೆ.

ಕೃತಿಯ ಕೊನೆಯ ಸಂಧಿಯಲ್ಲಿ

"ರಸಿಕರಾಹಾಯೆನಲು ಭಾವಕರುತಲೆದೂಗೆ
ಪೊಸಬಗೆಯಿದೆಂದುಕೊಂಡಾಡೆ ಲಾಕ್ಷಣಿಕರಾ
ಲಿಸಲು ವಿದ್ವಜ್ಜನಂ ಪೇಳಿದೀ ಕಾವ್ಯಕ್ಕೆ ಹನ್ನೊಂದು ಸಂಧಿ ಪದನು ।
ಎಸಕದೈನೂಱ ಮೇಲೆಪ್ಪತ್ತಯ್ದೆದಱಂ
ದೊಸೆದು ಪರರುಕ್ತಿಗಳ ಮನವಱಿದು ತಂದು ಸೇ
ರಿಸದೆಗುರುಮಲ್ಲಣಾರ್ಯರ ಕೃಪೆಯೊಳುಸುರ್ದೆನಾಂ ಶರಣರಹುದಹುದೆಂಬಿನಂ"[14]

ಎಂದು ತನ್ನ 'ಚೇರಮಕಾವ್ಯಂ' ಕೃತಿಯು 11 ಸಂಧಿ ಹಾಗೂ 575 ಪದ್ಯಗಳನ್ನು ಒಳಗೊಂಡಿರುವುದಾಗಿ ಕವಿ ತಿಳಿಸಿದ್ದಾನೆ. ಅಲ್ಲದೆ ಪರರ ಉಕ್ತಿಗಳನ್ನು ಮನವರಿದು ತಂದು ಸೇರಿಸದೆ ಗುರುಮಲ್ಲಣಾರ್ಯರ ಕೃಪೆಯಿಂದ ಈ ಕೃತಿಯನ್ನು ಶರಣರು ಅಹುದು, ಅಹುದು ಎನ್ನುವಂತೆ ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಆರ್. ನರಸಿಂಹಾಚಾರ್ಯರು ತಮ್ಮ 'ಕರ್ನಾಟಕ ಕವಿಚರಿತೆ'ಯ ದ್ವಿತೀಯ ಸಂಪುಟದಲ್ಲಿ 11 ಸಂಧಿ ಹಾಗೂ 555 ಪದ್ಯ 15 ಗಳಿರುವುದಾಗಿ ತಿಳಿಸಿದ್ದಾರೆ. ಇದಕ್ಕೆ ನರಸಿಂಹಾಚಾರ್ಯರು 'ಗ' ಪ್ರತಿಯನ್ನು ಆಧಾರವಾಗಿ ಬಳಸಿರುವುದು ಕಂಡುಬರುತ್ತದೆ.

ಅಡಿ ಟಿಪ್ಪಣಿಗಳು

1. ಚೇರಮಕಾವ್ಯಂ, 1/5.
2. ಚೇರಮಕಾವ್ಯಂ, 1/14.
3. ಚೇರಮಕಾವ್ಯಂ, 1/19.
4. ಚೇರಮಕಾವ್ಯಂ, 1/22.
5. ಚೇರಮಕಾವ್ಯಂ, 1/24.
6. ಚೇರಮಕಾವ್ಯಂ, 1/46.
7. ಚೇರಮಕಾವ್ಯಂ, 1/48.
8. ಚೇರಮಕಾವ್ಯಂ, 1/49.

9. ಚೇರಮಕಾವ್ಯಂ, 1/50.
10. ಚೇರಮಕಾವ್ಯಂ, 5/17.
11. ಚೇರಮಕಾವ್ಯಂ, 5/18.
12. ಚೇರಮಕಾವ್ಯಂ, 7/3.
13. ಚೇರಮಕಾವ್ಯಂ, 1/52.
14. ಚೇರಮಕಾವ್ಯಂ, 11/71.
15. ಕರ್ನಾಟಕ ಕವಿಚರಿತೆ, ದ್ವಿತೀಯ ಸಂಪುಟ, ಪು.ಸಂ–159.

ಪರಾಮರ್ಶನ ಗ್ರಂಥಗಳು.

1. ಚಂದ್ರಶೇಖರ್ ಎನ್, (ಮುಖ್ಯ ಸಂಪಾದಕರು), ತುಮಕೂರು ಜಿಲ್ಲಾ ಗ್ಯಾಸೆಟಿಯರ್, ಪರಿಷ್ಕೃತ ಕನ್ನಡ ಆವೃತ್ತಿ, 2017, ಮುಖ್ಯ ಸಂಪಾದಕರ ಕಾರ್ಯಾಲಯ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಎಂಟನೇ ಮಹಡಿ, ಜಲ ಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು–560009.
2. ನರಸಿಂಹಾಚಾರ್ಯ ಆರ್, ಕರ್ನಾಟಕ ಕವಿಚರಿತೆ, ದ್ವಿತೀಯ ಸಂಪುಟ, 2011, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.
3. ಬಸವಾರಾಧ್ಯ ಎನ್.. (ಸಂ), ಚೇರಮಾಂಕ ವಿರಚಿತ ಚೇರಮಕಾವ್ಯಂ, 1999, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

✠✠✠

ಪ್ರಾಸಕ್ಕಾಗಿ ಪದವ
ಮತ್ತೆ ಹುಡುಕಲಾರೆ
ಬಂದೇ ಬರುವುದದು
ಕವಿತೆ ಬರುವ ವೇಳೆ.

ಅಡಿಗರ ಗದ್ಯದಲ್ಲಿ ರಾಷ್ಟ್ರ ಕಟ್ಟುವ ಬಗೆ

ಡಾ. ಅಜಕ್ಕಳ ಗಿರೀಶ ಭಟ್
ಬಂಟ್ವಾಳ

ಸ್ವಾತಂತ್ರ್ಯಪೂರ್ವದಲ್ಲಿ ಅಥವಾ ಕನ್ನಡದ ನವೋದಯ ಸಾಹಿತ್ಯದ ಕಾಲದಲ್ಲಿ ರಾಷ್ಟ್ರಭಕ್ತಿ ಅಥವಾ ದೇಶಭಕ್ತಿ ಎನ್ನುವುದು ಒಂದು ಆದರ್ಶವಾಗಿತ್ತು. ನವೋದಯ ಕಾಲದಲ್ಲಿ ಬಹಳಷ್ಟು ಕವಿತೆಗಳು ರಾಷ್ಟ್ರಭಕ್ತಿಯ ಆಶಯದೊಂದಿಗೆ ಬಂದವು. ಆದರೆ ಕಳೆದ ಸುಮಾರು ಇಪ್ಪತ್ತು ಮೂವತ್ತು ವರ್ಷಗಳಿಂದ ರಾಷ್ಟ್ರ ಎಂಬ ಪರಿಕಲ್ಪನೆಯ ಸುತ್ತಮುತ್ತ ಸ್ವಲ್ಪ ಬೇರೆಯೇ ರೀತಿಯಲ್ಲಿ ಚರ್ಚೆಗಳು ನಡೆಯುತ್ತಿವೆ. 1990ರ ದಶಕದಲ್ಲಿ ಡಿ.ಆರ್. ನಾಗರಾಜ್‌ರಂಥವರಿಂದ ಕನ್ನಡದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದ ಆಧುನಿಕೋತ್ತರವಾದ ಎಂಬ ಹೊಸ ವಾದವು ರಾಷ್ಟ್ರವಾದವನ್ನು ಒಂದು ಸಂಕುಚಿತವಾದ ಮತ್ತು ಆ ಕಾರಣದಿಂದ ಋಣಾತ್ಮಕ ಭಾವ ಎಂಬುದಾಗಿ ಚಿತ್ರಿಸಲು ಮೊದಲು ಮಾಡಿತು. ಅಲ್ಲದೆ ಕೆಲವು ವರ್ಷಗಳಿಂದೀಚೆಗೆ ದೇಶಭಕ್ತರು ಎಂದು ಹೇಳಿಕೊಳ್ಳುವವರು ಅಥವಾ ವಂದೇ ಮಾತರಂ ಎಂದು ಘೋಷಣೆ ಹಾಕುವವರು ಈ ದೇಶದಲ್ಲಿ ರಾಜಕೀಯವಾಗಿ ಪ್ರಬಲರಾಗತೊಡಗಿದಾಗ ಅವರನ್ನು ವಿರೋಧಿಸುವ ಒಂದು ಮಾರ್ಗವಾಗಿ ಅವರು ಯಾವುದನ್ನು ಆದರ್ಶ ಎಂದುಕೊಂಡಿದ್ದಾರೋ ಅದನ್ನು ವಿರೋಧಿಸುವುದೇ ಸರಿ ಎಂಬುದಾಗಿ ತೀರ್ಮಾನಿಸಿದ ಎಡಪಂಥೀಯ ಚಿಂತಕರು ದೇಶಭಕ್ತಿ, ರಾಷ್ಟ್ರಭಕ್ತಿ, ರಾಷ್ಟ್ರಭಾವ ಇವನ್ನೆಲ್ಲ ತಮ್ಮ ಟೀಕೆಗೆ ಗುರಿಯಾಗಿಸಲು ತೊಡಗಿದರು. ರಾಜಕೀಯ ಉದ್ದೇಶದ ಟೀಕೆ-ಪ್ರತಿಟೀಕೆಗಳು ಏನೇ ಇರಲಿ, ಒಂದು ದೇಶದ ಪ್ರಜೆಗಳಲ್ಲಿ ತಮ್ಮ ರಾಷ್ಟ್ರ ಸರಿಯಾದ ದಾರಿಯಲ್ಲಿ ಹೋಗಬೇಕಾದರೆ ಏನೇನು ಆದರ್ಶಗಳು, ಮೌಲ್ಯಗಳು ಇರಬೇಕು ಎಂಬ ಚಿಂತನೆ ನಡೆಯುತ್ತಿರಬೇಕು. ಸಾಮಾನ್ಯ ಜನರಲ್ಲಿ ಅಲ್ಲದಿದ್ದರೂ ಚಿಂತಕರು, ಸಾಹಿತಿಗಳು, ಬುದ್ಧಿಜೀವಿಗಳು-ಹೀಗೆ ಸಾಮಾನ್ಯ ಜನರ ಮೇಲೆ ಪ್ರಭಾವ ಬೀರಬಲ್ಲವರಲ್ಲಿ ಅಂಥ ಚಿಂತನೆ ಇರಬೇಕು. ನಮ್ಮ ಸಾಹಿತ್ಯ ಪರಂಪರೆಯಲ್ಲಿ ಆಗಿ ಹೋದ ಸಾಹಿತಿಗಳನ್ನು ಮತ್ತೆ ಮತ್ತೆ ಓದಿದಾಗ ಇಂಥ ಚಿಂತನೆಗೆ ದಿಕ್ಕು ಸಿಗುವಂತಾದೀತು.

ಈಗ ಗೋಪಾಲಕೃಷ್ಣ ಅಡಿಗರ ಜನ್ಮ ಶತಮಾನೋತ್ಸವ ಕಳೆದಿದೆ. ಅಡಿಗರು ತಮ್ಮ ಸಾಹಿತ್ಯಕ್ಕೆ ಎಷ್ಟು ಬದ್ಧರಾಗಿದ್ದರೋ ಅಷ್ಟೇ ಉತ್ಕಟವಾಗಿ ದೇಶದ ಆಗುಹೋಗುಗಳ ಬಗ್ಗೆಯೂ ಚಿಂತಿಸುತ್ತಿದ್ದರು. ಅಷ್ಟೇ ನಿಷ್ಠುರವಾಗಿ ಬರೆಯುತ್ತಲೂ ಇದ್ದರು. ಈ ವಿಚಾರದಲ್ಲಿ ಅಂದರೆ, ಪ್ರಭುತ್ವವನ್ನು ಲೆಕ್ಕಿಸದೆ, ಸ್ವಂತ ಹಿತಾಸಕ್ತಿಯನ್ನು ಕಡೆಗಣಿಸಿ ನಿಷ್ಠುರವಾಗಿ ದೇಶಕ್ಕೆ ಆಗಬೇಕಾದುದೇನು ಎಂಬ ಬಗ್ಗೆ ಬರೆದವರಲ್ಲಿ ಅವರ ಓರಗೆಯವರು ಬಹಳ ಮಂದಿ ಇಲ್ಲ. ಸ್ವಾತಂತ್ರ್ಯಾನಂತರದ ಭಾರತ ಕ್ರಮಿಸಿದ ದಾರಿ ಅವರನ್ನು ಭ್ರಮನಿರಸನಗೊಳಿಸಿತ್ತು. ಅಥವಾ ನೆಹರೂ ಬಗ್ಗೆ ಅವರಿಗಿರುವ ಸಿಟ್ಟನ್ನು ನೋಡಿದರೆ, ಸ್ವಾತಂತ್ರ್ಯಾನಂತರ ಎಲ್ಲವೂ ಒಳ್ಳೆಯದಾಗುತ್ತದೆ ಎಂಬ ಭ್ರಮೆ ಅವರಲ್ಲಿ ಇತ್ತು ಎಂದು ಹೇಳುವುದು ಕೂಡ ಕಷ್ಟವೇ! ಐವತ್ತು ವರ್ಷಗಳಿಗೂ ಹಿಂದೆ ಅಡಿಗರು ಬರೆದ ಲೇಖನಗಳಲ್ಲಿ ದೇಶದ ಹಿತಾಸಕ್ತಿಯಿಂದ ಕೆಲವು ದಾರ್ಶನಿಕ ಮಾತುಗಳನ್ನು ಹೇಳಿದುದು ಕಂಡುಬರುತ್ತದೆ. ಅದರಲ್ಲೂ ಅವರು

ಸರ್ವಾಧಿಕಾರದ ಬಗ್ಗೆ ಮತ್ತು ಎಡಪಂಥೀಯರ ಬಗ್ಗೆ 1960ರ ದಶಕದ ಆರಂಭದ ವರ್ಷಗಳಲ್ಲಿ ಬರೆದ ಮಾತು ಮುಂದೆ ನಿಜವೇ ಆಗಿ ಹೋಯಿತು. ಈ ಹಿನ್ನೆಲೆಯಲ್ಲಿ ದೇಶವನ್ನು ಸದೃಢವಾಗಿ ಕಟ್ಟಬೇಕಾದರೆ ಯಾವ ಧನಾತ್ಮಕ ಅಂಶಗಳನ್ನು ರೂಢಿಸಿಕೊಳ್ಳಬೇಕು? ವರ್ತಮಾನ ಕಾಲದಲ್ಲಿ ಸದೃಢ ದೇಶ ನಿರ್ಮಾಣಕ್ಕೆ ಇರುವ ಅಡ್ಡಿ ಯಾವುದು? ಮೊದಲಾದ ಪ್ರಶ್ನೆಗಳಿಗೆ ಉತ್ತರವಾಗಿ ಅಡಿಗರು ಪ್ರತಿಪಾದಿಸಿದ ಅಂಶಗಳ ಪ್ರಸ್ತುತತೆಯನ್ನು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಈ ಲೇಖನವು ಅಡಿಗರ ಗದ್ಯ ಲೇಖನಗಳನ್ನು ಮಾತ್ರ ಮುಖ್ಯವಾಗಿ ಪರಿಗಣಿಸಿದೆ. ಆದರೆ ಅಡಿಗರು ತಮ್ಮ ಕಾವ್ಯದಲ್ಲಿ ಹೇಳಿದ್ದನ್ನೇ ಬೇರೆ ನುಡಿಗಟ್ಟುಗಳ ಮೂಲಕ ಗದ್ಯದಲ್ಲಿ ಹೇಳಿದರು. ಇದನ್ನು ಅವರೇ ಸ್ಪಷ್ಟಪಡಿಸಿದ್ದಾರೆ. 1977ರಲ್ಲಿ ಪ್ರಕಟವಾದ 'ಸಮಗ್ರ ಗದ್ಯ' ಕೃತಿಯ ಮುನ್ನುಡಿಯಲ್ಲಿ ಅವರು ಹೀಗೆ ಹೇಳಿದ್ದಾರೆ. "ವಿಚಾರ ಪ್ರಧಾನವಾದ ಈ ಪ್ರಬಂಧಗಳಲ್ಲಿ ನಾನು ನನ್ನ ಕಾವ್ಯದಲ್ಲಿ ಹೇಳದೆ ಇರುವುದು ಯಾವುದೂ ವ್ಯಕ್ತಗೊಂಡಿಲ್ಲ. ಅಲ್ಲಿ ಅನುಭವ ಚಿತ್ರಗಳಾಗಿ ವ್ಯಕ್ತಗೊಂಡ ವಿಚಾರಗಳೂ ಕಲ್ಪನೆಗಳೂ ಇಲ್ಲಿ ಪ್ರಜ್ಞೆಯ ಸ್ತರದಲ್ಲಿ ಶುದ್ಧ ಗದ್ಯದಲ್ಲಿ ಸ್ಪಷ್ಟತೆ, ಅಸಂದಿಗ್ಧತೆಗಳನ್ನೇ ಗುರಿಯಾಗಿಟ್ಟುಕೊಂಡು ಪ್ರಕಟವಾಗಿವೆ. ಅಂತರಂಗದ ಚಿಂತನ, ಅನುಭವ; ಬಹಿರಂಗದ ಮಾತು, ನಡವಳಿಕೆ: ಕಾವ್ಯದಲ್ಲಿ ವ್ಯಕ್ತವಾಗುವ ಈ ಎರಡರ ಸಮನ್ವಯ; ಈ ಎಲ್ಲವನ್ನೂ ಒಂದೇ ಬದುಕಿನ ಮೂಲ ಸೂತ್ರಗಳನ್ನಾಗಿ ಮಾಡುವ ಯತ್ನ ನನ್ನ ಬರವಣಿಗೆಯಲ್ಲಿ ಕಾಣಬಹುದು."(ಸಾಕ್ಷಿ ಪ್ರಜ್ಞೆ, ಪು.3) ಹಾಗೆ ನೋಡಿದರೆ ಅಡಿಗರ ಒಟ್ಟಾರೆ ವಿಚಾರಧಾರೆ ಅವರ ಕಾವ್ಯದಲ್ಲಿ ವ್ಯಕ್ತವಾದಷ್ಟು ವಿಸ್ತಾರವಾಗಿ ಅವರ ಗದ್ಯದಲ್ಲಿ ಸಿಗಲಾರದು. ದೇಶದ ಆಗುಹೋಗುಗಳಿಗೆ ಸಂಬಂಧಿಸಿದ ಕೆಲವು ವಿಚಾರಗಳು ಅಡಿಗರನ್ನು ತೀವ್ರವಾಗಿ ಕಾಡುತ್ತಿದ್ದುದರಿಂದ ಎಷ್ಟೋ ಲೇಖನಗಳಲ್ಲಿ ಅಂಥ ವಿಚಾರಗಳು ಪುನರುಕ್ತವಾಗುತ್ತವೆ. ಒಂದೇ ಲೇಖನವನ್ನು ಮತ್ತೆ ಮತ್ತೆ ಓದಿದಂತೆ ಅನಿಸುವುದೂ ಇದೆ. ಇದು ಮಿತಿ ಎಂದಲ್ಲ. ಸಂದರ್ಭಕ್ಕೆ ಪ್ರತಿಕ್ರಿಯಿಸುವ ಲೇಖನಗಳು ಹೀಗಾಗುವುದು ಸಹಜವೇ. ಹೀಗಾಗಿ ಪದ್ಯಗಳಿಗೆ ಹೋಲಿಸಿದರೆ ಅವರು ಬರೆದ ಗದ್ಯಲೇಖನಗಳು ತುಂಬ ಕಡಮೆಯೇ. ಒಟ್ಟಾರೆಯಾಗಿ ಅವರ ಕಾವ್ಯದಲ್ಲಿ ಇಲ್ಲದ್ದು ಗದ್ಯದಲ್ಲಿ ಇಲ್ಲ. ಗದ್ಯದಲ್ಲಿ ಇಲ್ಲದ್ದು ಪದ್ಯದಲ್ಲಿ ಇರಬಹುದು.

ನಾಡು ಕಟ್ಟುವುದು ಅಡಿಗರಿಗೆ ದೊಡ್ಡ ಆದರ್ಶವೇ ಆಗಿತ್ತು. ಅವರ ಅತಿ ಪ್ರಸಿದ್ಧವಾದ ಕವಿತೆಗಳಲ್ಲಿ ಒಂದಾದ 'ಕಟ್ಟುವೆವು ನಾವು' ಕವಿತೆಯಲ್ಲಿ ಹೊಸ ನಾಡೊಂದನ್ನು ಕಟ್ಟುವ ಬಗ್ಗೆ ಹೇಳುತ್ತಾರೆ. ಇರುವ ನಾಡು ಸರಿಯಿಲ್ಲವಾದ್ದರಿಂದ ಹೊಸನಾಡನ್ನು ಕಟ್ಟಬೇಕಾಗಿದೆ. ಅವರ ಕಲ್ಪನೆಯ ಹೊಸನಾಡನ್ನು ಕಟ್ಟಲು ಹೊರಡುವವರನ್ನು ತಡೆಯುವವರಿಗೆ ಅವರು ರಣವೀಳ್ಯ ಕೊಡುತ್ತಾರೆ. "ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ ಕಟ್ಟುವೆವು ನಾವು ಹೊಸ ನಾಡೊಂದನು – ಸುಖದ ಬೀಡೊಂದನು!" ಎನ್ನುತ್ತಾರೆ. ದೇಶದ ವಿಚಾರಕ್ಕೆ ಬಂದಾಗ ಈ ತೀವ್ರತೆ ಅವರ ಗದ್ಯದಲ್ಲೂ ಕಂಡುಬರುತ್ತದೆ.

'ಭಾವನೆಗಳನ್ನು ಬುದ್ಧಿಯಿಂದ ಸೋಸುವುದು' ಅಡಿಗರಿಗೆ ಬಹಳ ಮುಖ್ಯವಾಗಿತ್ತು (ಗಿರೀಶ್ ವಿ ವಾಘ್; ಪ್ರತಿಮಾಲೋಕ, ಪು.135). ಅಡಿಗರ ಲೇಖನಗಳು ಹಾಗೆ ಸೋಸಿ ಸೃಷ್ಟಿಯಾದವುಗಳು. ನೈತಿಕತೆ, ಸ್ವಾತಂತ್ರ್ಯ, ವ್ಯಕ್ತಿವಿಶಿಷ್ಟತೆ, ಪ್ರಜಾಪ್ರಭುತ್ವ, ಸಮಾನತೆ, ಜಾತಿಮತ ಮೀರಿದ ಮಾನವೀಯತೆ ಇವೆಲ್ಲ ಮೌಲ್ಯಗಳನ್ನು ಅಡಿಗರು ಪ್ರತಿಪಾದಿಸುತ್ತಾರೆ. ಅದೇ ರೀತಿ ಈ ಮೌಲ್ಯಗಳು ಸಾಕಾರಗೊಳ್ಳಲು ಇರುವ ಅಡ್ಡಿ ಆತಂಕಗಳೇನು ಎಂಬುದನ್ನು ಕೂಡ

ಅವರು ಹೇಳುತ್ತಾರೆ. ಅನೈತಿಕತೆ, ಸರ್ವಾಧಿಕಾರ ಪ್ರವೃತ್ತಿ, ಭ್ರಷ್ಟಾಚಾರ, ಜಾತಿಯನ್ನೇ ಬಂಡವಾಳ ಮಾಡಿಕೊಳ್ಳುವುದು, ವ್ಯಕ್ತಿವಿಶಿಷ್ಟತೆಗೆ ಆಸ್ಪದ ನೀಡದ ಸಮಾಜವಾದ ಮತ್ತು ಸಮತಾವಾದ, ಆಷಾಢಭೂತಿತನ ಇತ್ಯಾದಿ. ಅವರ ಬರಹಗಳಲ್ಲಿ ವ್ಯಕ್ತವಾಗುವಂತೆ ಪ್ರಜಾಪ್ರಭುತ್ವವೇ ಇತರೆಲ್ಲ ಮೌಲ್ಯಗಳಿಗೆ ತಾಯಿ. ಹೀಗಾಗಿ ಪ್ರಜೆಗಳು ಪ್ರಜಾ ರಾಜ್ಯಕ್ಕೆ ಬೇಕಾದ ಮನೋಭಾವಗಳನ್ನು ರೂಢಿಸಿಕೊಳ್ಳುವುದು ಅತ್ಯಂತ ಅಗತ್ಯ. ಸ್ವಾತಂತ್ರ್ಯಾನಂತರದ ಮೊದಲ ವರ್ಷಗಳಲ್ಲಿ ಪ್ರಭುತ್ವಕ್ಕೆ ಪ್ರಜೆಗಳು ವಿಧೇಯರಾಗಿದ್ದ ಪರಿ ಅಡಿಗರಿಗೆ ಸಮಾಧಾನ ತಂದಿರಲಿಲ್ಲ. ಅಡಿಗರ ದೃಷ್ಟಿಯಲ್ಲಿ ಇದ್ದುದು ಸಾಮಾನ್ಯ ಜನರಲ್ಲ; ಬದಲಾಗಿ ಸಮಾಜದಲ್ಲಿ ತಕ್ಕಮಟ್ಟಿನ ಸ್ಥಾನಮಾನ ಹೊಂದಿದ್ದ ಮತ್ತು ಸಮಾಜದ ಮೇಲೆ ಪ್ರಭಾವ ಬೀರಬಲ್ಲ ವರ್ಗದ ಜನರು ಎಂಬುದನ್ನು ಸುಲಭವಾಗಿ ಊಹಿಸಬಹುದು.

ನಿಜವಾದ ಪ್ರಜಾಪ್ರಭುತ್ವ ರೂಢಿಯಾಗಿಲ್ಲದೇ ಇರಲು ಅಥವಾ ಪ್ರಜೆಗಳಿಗೆ ತಮ್ಮ ಸ್ವಾಮಿತ್ವ ಮನವರಿಕೆಯಾಗದೇ ಇರಲು ನಮ್ಮ ಚರಿತ್ರೆಯಲ್ಲಿ ಕಾರಣವನ್ನು ಅಡಿಗರು ಗುರುತಿಸುತ್ತಾರೆ. “ರಾಜ ಮಹಾರಾಜರುಗಳು ಅಧಿಕಾರ ನಡೆಸುತ್ತಿದ್ದ ಕಾಲದಲ್ಲಿ ನಾವು ಇಲ್ಲಿ ಕಲಿಯಬೇಕಾಗಿ ಬಂದಿದ್ದ ಸ್ವಾಮಿಭಕ್ತಿ, ರಾಜಭಕ್ತಿ, ವಿಧೇಯತೆ ಮುಂತಾದ ಮೌಲ್ಯಗಳು ನಮ್ಮೊಳಕ್ಕೆ ತೀರಾ ಆಳವಾಗಿ ಇಳಿದು ಬೇರುಬಿಟ್ಟಿವೆ. ಆ ಸಂಪ್ರದಾಯದಿಂದ ತಪ್ಪಿಸಿಕೊಳ್ಳದೆ ಇಂದಿನ ಪ್ರಜಾರಾಜ್ಯಕ್ಕೆ ಅನುಗುಣವಾದ ಸ್ವಾತಂತ್ರ್ಯ, ಸಮಾನತೆಗಳೆಂಬ ಆಧುನಿಕ ಮೌಲ್ಯಗಳನ್ನು ರಕ್ತಗತ ಮಾಡಿಕೊಳ್ಳುವುದು ಸಾಧ್ಯವಿಲ್ಲ...” (ಸಾಕ್ಷಿ ಪ್ರಜ್ಞೆ, ಪು.6–7). ಅಡಿಗರು ಹೇಳುವಂತೆ ಸ್ವಾತಂತ್ರ್ಯ ಬಂತು ಎಂದು ಮೈಮರೆತುದರ ಪರಿಣಾಮವನ್ನು ಭಾರತ ಎದುರಿಸಬೇಕಾಯಿತು. ಅವರ ಪ್ರಕಾರ, “ಸ್ವಾತಂತ್ರವೆಂಬ ಈ ಹೊಸಮೌಲ್ಯ ಅತ್ಯಂತ ಕೋಮಲವಾದುದು. ತುಂಬ ಜೋಕೆಯಿಂದ ಆರಯ್ದು ಉಳಿಸಿಕೊಳ್ಳಬೇಕಾದಂಥದು. ಅದು ಇದ್ದೇ ಇದೆಎಂದು ಮೈಮರೆತರೆ, ಅದನ್ನು ಗೃಹೀತಕೃತ್ಯವನ್ನಾಗಿ ಅಷ್ಟೇ ಮಾಡಿಕೊಂಡು ಸಮಾನತೆಯ ಕೂಗೆಬ್ಬಿಸ ತೊಡಗಿದರೆ ಅದು ಹೇಗೆ ಇಲ್ಲವಾಗುತ್ತದೆ ಎಂಬ ಘೋರ ಸತ್ಯವನ್ನು ಇತ್ತೀಚಿನ ನಮ್ಮ ದೇಶದ ವಿದ್ಯಮಾನಗಳು ರುಜುವಾತು ಪಡಿಸುತ್ತವೆ. ಸಮಾಜವಾದದ ಕನಸಿನಲ್ಲೋ ಘೋಷಣೆಯಲ್ಲೋ ಮೈಮರೆತ ನಮ್ಮ ಧೀಮಂತರು ಮೂವತ್ತು ವರ್ಷಗಳ ಕಲ ಸ್ವಾತಂತ್ರ್ಯ ಎಂಬ ಮೌಲ್ಯ ಇಂದಿನ ಬದುಕಿಗೆ ಅತ್ಯಗತ್ಯ, ಇಂದಿನ ಸರಕಾರಗಳಿಗೆ ದೊರೆಯುವ ಅಭೂತಪೂರ್ವ ಶಕ್ತಿಯ ಕಾರಣವಾಗಿ ಸರ್ವಾಧಿಕಾರ ಸದಾ ಸನ್ನಿಹಿತ ಎಂಬ ಸತ್ಯವನ್ನು ಮರೆತು ಬಿಟ್ಟಿದ್ದರು. ಅದು ಸುತ್ತಮುತ್ತಲಿನ ವಾತಾವರಣದಷ್ಟೇ ಸಹಜವೆಂದು ತಿಳಿದುಬಿಟ್ಟಿದ್ದರು. ಈಗ ಅರ್ಥವಾಗಿರಬೇಕು: ವಾತಾವರಣದಲ್ಲಿರುವ ವಿಷ ಯಾವಾಗ ಅಪಾಯದ ಗೆರೆಯನ್ನು ದಾಟುತ್ತದೆ ತಿಳಿಯದು. ಸ್ವಾತಂತ್ರ್ಯವೆಂಬ ಮೌಲ್ಯವನ್ನು ರೂಢಿಸಿಕೊಳ್ಳದೆ ದೇಶದ ಕೆಲಸವನ್ನೆಲ್ಲ ತಾನೇ ಮಾಡುತ್ತೇನೆಂದು ಗುತ್ತಿಗೆಗೆ ತೆಗೆದುಕೊಳ್ಳುವ ‘ಮಾ–ಬಾಪ್’ ಸರಕಾರಕ್ಕೆ ಎಡೆ ಮಾಡಿಕೊಟ್ಟರೆ ಅದು ಸರ್ವಾಧಿಕಾರಕ್ಕೆ ನುಗ್ಗುತ್ತದೆ ಎಂಬ ಸತ್ಯ ಈಗ ಮನವರಿಕೆಯಾಗಿದೆ. ಇದೇ ಸತ್ಯವನ್ನು ಈಗ ಇಪ್ಪತ್ತು ವರ್ಷಗಳಿಂದಲೂ ಕಂಡುಕೊಂಡೂ ಸಾರುತ್ತ ಬಂದ ನನ್ನಂಥವನಿಗೆ ಈ ಬೆಳವಣಿಗೆಯಿಂದ ಸಂತೋಷವಾಗುವುದು ಹೇಗೆ?...”(ಸಾಕ್ಷಿ ಪ್ರಜ್ಞೆ, ಪು.7). ಅಂದರೆ, ಅರಣ್ಯ ರೋದನವೆಂಬಂತೆ ಅಡಿಗರು ನೆಹರೂ ಆಡಳಿತ ಶೈಲಿಯ ಬಗ್ಗೆ ಟೀಕಿಸುತ್ತಲೇ ಇದ್ದರೂ ಪ್ರಾಜ್ಞರು ಅನಿಸಿಕೊಂಡವರು ಕೇಳಿಸಿಕೊಳ್ಳಲಿಲ್ಲ ಎಂಬ ವಿಷಾದ 1977ರಲ್ಲಿ ಇದನ್ನು ಬರೆಯುವಾಗ ಅವರಲ್ಲಿ ಕಾಣುತ್ತದೆ.

ಭಾರತದ ಆಗಿನ ಸ್ಥಿತಿ ನೋಡಿ ಅಡಿಗರಲ್ಲಿ ಎಷ್ಟು ವಿಷಾದ, ಸಿಟ್ಟು ಇತ್ತು ಎನ್ನುವುದಕ್ಕೆ

ಈ ದೇಶ ಸ್ವಾತಂತ್ರ್ಯದ ಮೂಲಕ ಪ್ರಜಾತಂತ್ರವನ್ನು ಗಳಿಸಿದ ಬಗೆಯನ್ನೇ ಅವರು ವಿಡಂಬಿಸುವುದೇ ಸಾಕ್ಷಿ. "ಬ್ರಿಟಿಷರನ್ನು ನಾವು ಭಾರಿ ಕಷ್ಟಪಟ್ಟು ಅಹಿಂಸಾ ಮಾರ್ಗದಿಂದಲೇ ಶಪಿಸುತ್ತ, ಬೈಯುತ್ತ, ಆಗಾಗ ಹಿಂಸಾಮಾರ್ಗವನ್ನು ಕೂಡಾ ಅನುಸರಿಸಿ–ಏಕೆಂದರೆ ನಮಗೆ ಅಹಿಂಸೆಯೊಂದೇ ಗೊತ್ತು, ಹಿಂಸೆ ಗೊತ್ತಿಲ್ಲ ಬೆಪ್ಪರು ಎಂದು ಯಾರಾದರೂ ಅಂದಾರು ಎಂಬ ಆತ್ಮಾಭಿಮಾನದಿಂದ–ಹಿಂಸಾಹಿಂಸೆಗಳ ವಿಶಿಷ್ಟ ಮಾರ್ಗದಲ್ಲಿ ಭಾರತಕ್ಕೇ ವಿಶಿಷ್ಟವಾದ, ಲೋಕಕ್ಕೇ ಉದಾಹರಣೆ ಆಗುವ ರೀತಿಯಲ್ಲಿ ಬ್ರಿಟಿಷರನ್ನು ಓಡಿಸಿ, ಸ್ವತಂತ್ರವಾಗಿ ಭಾರೀ ಯೋಚನೆ ಮಾಡಿ ಸುಲಭದಲ್ಲಿ ನಮ್ಮ ಈ ಮಹಾ ದೇಶದಲ್ಲಿ ಅತಂತ್ರವಾಗಿ ಮಾರ್ಪಡಬಲ್ಲ ಪ್ರಜಾತಂತ್ರವನ್ನು ಸ್ಥಾಪಿಸಿಕೊಂಡೆವು"(ಸಾಕ್ಷಿ ಪ್ರಜ್ಞೆ, ಪು.375).

ಸ್ವಾತಂತ್ರ್ಯವನ್ನು ಎರಡು ವಿಭಾಗಗಳಲ್ಲಿ ಅಡಿಗರು ಗುರುತಿಸುತ್ತಾರೆ. ಒಂದನೆಯದು ಬಾಹ್ಯ ಸ್ವಾತಂತ್ರ್ಯ. ಎರಡನೆಯದು ಅಂತಃಸ್ವಾತಂತ್ರ್ಯ. ಬಾಹ್ಯ ಸ್ವಾತಂತ್ರ್ಯ ಸಿದ್ಧಿಸಿದಾಗಲೇ ಅಂತಃಸ್ವಾತಂತ್ರ್ಯದ ಪ್ರಶ್ನೆ ಹುಟ್ಟುತ್ತದೆ. ಆದರೆ ಅಡಿಗರ ಪ್ರಕಾರ ಭಾರತದಲ್ಲಿ ಅಂತಃಸ್ವಾತಂತ್ರ್ಯ ಸಿದ್ಧಿಸಲು ಬೇಕಾದ ವಾತಾವರಣವೇ ಇಲ್ಲ. ಮುಖ್ಯವಾದ ಸಮಸ್ಯೆ ನಾಯಕರ ನೈತಿಕತೆಯದು. ದೇಶಕ್ಕಾಗಿ ತ್ಯಾಗ ಮಾಡಿದ್ದೇವೆ ಎಂದು ಹೇಳಿಕೊಳ್ಳುವವರನ್ನು ಅಡಿಗರು ಕಟುವಾಗಿ ಟೀಕಿಸುತ್ತಾರೆ. ಗಾಂಧೀವಾದಿಗಳು ಗಾಂಧೀವಾದವನ್ನು ತ್ಯಾಗ ಮಾಡಿದರು. ಮರ್ಯಾದೆ, ಆತ್ಮಗೌರವ ಇತ್ಯಾದಿ ಶಾಶ್ವತವಾದುದನ್ನೇ ತ್ಯಾಗ ಮಾಡಿ ದೊಡ್ಡ ತ್ಯಾಗಿಗಳು ಎನಿಸಿಕೊಂಡರು ಎಂದು ಅಡಿಗರು ಹೇಳುತ್ತಾರೆ. ರಾಷ್ಟ್ರೀಯತೆಯ ಮುಖ್ಯ ದ್ರವ್ಯವೇ ನೈತಿಕತೆ ಆಗಿರಬೇಕು. ಆತ್ಮಸಾಕ್ಷಿಗೆ ಅನುಗುಣವಾದ ಸಾಕ್ಷಿಪ್ರಜ್ಞೆ ಇರಬೇಕು ಎಂದು ಅವರು ಪ್ರತಿಪಾದಿಸಿದರು. ಅಡಿಗರ ನೈತಿಕತೆ ಅಪ್ರಾಯೋಗಿಕವಾದುದಲ್ಲ. ವಾಸ್ತವದಲ್ಲಿ ಅನುಷ್ಠಾನಕ್ಕೆ ತರಲಾಗದ ಆದರ್ಶದ ಹಿಂದೆ ಹೋದರೆ ಸಾಧ್ಯವಿರುವ ಗುರಿಯೂ ಈಡೇರದು ಎಂಬ ಎಚ್ಚರ ಅಡಿಗರಲ್ಲಿ ಇತ್ತು.

ರಾಷ್ಟ್ರ ಎಂದ ಬಳಿಕ ಒಂದು ಆಡಳಿತ ವ್ಯವಸ್ಥೆ ಬೇಕು. ಪ್ರಜಾಪ್ರಭುತ್ವ ಎಂಬ ಭಾರತದ ಆಡಳಿತ ವ್ಯವಸ್ಥೆಯಲ್ಲಿ ರಾಜಕೀಯವು ಸರ್ವವ್ಯಾಪಿಯಾದುದರಿಂದ ಅದನ್ನು ಅಡಿಗರು ಆಧುನಿಕ ದೇವರು ಎಂದು ಕರೆಯುತ್ತಾರೆ. ಅದು ಸರ್ವವ್ಯಾಪಿಯಾಗಿರುವುದರಿಂದಲೇ ಪ್ರತಿಯೊಬ್ಬನೂ ರಾಜಕೀಯದ ತತ್ವಗಳನ್ನು ತಿಳಿದಿರಬೇಕು. ರಾಜಕೀಯದ ಚಿಂತೆ ತನಗೆ ಬೇಡ ಎಂದು ಪ್ರಜೆಗಳು ಹೇಳುವಂತಿಲ್ಲ ಎಂದು ಅಡಿಗರು ಪುನಃ ಪುನಃ ಹೇಳುತ್ತಾರೆ. ಡಿ.ವಿ.ಗುಂಡಪ್ಪನವರೂ ಇದನ್ನು ಬಹಳ ಬಲವಾಗಿ ಪ್ರತಿಪಾದಿಸುತ್ತಿದ್ದರು. ಅಡಿಗರು ಹೇಳುವಂತೆ, "ಪ್ರಜಾತಂತ್ರ ಎಂದರೆ, ಪ್ರತಿಯೊಬ್ಬ ಪ್ರಜೆಯೂ ರಾಜಕಾರಣಭಾರದಲ್ಲಿ ಪಾಲುದಾರನಾಗುವುದು. ಇದರ ಹಿಂದಿನ ಸೂತ್ರವೆಂದರೆ ಈ ದೇಶದಲ್ಲಿರುವ ಎಲ್ಲ ಜನರೂ ಸಮಾನರು, ಪ್ರತಿಯೊಬ್ಬರೂ ಸ್ವತಂತ್ರ, ಪರಸ್ಪರ ಗೌರವದೊಂದಿಗೆ ದೇಶದ ಆಗುಹೋಗುಗಳನ್ನು ಜೊತೆಗೂಡಿ ನೋಡಿಕೊಳ್ಳುವುದು"(ಸಾಕ್ಷಿ ಪ್ರಜ್ಞೆ, ಪು. 376).

ಅಡಿಗರು ತಮ್ಮ ಕಾಲದ ಆಳುವವರನ್ನು ಟೀಕಿಸುವಾಗ ರಾಜ್ಯ(ಸ್ಟೇಟ್ ಎಂಬರ್ಥದಲ್ಲಿ) ಅಥವಾ ಪ್ರಭುತ್ವ ಎಂಬ ವ್ಯವಸ್ಥೆಯನ್ನು ವಿರೋಧಿಸಿದ್ದಲ್ಲ. ನಿರ್ದಿಷ್ಟವಾಗಿ ನಿರ್ದಿಷ್ಟ ಆಡಳಿತಗಾರರನ್ನು ಟೀಕಿಸಿದ್ದು ಅವರು. ಜನರ ಭಾಗಿದಾರಿಕೆ ಬಗ್ಗೆ ಅಡಿಗರು ಅಷ್ಟು ಒತ್ತು ಕೊಟ್ಟದ್ದು ಯಾಕೆ ಎನ್ನುವುದು ಕೂಡ ಸ್ಪಷ್ಟ. ಸರ್ವವ್ಯಾಪಿಯಾಗಬಲ್ಲ ಸರ್ವಾಧಿಕಾರದ ಬಗ್ಗೆ ಅವರಿಗೆ ಮೊದಲಿನಿಂದಲೂ ಆತಂಕ ಇತ್ತು. "ನಮ್ಮ ದೇಶ ಈಗ ಪ್ರಗತಿವಾದಿಗಳಿಂದ, ಸಮಾಜವಾದಿಗಳಿಂದ, ವಾಮಮಾರ್ಗಾನುಸಾರಿಗಳಿಂದ, ವಾಮಾಚಾರದವರಿಂದ ತುಂಬಿ ಹೋಗಿದೆ."(ಸಾಕ್ಷಿ ಪ್ರಜ್ಞೆ, ಪು.306). ನೆಹರೂ ಅವರು ಸಾಮ್ಯವಾದಿಗಳ ಜೊತೆ

ಮಾಡಿಕೊಂಡ ಹೊಂದಾಣಿಕೆಯೇ ಅಡಿಗರ ಆತಂಕಕ್ಕೆ ಕಾರಣ. "...ತಾವು ಅತ್ಯಾಧುನಿಕರು ಎಂದು ಹೇಳಿಕೊಳ್ಳುವ ನಮ್ಮ ಧುರೀಣರಿಗೆ, ಈ ಇಪ್ಪತ್ತನೆಯ ಶತಮಾನದ ಮುಖ್ಯ ಗಂಡಾಂತರ ಸಾಮ್ಯವಾದಿ ಸರ್ವಾಧಿಕಾರದ ಆಕ್ರಮಣಶೀಲತೆ ಎಂಬ ಅರಿವು ಇರುವ ಸೂಚನೆ ಕಿಂಚಿತ್ತಾದರೂ ಈವರೆಗೆ ವ್ಯಕ್ತವಾಗದೆ ಇದ್ದದ್ದು ಪರಮಾಶ್ಚರ್ಯ. ಚುನಾವಣೆಗಳ ಕಾಲದಲ್ಲಿ ಮಾತ್ರ ಭಾರತೀಯ ಕಮ್ಯುನಿಸ್ಟ್ ಪಕ್ಷ ಹೊರಗಡೆಯಿಂದ ಸ್ಫೂರ್ತಿ ಪಡೆಯುತ್ತದೆ ಎಂಬ ಟೀಕೆಯನ್ನು ನಾವು ಪ್ರಭುವರ್ಗದಿಂದ ಕೇಳುತ್ತೇವಲ್ಲದೆ ಆ ಪಕ್ಷದ ಮೂಲ ನೀತಿ ಸಿದ್ಧಾಂತಗಳ ಕಾರ್ಯಕ್ರಮಗಳ ಅಪಾಯವನ್ನು ನಮ್ಮ ಜನತೆ ಅರಿಯುವ ಹಾಗೆ ಮಾಡಲು ಯಾವ ಕೆಲಸವನ್ನು ಈವರೆಗೆ ಮಾಡಲಿಲ್ಲ. ಆ ಪಕ್ಷ ತಮ್ಮ ಪಕ್ಷದ ಅಧಿಕಾರಕ್ಕೆ ಮಾರಕವಾಗದೆ ಇರಬೇಕಾದರೆ ಅದರ ಸಿದ್ಧಾಂತಗಳನ್ನೂ, ಕಾರ್ಯವಿಧಾನಗಳನ್ನೂ ತಮ್ಮ ಕಾರ್ಯಕ್ರಮದೊಳಕ್ಕೆ ಸೇರಿಸಿಕೊಳ್ಳುವುದೇ ಸರಿಯಾದ ದಾರಿ ಎಂದು ನಮ್ಮ ಸರಕಾರ ತಿಳಿದ ಹಾಗೆ ತೋರುತ್ತದೆ. ಈ ಬಗೆಯ ಚಾಣಾಕ್ಷತನ ಆತ್ಮಘಾತಕ ಎಂದು ನಮ್ಮ ಪ್ರಭುಗಳಿಗೆ ತಿಳಿಯದೆ ಇದ್ದದ್ದು ಇನ್ನೊಂದು ಆಶ್ಚರ್ಯ"(ಸಾಕ್ಷಿ ಪ್ರಜ್ಞೆ, ಪು.264). ಇನ್ನೊಬ್ಬರನ್ನು ಆಶ್ರಯಿಸಿ ತಮ್ಮ ಕೆಲಸ ಮಾಡಿಸಿಕೊಳ್ಳುವ ಸಾಮ್ಯವಾದಿಗಳ ಜಾಣ್ಮೆಯನ್ನೂ ಅಡಿಗರು ಗುರುತಿಸಿ ಹೇಳುತ್ತಾರೆ. "ಈ ಪರಿಸ್ಥಿತಿಯಲ್ಲಿ ನಮ್ಮ ಕಮ್ಯುನಿಸ್ಟ್ ಪಕ್ಷ ಕಾಂಗ್ರೆಸ್ ಸರಕಾರವನ್ನು, ಮುಖ್ಯವಾಗಿ ಅದರೊಳಗಿರುವ 'ಪ್ರಗತಿವಾದಿ'ಗಳನ್ನು ಮೆಚ್ಚುತ್ತ ಕಾಂಗ್ರೆಸ್ ಸಂಸ್ಥೆಯ ಮೂರ್ತಸ್ವರೂಪರಾದ ನಮ್ಮ ಪ್ರಧಾನಿಯವರ ಅವಿಚ್ಛಿನ್ನ ಭಕ್ತರ ಹಾಗೆ ನಟಿಸುತ್ತಿರುವುದರಲ್ಲಿ ಯಾವ ವಿಶೇಷವೂ ಇಲ್ಲ... ಇಂಥ ಗಂಡಾಂತರ ದೇಶದೊಳಗೆ ಬೆಳೆಯುತ್ತ ಬಂದು, ಹೊರಗಡೆಯಿಂದ ಚೀನೀಯರ ಆಕ್ರಮಣ ರೂಪದಲ್ಲಿ ಅದು ಸಾಕಾರಗೊಂಡಿರುವಾಗಲೂ ಇದು ಕಮ್ಯುನಿಸ್ಟ್ ಸಿದ್ಧಾಂತದ ಅಪಾಯವಲ್ಲ, ಚೀನಾದೇಶದ ಸಾಮ್ರಾಜ್ಯವಾದಿ ಬುದ್ಧಿಯ ಫಲ ಎಂದು ನಮ್ಮ ಸರಕಾರ ನಮಗೆ ಹೇಳುತ್ತದೆ"(ಸಾಕ್ಷಿ ಪ್ರಜ್ಞೆ, ಪು.64–265). ನಮ್ಮ ಸ್ವತಂತ್ರ ಭಾರತವು ಸಮಾಜವಾದಿವೀರರ ದಾಳಿಗೆ ತುತ್ತಾಗಿದೆ ಎಂದು ಇನ್ನೊಂದೆಡೆ ಅಡಿಗರು ಹೇಳುತ್ತಾರೆ (ಸಾಕ್ಷಿ ಪ್ರಜ್ಞೆ, ಪು.82).

ಎಡಪಂಥೀಯರ ಬಗ್ಗೆ ಪದ್ಯಗಳಲ್ಲೂ ಅಡಿಗರು ಸಾಕಷ್ಟು ವಿಡಂಬನೆ ಮಾಡಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಅಡಿಗರ ಕಾವ್ಯದ ಬಗ್ಗೆ ಮೆಚ್ಚಿ ಮಾತನಾಡುವ, ಬರೆಯುವ ವಿಮರ್ಶಕರು ಯಾರೂ ಅಡಿಗರ ರಾಜಕೀಯ ಧೋರಣೆ ಪ್ರತಿಗಾಮಿಯಾದುದು ಎಂದು ಹೇಳಲು ಮರೆಯುವುದಿಲ್ಲ. ಇದಕ್ಕೆ ಕಾರಣ ಸಹಜವಾಗಿಯೇ ಅಡಿಗರ ಕಮ್ಯೂನಿಸ್ಟ್ ವಿರೋಧಿ ಧೋರಣೆ. ಆದರೆ ಕಮ್ಯೂನಿಸ್ಟರ ಬಗ್ಗೆ ಮೇಲೆ ಉದ್ಧರಿಸಿದ ಮಾತುಗಳನ್ನು ಅಡಿಗರು 1963ರಲ್ಲಿ ಬರೆದುದು ಎನ್ನುವುದನ್ನು ನೆನಪು ಮಾಡಿಕೊಳ್ಳುತ್ತಲೇ, 1970ರ ದಶಕದಿಂದ ಕಮ್ಯುನಿಸ್ಟರ ಆಡಳಿತದ ಸುಮಾರು ಮೂರು ದಶಕಗಳ ಸುದೀರ್ಘ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ದಿನಕ್ಕೆ ಸರಾಸರಿ ನಾಲ್ಕರಷ್ಟು ರಾಜಕೀಯ ಹತ್ಯೆಗಳು ನಡೆದವು ಎಂಬ ವರದಿಯನ್ನೂ ನೆನಪು ಮಾಡಿಕೊಳ್ಳಬೇಕು. ಅದೇ ರೀತಿ ರಾಜಕೀಯ ಹತ್ಯೆಗಳು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಮಾತ್ರ ಯಾಕೆ ಹೆಚ್ಚಾಗಿ ನಡೆದವು? ಅಷ್ಟೇ ಅಲ್ಲ; ಈ ಹತ್ಯೆಗಳ ಸಂಬಂಧದಲ್ಲಿ ಎಷ್ಟು ಮಂದಿಗೆ ಶಿಕ್ಷೆಯಾಯಿತು? ಅಥವಾ ಯಾಕೆ ಶಿಕ್ಷೆಯಾಗಲಿಲ್ಲ? ಇಂಥ ಪ್ರಶ್ನೆಗಳನ್ನೂ ಕೇಳಿಕೊಳ್ಳಬೇಕು. ಆಗ ಅಡಿಗರ ಭವಿಷ್ಯವಾಣಿ ಹೆಚ್ಚು ಚೆನ್ನಾಗಿ ನಮಗೆ ಅರ್ಥವಾದೀತು.

ಕಮ್ಯೂನಿಸ್ಟ್ ಪಕ್ಷದ ಅಂತಾರಾಷ್ಟ್ರೀಯವಾದ ಕೂಡ ದೇಶದ ಹಿತಕ್ಕೆ ಮಾರಕ ಎಂಬ

ಅರಿವು ಅಡಿಗರಿಗಿತ್ತು. "ಇಡೀ ಜಗತ್ತೇ ಕಮ್ಯುನಿಸ್ಟ್ ಆಗಬೇಕು ಎಂಬ ಸಿದ್ಧಾಂತವನ್ನು ಯಾವ ದೇಶದ ಕಮ್ಯುನಿಸ್ಟ್ ಪಕ್ಷವೂ ಬಿಟ್ಟುಕೊಟ್ಟಿಲ್ಲ; ಆ ಬಗ್ಗೆ ಸತತ ಪ್ರಯತ್ನ ನಡೆಸುವುದನ್ನೂ ನಿಲ್ಲಿಸಲಿಲ್ಲ..." (ಸಾಕ್ಷಿ ಪ್ರಜ್ಞೆ, ಪು.265). ನೆಹರೂ ಮತ್ತು ಎಡಪಂಥೀಯರ ಬಗ್ಗೆ ಈ ಬಗೆಯ ಆತಂಕವನ್ನು ಅಡಿಗರು ಹೊಂದಲು ಕಾರಣವೇನಿರಬಹುದು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುತ್ತ, ರಜನಿ ಕೊಠಾರಿಯವರ ಮಾತನ್ನು ಉಲ್ಲೇಖಿಸಿ ಗಿರೀಶ್ ವಾಘ್ ಅವರು ಹೀಗೆ ಹೇಳುತ್ತಾರೆ. "ನಿಜವಾದ ಪ್ರಜಾಪ್ರಭುತ್ವದಲ್ಲಿರಬೇಕಾದ ಪ್ರಬಲ ವಿರೋಧ ಪಕ್ಷದ ಗೈರು ಹಾಜರಿ ಆಗ ನಮ್ಮ ಸಾರ್ವಜನಿಕ ಜೀವನದ ದೊಡ್ಡ ನ್ಯೂನತೆಯಾಗಿತ್ತು. ಕಾಂಗ್ರೆಸ್ ಪಕ್ಷದ ಬಹುಭಾಗ ಸಿದ್ಧಾಂತಗಳ ಬಗ್ಗೆ ತಲೆಕೆಡಿಸಿಕೊಳ್ಳದ ವೃತ್ತಿಪರ ರಾಜಕಾರಣಿಗಳಿಂದ ತುಂಬಿತ್ತು. ಆ ಪಕ್ಷದ ಸಿದ್ಧಾಂತಗಳನ್ನು ನಿರ್ಧರಿಸುತ್ತಿದ್ದ ಸಣ್ಣ ಗುಂಪಿನಲ್ಲಿ ಮೂವತ್ತು ನಲವತ್ತರ ದಶಕದಲ್ಲಿ ಸಮಾಜವಾದ ಅಥವಾ ಕಮ್ಯುನಿಸಮ್ಮಿನ ದೀಕ್ಷೆ ಪಡೆದವರೆ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಇವರ ಮೇಲೆ ಕಮ್ಯುನಿಸ್ಟ್ ಪಕ್ಷದ ಪರೋಕ್ಷ ಪ್ರಭಾವವಿತ್ತು. ಹಾಗೆಯೆ ನಮ್ಮ ಸನಮೂಹ ಮಾಧ್ಯಮಗಳಲ್ಲೂ ಇದೇ ತರಹದ ಹಿನ್ನೆಲೆಯ ಜನರು ಪ್ರಭಾವೀ ಸ್ಥಾನಗಳಲ್ಲಿದ್ದರು. 1969ರಲ್ಲಿ ಕಾಂಗ್ರೆಸ್ ಪಕ್ಷ ಹೋಳಾದ ಮೂರು ನಾಲ್ಕು ವರ್ಷಗಳ ಕಾಲ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರು ತಮ್ಮ ಕಾಂಗ್ರೆ ಪಕ್ಷವನ್ನು ಎಡಪಂಥೀಯರ ಹಿಡಿತಕ್ಕೇ ಒಪ್ಪಿಸಿಬಿಟ್ಟಿದ್ದರು. ನಮ್ಮ ಪ್ರಜಾಪ್ರಭುತ್ವದಲ್ಲಿ ಕಾಂಗ್ರೆಸ್ ಪಕ್ಷದ ಹಾಗೂ ಎಡಪಂಥೀಯರ ಪ್ರಾಬಲ್ಯ ಈ ಪ್ರಮಾಣದಲ್ಲಿ ಇದ್ದುದರಿಂದಲೆ ಅಡಿಗರು 1957ರಲ್ಲಿ ಬರೆದ 'ನೆಹರು ನಿವೃತ್ತರಾಗುವುದಿಲ್ಲ' ಎಂಬ ಕವನವನ್ನು ಅಂದಿನ ಯಾವ ಪ್ರಮುಖ ಪತ್ರಿಕೆಗಳಲ್ಲೂ ಪ್ರಕಟಿಸಲಾಗದೆ 'ವಿಕ್ರಮ' ಎಂಬ (ಪ್ರಾಯಶಃ ಸಂಘ ಪರಿವಾರದ ಪ್ರಕಟಣೆ) ಅಷ್ಟೇನೂ ಪ್ರಸಿದ್ಧಿ ಪಡೆಯದ ಪತ್ರಿಕೆಯಲ್ಲಿ ಪ್ರಕಟಿಸಬೇಕಾಯಿತು" (ಪ್ರತಿಮಾಲೋಕ, ಪು.138).

ರಾಷ್ಟ್ರವಾದವನ್ನು ಭಾವನಾತ್ಮಕ ವಿಷಯವೆಂದು ತಳ್ಳಿ ಹಾಕುತ್ತ ಅದು ನಮಗೆ ಅಷ್ಟೇನೂ ಮುಖ್ಯವಾದುದಲ್ಲ ಎಂಬ ಒಂದು ಫ್ಯಾಶನ್ ಈಗ ಇದೆಯಲ್ಲ; ಅಡಿಗರು ತಮ್ಮ ಬುದ್ಧಿಯ ನಿಕಷದಲ್ಲಿ ನೋಡಿಯೇ ರಾಷ್ಟ್ರೀಯ ಭಾವಕ್ಕಿರುವ ಮಹತ್ವವನ್ನು ಮನಗಂಡಿದ್ದರು. ಅದಕ್ಕೆ ಯಾವ ಬಗೆಯಲ್ಲಿ ಧಕ್ಕೆ ಬರಬಹುದು ಎನ್ನುವುದು ಕೂಡ ಅವರ ಅರಿವಿನಲ್ಲಿತ್ತು ಎನ್ನುವುದು ಅವರು ಬರೆದ ಅಂಬೇಡ್ಕರ್ ಭೀಮರಾಯರಿಗೆ ಎನ್ನುವ ಕವನದಲ್ಲಿ ಗೊತ್ತಾಗುತ್ತದೆ. ಅಲ್ಲಿ ಇಸ್ಲಾಂ ಮತೀಯವಾದದಿಂದ ದೇಶದ ಏಕತೆಗೆ ಬರಬಹುದಾದ ಅಪಾಯದ ಬಗ್ಗೆ ಅಂಬೇಡ್ಕರರು ಹೇಳಿದುದನ್ನು ಅಡಿಗರು ನೆನಪು ಮಾಡಿಕೊಳ್ಳುತ್ತಾರೆ. ನೆಹರೂ ಅವರನ್ನು ವಿರೋಧಿಸುವ ಅಡಿಗರು ಅಂಬೇಡ್ಕರರನ್ನು ದಾರ್ಶನಿಕರೆಂದು ಗುರುತಿಸುತ್ತಾರೆ. ದೇಶ ವಿಭಜನೆ ಆಗಿ ಪ್ರತ್ಯೇಕತಾವಾದಿಗಳಿಗೆ ಪ್ರತ್ಯೇಕ ದೇಶ ಪಾಕಿಸ್ತಾನ ದೊರೆತ ಬಳಿಕವೂ, ಸೆಕ್ಯುಲರ್ ಭಾರತದಲ್ಲಿ ನೆಹರೂ ಅವರ ಕಾಲದಲ್ಲಿ ಪ್ರಜೆಗಳನ್ನು ಅಲ್ಪಸಂಖ್ಯಾತ ಬಹುಸಂಖ್ಯಾತರೆಂಬ ವಿಭಾಗವನ್ನು ಮಾಡಲಾಯಿತು.

ಮುಖ್ಯವಾಗಿ ರಿಲಿಜಿಯಸ್ ನ್ಯಾಶನಲಿಸಂ ಎನ್ನುವುದು ಸಂಕುಚಿತ ದೃಷ್ಟಿಯದಾದುದರಿಂದ ಇಡೀ ರಾಷ್ಟ್ರೀಯವಾದವನ್ನೇ ಸಂಕುಚಿತ ಎಂದು ಪರಿಗಣಿಸಲಾಗುತ್ತದೆ. ಆದರೆ ಭಾರತೀಯ ರಾಷ್ಟ್ರವಾದದ ಪರಿಚಯ ಇದ್ದವರಿಗೆ ಅದು ಸಂಕುಚಿತ ಅನಿಸಲಾರದು. ಭಾರತದಲ್ಲಿ ಬಹುಸ್ತರಗಳ ರಾಷ್ಟ್ರವಾದ ಇತ್ತು ಮತ್ತು ಇಂದಿಗೂ ಇದೆ. ಪಶ್ಚಿಮ ಪ್ರೇರಿತ ದೃಷ್ಟಿಯು ಸೆಕ್ಯುಲರಿಸಮ್ಮನ್ನು ನಮ್ಮ ದೇಶದಲ್ಲಿ ಹೇಗೆ ಅಪವ್ಯಾಖ್ಯಾನಕ್ಕೆ ಒಳಪಡಿಸಿದೆಯೋ ಅದೇ ರೀತಿ ನ್ಯಾಶನಲಿಸಮ್ಮನ್ನು ಕೂಡ ಅಪವ್ಯಾಖ್ಯಾನಕ್ಕೆ ಒಳಪಡಿಸಿದೆ. ಆದರೆ ಅಡಿಗರ ದೃಷ್ಟಿ

ಶಾಂತಿನಾಥ ದೇಸಾಯಿಯವರು ಸರಿಯಾಗಿಯೇ ಗುರುತಿಸಿದಂತೆ ಭಾರತೀಯ ಸಂಸ್ಕೃತಿಯ ಪರಂಪರಾನುಗತ ದೃಷ್ಟಿಯಾಗಿತ್ತು.

ಭಾರತಕ್ಕೆ ಯಾಕೆ ರಾಷ್ಟ್ರಪ್ರಜ್ಞೆ ಬೇಕು ಎನ್ನುವ ಬಗ್ಗೆ ಕೂಡ ಅಡಿಗರಿಗೆ ಸ್ಪಷ್ಟ ಕಲ್ಪನೆಯಿತ್ತು. ಅಡಿಗರು 'ಕನ್ನಡದ ಅಭಿಮಾನ' ಎನ್ನುವ ಲೇಖನದಲ್ಲಿ ಹೇಳುತ್ತಾರೆ. "ಅನೇಕ ಬುಡಕಟ್ಟು, ಜಾತಿ, ಮತ, ಸಂಪ್ರದಾಯ, ಭಾಷೆ ಇವುಗಳ ಅಸ್ತಿತ್ವದಿಂದ ಸಹಜವಾಗಿಯೇ ಗುಂಪುಗುಂಪಾಗಿ ಒಡೆದು, ಪ್ರತಿಯೊಂದು ಗುಂಪಿನ ಅಹಂಕಾರವೂ ಪರಸ್ಪರ ವಿರುದ್ಧವಾಗಿ ಸೆಟೆದು ನಿಲ್ಲುವ ಪ್ರವೃತ್ತಿಯೇ ನಮ್ಮ ದೇಶದಲ್ಲಿ ಮೂಲಭೂತವಾಗಿ ಇದ್ದುದರಿಂದ ನಮ್ಮ ಸಂಸ್ಕೃತಿಯಲ್ಲಿ ವಿನಯ ಸಹಿಷ್ಣುತೆಗಳನ್ನೇ ಒತ್ತಿ ಹೇಳುತ್ತ ಎಲ್ಲರಿಗೂ ಸಮಾನವಾದ, ವಸ್ತುನಿಷ್ಠ ಧರ್ಮಕ್ಕೆ ತಲೆಬಾಗುವ ಶಿಕ್ಷಣಕ್ಕೆ ಮಹತ್ವ ಕೊಡುತ್ತ ಬಂದದ್ದು ಸ್ವಾಭಾವಿಕ. ಪ್ರತಿಯೊಂದು ಗುಂಪೂ ತನ್ನ ತನ್ನ ಅಭಿಮಾನವನ್ನು ಹದ್ದಿನಲ್ಲಿಟ್ಟುಕೊಳ್ಳದಿದ್ದರೆ ಈ ದೇಶದಲ್ಲಿ ರಾಷ್ಟ್ರಜೀವನವೇ ಏಕೆ, ಗ್ರಾಮಜೀವನವೂ ಕೂಡ ಅಸಂಭವವಾಗುತ್ತದೆ. ಆದ್ದರಿಂದ ಈ ದೇಶದಲ್ಲಿ ಯಾವ ಕಾಲದಲ್ಲೂ ಬಹಿರಂಗದಲ್ಲಿ ಏಕತೆಯನ್ನು ತರುವ ನಿಷ್ಫಲ ಪ್ರಯತ್ನವನ್ನು ಮಾಡದೆ, ಅಂತರಂಗ ಸಾಮರಸ್ಯವನ್ನು ಬೆಳೆಸುವ ಪ್ರಯತ್ನ ನಡೆದದ್ದನ್ನೂ ಅದು ತಕ್ಕಮಟ್ಟಿಗೆ ಯಶಸ್ವಿಯಾಯಿತೆಂಬುದನ್ನೂ ನಾವು ಗಮನಿಸಬೇಕು. ಅಲ್ಲದೆ, ಈ ಅಂತರಂಗ ಸಾಮರಸ್ಯ ಸೂತ್ರವೇ ಮನವಕುಲಕ್ಕೆ ತಾರಕವಾಗಬಲ್ಲುದೆಂಬುದನ್ನೂ ಮರೆಯತಕ್ಕದ್ದಲ್ಲ. ಇಂದು ಮತ್ತೆ ಪುನಃ ಈ ದೇಶವನ್ನು ಭಾವನಾತ್ಮಕವಾಗಿ ಒಂದಾಗಿಸುವ, ಏಕರಾಷ್ಟ್ರವಾಗಿ ಕಟ್ಟುವ ಪ್ರಯತ್ನವನ್ನು ನಡೆಸುವಾಗ ಈ ನಮ್ಮ ದೇಶದ ಈ ವಿಶಿಷ್ಟ ಸ್ವರೂಪವನ್ನು ಮರೆತರೆ ಸೋಲು ಕಟ್ಟಿಟ್ಟದ್ದೇ ಎಂದೂ ಹೇಳಬಹುದು. ಹೀಗೆ ನಾವು ತಲೆತಲಾಂತರದಿಂದಲೂ ಸಹಿಷ್ಣುತೆಯ ಪಾಠವನ್ನೇ ಕಲಿಯುತ್ತ ಬಂದುದರಿಂದ ಅದರ ಪರಿಣಾಮವಾಗಿ ಒಟ್ಟಿನಲ್ಲಿ ಸ್ವಾಭಿಮಾನದ ಪ್ರಮಾಣವೂ ಕ್ರಮೇಣ ಕಡಿಮೆಯಾಗುತ್ತ ಬಂದು ತೂಕ ತಪ್ಪಿ ಪರಕೀಯರು ಧಾಳಿ ನಡೆಸತೊಡಗಿದಾಗ ನಪುಂಸಕ-ಸಹಿಷ್ಣುತೆಯ, ನಿಷ್ಕ್ರಿಯ ವಿನಯದ ನಿರ್ವೀರ್ಯರಾಗಿ ಹೋದೆವು ಎಂಬುದು ನಿಜ"(ಸಾಕ್ಷಿ ಪ್ರಜ್ಞೆ, ಪು. 388). ಹೀಗೆ ರಾಷ್ಟ್ರಪ್ರಜ್ಞೆಯ ಅಗತ್ಯವನ್ನು ಮತ್ತು ಅದನ್ನು ಬೆಳೆಸಬೇಕಾದ ಸಂದರ್ಭದಲ್ಲಿ ಇರಬೇಕಾದ ಎಚ್ಚರವನ್ನು ಅಡಿಗರು ಸ್ಪಷ್ಟವಾಗಿ ಹೇಳುತ್ತಾರೆ. ತಾತ್ಪರ್ಯ ಏನೆಂದರೆ ವಿವಿಧತೆ ಇರುವುದರಿಂದಲೇ ಇಲ್ಲಿ ಏಕತೆಯ ಭಾವವನ್ನು ನೆನಪಿಸುವ, ಉದ್ದೀಪಿಸುವ ಅಗತ್ಯವೂ ಹೆಚ್ಚು.

ಮೇಲೆ ಹೇಳಿದ ಅವರ ಧೋರಣೆಯನ್ನು ಈ ಮುಂದಿನ ಮಾತು ಇನ್ನಷ್ಟು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. "ನಮ್ಮಲ್ಲಿ(ಕನ್ನಡಿಗರಲ್ಲಿ) ಯಾವುದು ಅಭಿಮಾನ ಶೂನ್ಯತೆ ಎಂದು ಕಂಡಿತ್ತೋ ಅದು ಮೂಲತಃ ಈ ನಮ್ಮ ಭಾರತದ ಧಾರಣೆಗೂ, ಸುಸ್ಥಿತಿಗೂ ಕಾರಣವಾಗಬಲ್ಲ ಏಕಮಾತ್ರ ಸೂತ್ರವಲ್ಲವೋ ಎಂಬುದನ್ನೂ ಪರ್ಯಾಲೋಚಿಸಬೇಕು. ಏಕೆಂದರೆ ತಮಿಳರು, ತೆಲುಗರು, ಮರಾಠರು, ಮಲಯಾಳಿಗಳು ಇವರು ನಿಜವಾಗಿಯೂ ನಮ್ಮ ಅಕ್ಕಪಕ್ಕದ ಜನ ಅಲ್ಲವೋ? ಅವರನ್ನು ಸಹಿಸದೆ, ಅವರ ಜೊತೆಗೆ ಸಹಕರಿಸದೆ ಇನ್ನು ಯಾವ ರೀತಿ ನಾವು ಈ ದೇಶದಲ್ಲಿ ಬದುಕುವುದು ಸಾಧ್ಯ?"(ಸಾಕ್ಷಿ ಪ್ರಜ್ಞೆ, ಪು.390) ಈಚಿನ ಕನ್ನಡ ವಿದ್ವಾಂಸರಲ್ಲಿರುವ ವೈರುಧ್ಯ ಏನೆಂದರೆ ಕನ್ನಡ ರಾಷ್ಟ್ರೀಯತೆ ಬೇಕು, ಭಾರತ ರಾಷ್ಟ್ರೀಯತೆಯೆಂದರೆ ಸಂಕುಚಿತತೆ, ಅದು ಬೇಡ ಎಂದು ಹೇಳುವುದು. ಕುವೆಂಪು ಅವರ ಜಯ್ ಭಾರತ ಜನನಿಯ ತನುಜಾತೆ ಎಂಬ ಅಥವಾ ಬೇಂದ್ರೆಯವರ ವಿಶ್ವಮಾತೆಯ ತಾತ್ವಿಕತೆಗೆ ಸಂಪೂರ್ಣ ವಿರುದ್ಧವಾದ ಈ ಧೋರಣೆ ಅಡಿಗರಲ್ಲಿ ಕಾಣುವುದಿಲ್ಲ. ಕುವೆಂಪು ಅವರಷ್ಟು ಭಾವುಕವಾಗಿ ಹಾಡದಿದ್ದರೂ

ಅಡಿಗರದು ಜಯ್ ಭಾರತ ಜನನಿಯ ತನುಜಾತೆ ಎನ್ನುವ ತತ್ವವೇ ಆಗಿದೆ.

ಭಾಷೆಯ ವಿಚಾರಕ್ಕೆ ಬಂದಾಗ ಅಡಿಗರು 'ಇಂಗ್ಲಿಷ್ ಭಾಷಾಜ್ಞಾನ ಬೇಡ, ಆದರೆ ಇಂಗ್ಲಿಷ್ ಭಾಷಾಜ್ಞಾನದ ಫಲ ಬೇಕು ಎನ್ನುವುದು ಹೇಗೆ ಬುದ್ಧಿವಂತಿಕೆಯಾದೀತು' ಎಂದು ಪ್ರಶ್ನಿಸುತ್ತಾರೆ. ದೇಶದ ಏಕತೆ ಉಳಿಯಬೇಕಾದರೆ ಯಾವುದೇ ಒಂದು ಭಾರತೀಯ ಭಾಷೆಗೆ ಇತರ ಭಾಷೆಗಳಿಗಿಂತ ಹೆಚ್ಚು ಮಹತ್ವ ನೀಡಬಾರದು ಎಂದು ಅವರು ಪ್ರತಿಪಾದಿಸಿದರು. ಹೀಗಾಗಿ ಹಿಂದಿಯನ್ನು ಹೇರುವುದು ಬೇಡ ಎನ್ನುವ ಅಡಿಗರು ಕರ್ನಾಟಕದಲ್ಲಿ ಕನ್ನಡ ಮತ್ತು ಇಂಗ್ಲಿಷನ್ನು ಮುಖ್ಯವಾಗಿ ಕಲಿಸಿದರೆ ಸಾಕು ಎನ್ನುತ್ತಾರೆ. ಹಾಗೆಯೇ ಭಾರತೀಯ ಸಂಸ್ಕೃತಿಯ ಬೇರು ಸಂಸ್ಕೃತದಲ್ಲಿದೆ ಎಂದೂ ಹೇಳುತ್ತಾರೆ. ಸಂಸ್ಕೃತ, ಇಂಗ್ಲಿಷ್ ಮೊದಲಾದ ಇಂಥ ಇತರ ಭಾಷೆಗಳ ಜೊತೆ ಅನುಸಂಧಾನದೊಂದಿಗೆ ಕನ್ನಡ ಬೆಳೆಯಬೇಕು ಎನ್ನುವುದು ಅವರ ದೃಷ್ಟಿಯಾಗಿತ್ತು.

ಅಡಿಗರದು ಸಮಗ್ರ ದೃಷ್ಟಿಕೋನವೆನ್ನಬೇಕು. ಅದನ್ನು ಅವರು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡಿದ್ದರು ಎನಿಸುತ್ತದೆ. ಅವರು ತಮ್ಮ ಸಮಗ್ರ ಗದ್ಯಕ್ಕೆ ಬರೆದ ಮುನ್ನುಡಿಯಲ್ಲಿ ಹೇಳುತ್ತಾರೆ– "ಇಲ್ಲಿ ಯಾವ ಲೇಖನದಲ್ಲೂ ಯಾವ ಸಮಸ್ಯೆಯನ್ನೇ ಆಗಲಿ ಸರಳಗೊಳಿಸುವ ಪ್ರಯತ್ನವನ್ನು ಮಾಡಿಲ್ಲ. ವ್ಯಕ್ತಿಯನ್ನು ಕುರಿತು ಮಾತನಾಡುವಾಗಲೂ ಸಮಾಜವನ್ನು ಮರೆತಿಲ್ಲ, ಆಧುನಿಕತೆಯನ್ನು ವಿವರಿಸುವಾಗ ಸಂಪ್ರದಾಯದ ಮಹತ್ವವನ್ನು ಅಲ್ಲಗಳೆದಿಲ್ಲ. ಸಾಹಿತ್ಯದಲ್ಲಿ ಹೊಸತನವನ್ನು ವಿವರಿಸಿ ಹೊಸಪ್ರಯೋಗಗಳ ಅಗತ್ಯವನ್ನು ಸ್ಥಾಪಿಸಲೆಳಸುವಾಗ ನಮ್ಮ ಸಾಹಿತ್ಯ ಪರಂಪರೆಯನ್ನು ಅಲ್ಲಗಳೆಯುವ ಯತ್ನ ನಡೆದಿಲ್ಲ. ...ಒಂದು ಅಂಶವನ್ನು ವಿವರಿಸುವಾಗ ಬೇರೆ ಬೇರೆ ಅಂಶಗಳ ಇರುವಿಕೆಯನ್ನು ಅಲ್ಲಗಳೆದಿಲ್ಲ. ಬದುಕಿನ ಅನಂತ ಸಂಭಾವ್ಯತೆಗಳ ಅರಿವನ್ನು ಹಿನ್ನೆಲೆಗಿಟ್ಟುಕೊಂಡೇ ಈ ಎಲ್ಲ ಲೇಖನಗಳನ್ನು ಬರೆಯುವ ಉದ್ದೇಶ ನನ್ನದು"(ಸಾಕ್ಷಿ ಪ್ರಜ್ಞೆ, ಪು.5). ಹೀಗೆ ಬಹು ಅಂಶಗಳ ಇರುವಿಕೆಯನ್ನು ಮಾನ್ಯ ಮಾಡುತ್ತಲೇ, ಗೌರವಿಸುತ್ತಲೇ ಅವುಗಳ ಜೊತೆ ಸಂವಾದಿಸುತ್ತಲೇ ತಮ್ಮ ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದು ಬೌದ್ಧಿಕವಾಗಿ ದೇಶ ಕಟ್ಟುವ ಬಗೆಯೂ ಹೌದು. ಅಡಿಗರು ತಮ್ಮ ಬರವಣಿಗೆಯ ಮೂಲಕ ಅಂಥ ಕಾಯಕದಲ್ಲಿ ತೊಡಗಿದ್ದರು ಎಂದು ನಿಸ್ಸಂದೇಹವಾಗಿ ಹೇಳಬಹುದು.

✠✠✠

ದಾರಿಯಲಿ
ಶಬುದಗಳ ಚೆಲ್ಲು
ಹೆಕ್ಕಿಕೊಳರೆನ್ನು
ಕೊನೆಗುಳಿಯುವುದು
ಕವಿತೆಯ ಸೊಲ್ಲು.

ಚ.ನ. ಶಂಕರ್‌ರಾವ್‌ರಿಂದ ಸಮಾಜಶಾಸ್ತ್ರಕ್ಕೊಂದು ಅನುಪಮ ಕೊಡುಗೆ

ಡಾ. ಮಾಧವ ಎಂ.ಕೆ.
ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸರಣಿ ಸಂಪುಟ – 2

ಸಮಾಜಶಾಸ್ತ್ರ (Sociology) ಎಂದಾಗ ತಕ್ಷಣ ಅದರಲ್ಲೂ ಕನ್ನಡಿಗರಾದ ನಮ್ಮ ಮನಸ್ಸಿನಲ್ಲಿ ಮೂಡುವ ಹೆಸರು ಚ.ನ. ಶಂಕರ್‌ರಾವ್. ನೂರಕ್ಕೂ ಅಧಿಕ ಸಮಾಜಶಾಸ್ತ್ರ ಪಠ್ಯಪುಸ್ತಕಗಳು ಹಾಗೂ ಆಕರ ಗ್ರಂಥಗಳ ಮೂಲಕ ಸಮಾಜಶಾಸ್ತ್ರ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಸಮಾಜಶಾಸ್ತ್ರ ಅಧ್ಯಯನಶೀಲರಿಗೆ ಹಾಗೂ ಸಾಮಾನ್ಯ ಜ್ಞಾನ ವೃದ್ಧಿಸಿಕೊಳ್ಳ ಬೇಕೆನ್ನುವವರಿಗೆ ಚ.ನ. ಶಂಕರ್‌ರಾವ್ ಅನುಪಮ ಸಂಪನ್ಮೂಲ ಶಕ್ತಿಯಾಗಿದ್ದಾರೆ ಎನ್ನುವುದರಲ್ಲಿ ಅತಿಶಯೋಕ್ತಿಯಿಲ್ಲ.

ಚ.ನ. ಶಂಕರ್‌ರಾವ್ ಕರ್ನಾಟಕದ ಸಮಾಜಶಾಸ್ತ್ರ ವಲಯದಲ್ಲಿ ಚಿರಪರಿಚಿತರು. ಸಮಾಜಶಾಸ್ತ್ರದ ಅಧ್ಯಾಪಕರಾಗಿ ಸೇವಾನುಭವ ಹೊಂದಿರುವ ಇವರು ವಿದ್ಯಾರ್ಥಿಗಳ ಮಿಡಿತವನ್ನು ಬಲ್ಲವರಾಗಿದ್ದು, ಪಠ್ಯಪುಸ್ತಕಗಳ ರಚನೆಯಲ್ಲಿಯೂ ಸಿದ್ಧಹಸ್ತರು.





ಕರ್ನಾಟಕದ ವಿದ್ಯಾರ್ಥಿಗಳಿಗೆ ಪದವಿಪೂರ್ವ ಹಂತದ ಕಲಿಕೆಗಾಗಿ ಇವರು ಬರೆದ ಸಮಾಜಶಾಸ್ತ್ರ ಪಠ್ಯಪುಸ್ತಕಗಳು ರಾಜ್ಯದ ಅಧಿಕೃತ ಪಠ್ಯಪುಸ್ತಕಗಳಂತೆ ಕಳೆದ ಸುಮಾರು ಮೂವತ್ತು ವರ್ಷಗಳಿಂದಲೂ ವಿಜೃಂಭಿಸುತ್ತಿರುವುದು ನಮಗೆಲ್ಲರಿಗೂ ತಿಳಿದ ವಿಚಾರ. ಇಷ್ಟು ಮಾತ್ರವಲ್ಲದೆ ರಾಜ್ಯದ ಬಹುತೇಕ ವಿಶ್ವವಿದ್ಯಾನಿಲಯಗಳ ಪದವಿ ಹಂತದಲ್ಲಿಯೂ ಇವರ ಕೃತಿಗಳು ಬಹುಮಾನ್ಯವೆನಿಸಿವೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಲು ಸಹಾಯಕವಾದ ಹಾಗೂ ಸ್ನಾತಕೋತ್ತರ ಕಲಿಕೆಯ ಹಂತದ ಬಳಕೆಗಾಗಿ ಕನ್ನಡದಲ್ಲಿರುವ ಆಕರ ಗ್ರಂಥಗಳಾಗಿ ಪ್ರಸಕ್ತ ಲಭ್ಯವಿರುವುದು ಚ.ನ.ಶಂಕರ್ ರಾವ್ ಕೃತಿಗಳು.

ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟ–2 ಪ್ರಸಕ್ತ ಲೋಕಾರ್ಪಣೆಗೊಂಡಿದ್ದು ಕನ್ನಡ ಮಾತೃಭಾಷಿಕರಿಗೆ ಹಾಗೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಇದೊಂದು ವರದಾನವೆಂದೇ ಹೇಳಬಹುದು. ಇದೊಂದು ಪದಕೋಶ ಮಾತ್ರವಾಗಿರದೆ ಈ ಸಂಪುಟದಲ್ಲಿ ಸಮಾಜಶಾಸ್ತ್ರೀಯ ಪ್ರಾಮುಖ್ಯದ 2117 ಪದ–ಪರಿಕಲ್ಪನೆ, ಪದಪುಂಜಗಳನ್ನು ಕುರಿತು ಸರಳ ವ್ಯಾಖ್ಯಾನ, ಸಂಕ್ಷಿಪ್ತ ವಿವರಣೆ ನೀಡುವ ಪ್ರಯತ್ನವಿದೆ. ಅಂತಾರಾಷ್ಟ್ರೀಯ ವ್ಯಾಪಕತೆಯ ಪರಿಕಲ್ಪನೆಗಳ, ಸಿದ್ಧಾಂತಗಳ, ವಿಧಾನಗಳ ಪರಿಚಯದ ಜೊತೆಗೆ ಪಾಶ್ಚಾತ್ಯ ಮೂಲದ ಆಂಗ್ಲಭಾಷಾ ಪದಕೋಶಗಳಲ್ಲಿ ಸಿಗದಿರುವ, ಅಪ್ಪಟ ಭಾರತೀಯ ಸ್ವರೂಪದ್ದೆನ್ನಬಹುದಾದ ಹಲವಾರು ಉಲ್ಲೇಖಗಳನ್ನು 'ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟ–2'ರಲ್ಲಿ ಕಾಣುತ್ತೇವೆ.

ಈಗಿನ ಹೊಸ ತಲೆಮಾರಿನ ವಿದ್ಯಾರ್ಥಿಗಳ ಆವಶ್ಯಕತೆಗಳನ್ನು ಗಮನದಲ್ಲಿರಿಸಿಕೊಂಡು ಸಿದ್ಧಪಡಿಸಲಾಗಿರುವ ಕಿರು ವಿಶ್ವಕೋಶವು ಸಮಾಜಶಾಸ್ತ್ರದಂತಹ ಸಂಕೀರ್ಣ ವಿಷಯದ ಸಿದ್ಧಾಂತ ಹಾಗೂ ಆಚರಣೆಯ ಬಗೆಗಿನ ಸಾಮಾನ್ಯ ರೂಪದ ಮೇಲ್ನೋಟವೊಂದನ್ನು ನೀಡುತ್ತದೆ ಎನ್ನಲಡ್ಡಿಯಿಲ್ಲ.

2019–20ರ ಸಾಲಿನಲ್ಲಿ ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸರಣಿಯ ಪ್ರಥಮ ಸಂಪುಟ ಮೂರನೆಯ ಆವೃತ್ತಿಯಾಗಿ ಮರುಮುದ್ರಣಗೊಂಡಿರುವ ಹೆಚ್ಚುಗಾರಿಕೆಯ ಸಂದರ್ಭದಲ್ಲೇ ಕಿರು ವಿಶ್ವಕೋಶದ ಎರಡನೆ ಸಂಪುಟದ ಪ್ರಥಮ ಆವೃತ್ತಿ ಹೊರಬಂದಿರುವುದು ಸಮಾಜಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಪುಸ್ತಕ ಲೋಕಕ್ಕೆ ಮಹಾನ್ ಕೊಡುಗೆಯೇ ಹೌದೆನ್ನಬಹುದು.

ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ಆಕ್ಸ್‌ಫರ್ಡ್ ಡಿಕ್ಷನರಿ, ಕೊಲಿನ್ಸ್ ಡಿಕ್ಷನರಿ, ಪೆಂಗ್ವಿನ್ ಡಿಕ್ಷನರಿ ಮುಂತಾದವುಗಳನ್ನೊಳಗೊಂಡು 325ಕ್ಕೂ ಅಧಿಕ ಪರಾಮರ್ಶನ ಗ್ರಂಥಗಳ ನೆರವು ಪಡೆದು ಸುಮಾರು 1450ಕ್ಕೂ ಹೆಚ್ಚು ಅಡಿಟಿಪ್ಪಣಿಗಳಿಂದ ಸಂಪನ್ನಗೊಂಡಿರುವ ಸಂಪುಟ ಎರಡರಲ್ಲಿ ಮಾಹಿತಿಯ ಅಧಿಕೃತತೆಗೆ ವಿಶೇಷ ಮಹತ್ತ್ವ ನೀಡಿರುವುದು ಕಂಡು ಬರುತ್ತದೆ. ಬಹುವಿಸ್ತೃತ ಸ್ವರೂಪದ ಮಾಹಿತಿಯ ಹರಹನ್ನು ಹೊಂದಿರುವ ಸಂಪುಟ–2ರಲ್ಲಿ ಜನಪ್ರಿಯ ಸಂಸ್ಕೃತಿ, ಆರ್ಥಿಕ ಜೀವನ, ರಾಜಕೀಯ ಮುಖಂಡರು ಹಾಗೂ ಘಟನೆಗಳು, ಮಹಿಳಾ ಅಧ್ಯಯನ, ಸಿದ್ಧಾಂತಗಳು, ಮತಧರ್ಮ, ಮಾಹಿತಿ ಮತ್ತು ಸಮಾಚಾರ, ಸುದ್ದಿ ಮಾಧ್ಯಮ, ಭಾರತೀಯ ಸಾಂಸ್ಕೃತಿಕ ಪರಂಪರೆ, ಹಿಂದುತ್ವ ಮೊದಲಾದ ವೈವಿಧ್ಯಮಯ ವಿಷಯಗಳ ಉಲ್ಲೇಖಗಳು ಕಾಣಸಿಗುತ್ತವೆ.

ಸಂಖ್ಯಾತ್ಮಕ ದತ್ತಾಂಶಗಳು, ಇನ್ನೂರಕ್ಕೂ ಅಧಿಕ ಸಮಾಜ ಚಿಂತಕರು, ಸುಧಾರಕರು, ಸಾಧಕರು ಹಾಗೂ ನೇತಾರರನ್ನು ಕುರಿತು ಸಂಕ್ಷಿಪ್ತ ಜೀವನಚರಿತ್ರೆಯ ಉಲ್ಲೇಖದ ಸಹಿತ

ಅವರ ಭಾವಚಿತ್ರಗಳನ್ನು ಅಳವಡಿಸಿಕೊಂಡಿರುವುದು ಗಮನಾರ್ಹ ಸಂಗತಿ.

ಸಮಾಜಶಾಸ್ತ್ರೀಯ ಭಾಷೆ, ಪದಗಳು ಮತ್ತು ಪರಿಕಲ್ಪನೆಗಳನ್ನು ಬಳಸುವವರಿಗೊಂದು ಅತಿ ಉಪಯುಕ್ತವಾದ ಕೃತಿ ಇದಾಗಿದೆ. ಸಮಾಜ ವಿಜ್ಞಾನಗಳಲ್ಲಿ ಸಮಾಜಶಾಸ್ತ್ರಕ್ಕೆ ಸಂಬಂಧಿಸಿ ಮಾತ್ರ ಕನ್ನಡದಲ್ಲಿ ಲಭ್ಯವಿರುವ ಕೃತಿ ಎಂಬ ಹೆಗ್ಗಳಿಕೆಗೂ 'ಸಮಾಜಶಾಸ್ತ್ರದ ಕಿರು ವಿಶ್ವಕೋಶ' ಸರಣಿಯ ಎರಡು ಸಂಪುಟಗಳು ಪಾತ್ರವಾಗಿರುವುದರಲ್ಲಿ ಅಚ್ಚರಿಯೇನಿಲ್ಲ.

ಸಮಾಜಶಾಸ್ತ್ರ ಅಧ್ಯಯನಾಸಕ್ತರಿಗೆ ಮಾತ್ರವಲ್ಲದೆ, ಸಾಮಾನ್ಯ ಓದುಗರಲ್ಲೂ ಕುತೂಹಲ ಕೆರಳಿಸಬಲ್ಲ ಹಾಗೂ ಅರಿವು ನೀಡಬಲ್ಲ ಕನಿಷ್ಠ 400–500 ನಮೂದುಗಳ ಸಹಿತ ಮುನ್ನೂರು–ನಾಲ್ನೂರು ಪುಟಗಳಷ್ಟು ಮಾಹಿತಿ ಸಮಾಜಶಾಸ್ತ್ರದ ಕಿರು ವಿಶ್ವಕೋಶದ ಎರಡನೆ ಸಂಪುಟದಲ್ಲಿ ಅಡಕವಾಗಿದೆ.

ವಿಷಯ ಸಂಪನ್ನತೆ, ಮಾಹಿತಿಯ ವೈವಿಧ್ಯ ಸಹಿತ ಪರಾಮರ್ಶೆಗಾಗಿ ಪ್ರತಿಯೊಂದು ವಿದ್ಯಾಸಂಸ್ಥೆಯ ಗ್ರಂಥಾಲಯದಲ್ಲಷ್ಟೇ ಅಲ್ಲದೆ ಪ್ರತಿಯೊಬ್ಬ ಶಿಕ್ಷಣ ಹಾಗೂ ಪುಸ್ತಕಪ್ರೇಮಿಯ ಗ್ರಂಥ ಭಂಡಾರದಲ್ಲೂ ಇರಲೇಬೇಕಾದ ಸಂಗ್ರಹಯೋಗ್ಯ ಕೃತಿ ಇದಾಗಿದೆ.

ಸಮಾಜಶಾಸ್ತ್ರ ವಿಷಯದಲ್ಲಿ 112ರಷ್ಟು ಕೃತಿಗಳನ್ನು ರಚಿಸಿ ಪ್ರಸಿದ್ಧರಾಗಿರುವ ಚ.ನ. ಶಂಕರ್ ರಾವ್‌ರವರ ಸತತ ಆರು ವರ್ಷಗಳ ಏಕಾಂಗಿ ಪರಿಶ್ರಮದ ಫಸಲು 'ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟ–2'.

ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಚ.ನ. ಶಂಕರ್ ರಾವ್‌ರವರ ಪುಸ್ತಕಗಳನ್ನು ಪರಾಮರ್ಶನ ಕೃತಿಗಳೆಂದು ಉಲ್ಲೇಖಿಸದಿರುವುದು ಇನ್ನೂ ಒಂದು ಅಚ್ಚರಿಯ ಸಂಗತಿಯೇ ಆಗಿದೆ. ಇದು ಪೂರ್ವಗ್ರಹ ಪೀಡಿತವೋ ಅಥವಾ ವಿಶ್ವವಿದ್ಯಾನಿಲಯಗಳ ಅಸಡ್ಡೆಯ ಕಾರಣವೋ ತಿಳಿಯುತ್ತಿಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಬಗ್ಗೆ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು ಗಮನಹರಿಸಬೇಕಾದ ಅಗತ್ಯವಿದೆ.

ಸಮಾಜಶಾಸ್ತ್ರಕ್ಕೆ ಸಂಬಂಧಿಸಿ ಹಲವು ಅತ್ಯುತ್ತಮ ಕೃತಿಗಳನ್ನು ರಚಿಸಿರುವ ಹಾಗೂ ಸಮಾಜಶಾಸ್ತ್ರದ ಬಗ್ಗೆ ಅಧಿಕೃತವಾಗಿ ಮಾತನಾಡಬಲ್ಲ, ಬರೆಯಬಲ್ಲ ಚ.ನ. ಶಂಕರ್‌ರಾವ್ ಅವರ ಸಲಹೆ ಸೂಚನೆಗಳು ವಿದ್ಯಾರ್ಥಿ ಸಮುದಾಯಕ್ಕೆ ದೊರೆಯುವಂತೆ ಮಾಡಲು ಸರಕಾರ ವಿಶೇಷ ಆಸಕ್ತಿ ತಳೆಯಬೇಕಾಗಿದೆ.

ಚ.ನ. ಶಂಕರ್‌ರಾವ್ ಅವರ ಕೃತಿಗಳಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ವಿಷಯಗಳ ಸುಗಮ ಹರಿವು, ಪದಗಳ ನಿಷ್ಕರ್ಷೆ ಹಾಗೂ ಒಟ್ಟಂದದಲ್ಲಿ ಸಮಾಜಶಾಸ್ತ್ರೀಯ/ಪಾರಿಭಾಷಿಕ ಪದಗಳ ಪರಿಚಯಿಸುವಿಕೆಯ ಪರಿ ವಿಶಿಷ್ಟ ಹಾಗೂ ಮಾದರಿಯಂತಿದೆ.

ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟಗಳು ಚ.ನ.ಶಂಕರ್ ರಾವ್‌ರವರ ಏಕಾಂಗಿ ಪರಿಶ್ರಮದ ಫಲ ಎನ್ನುವುದನ್ನು ನಾವಿಲ್ಲಿ ಗಮನಿಸಲೇಬೇಕು. ಪಶ್ಚಿಮದ ರಾಷ್ಟ್ರಗಳಲ್ಲಿ/ ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಇಂತಹ ಕೃತಿ ಹೊರ ಬರಬೇಕಾದರೆ ಅದಕ್ಕೊಂದು ಸಂಪಾದಕ ಮಂಡಳಿಯೋ/ ಸಮಿತಿಯೋ ಇದ್ದು ಸಾಮೂಹಿಕ/ಸಂಘಟಿತ ಸಹಕಾರವಿರುತ್ತದೆ.

ಸಮಾಜಶಾಸ್ತ್ರದಂತಹ ವ್ಯಾಪಕ ಹರಹನ್ನು ಹೊಂದಿರುವ ವಿಷಯದ ಬಗ್ಗೆ ಚ.ನ.ಶಂಕರ್‌ರಾವ್ ಬೇರೆ ಯಾರನ್ನೂ ಅವಲಂಬಿಸದೆ ಏಕಾಂಗಿಯಾಗಿ ಕಿರು ವಿಶ್ವಕೋಶದಂತಹ ಮಹತ್ತ್ವದ ಕೃತಿಯನ್ನು ರಚಿಸಬಲ್ಲರಾದರೆ, ಅದೇಕೆ ವಿಶ್ವವಿದ್ಯಾನಿಲಯಗಳು/ಸರಕಾರಿ ಸಂಸ್ಥೆಗಳು ಸಮಾಜವಿಜ್ಞಾನ, ನೈಸರ್ಗಿಕ ವಿಜ್ಞಾನ ಮುಂತಾದ ವಿವಿಧ ಜ್ಞಾನಶಾಖೆಗಳಿಗೆ

ಸಂಬಂಧಿಸಿದ ಇಂತಹ ಕೃತಿಗಳ ರಚನೆಗೆ ಮುಂದಾಗಬಾರದು ಎಂಬುದು ಯೋಚಿಸಬೇಕಾದ ವಿಷಯ.

‘ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟ–2’ರ ಕೆಲವು ವಿಶೇಷ ಲಕ್ಷಣಗಳನ್ನು ಕುರಿತು ಕೃತಿಕಾರರೇ ಹೇಳುವಂತೆ:

1. ಕಿರು ವಿಶ್ವಕೋಶ ಸಂಪುಟ–2ನ್ನು ಬರೆಯುವುದು ಅಂದುಕೊಂಡಷ್ಟು ಸುಲಭವಾಗಲಿಲ್ಲ. ಹೀಗೊಂದು ಸಂಪುಟ–2ನ್ನು ಬರೆಯುವ ಯಾವುದೇ ಉದ್ದೇಶವಿಲ್ಲದಿದ್ದರೂ ಒಮ್ಮೆ ಅಂತಹ ಉದ್ದೇಶದ ತೀರ್ಮಾನ ತೆಗೆದುಕೊಂಡ ಮೇಲೆ ಹೆಚ್ಚುಕಡಿಮೆ ಪ್ರತಿದಿನವೂ ಎಂಬಂತೆ ಸತತವಾಗಿ ಆರು ವರ್ಷಗಳಿಂದ ಅದನ್ನು ಬರೆದು ಪೂರ್ಣಗೊಳಿಸುವ ಪ್ರಯತ್ನ ನಡೆಸುತ್ತಿದ್ದು ಈಗ ಅದು ಕೈಗೂಡಿದಂತಾಗಿದೆ. ಕಿರು ವಿಶ್ವಕೋಶ ಸಂಪುಟ ಒಂದರಲ್ಲಿರುವ ಪದಗಳು–ಪರಿಕಲ್ಪನೆಗಳು ಮತ್ತೆ ಪುನರಾವರ್ತನೆಯಾಗದಂತೆ ನೋಡಿ ಕೊಳ್ಳುವುದು ಮತ್ತು ಈ ಬಾರಿ ಹೊಸದಾಗಿ ಪರಿಚಯಿಸಿದ ಪದ ಪರಿಕಲ್ಪನೆಗಳಿಗೆ ಈ ಹಿಂದಿನ ಪುಸ್ತಕದಲ್ಲಿರುವ ಸಂಬಂಧಿತ ಪದಗಳ ಪರಿಕಲ್ಪನೆಗಳ ಉಲ್ಲೇಖವನ್ನು ಪುಟ ಕ್ರಮಾಂಕ ಸಹಿತ ನೀಡುವುದು ಓದುಗರ ದೃಷ್ಟಿಯಿಂದ ಅತ್ಯಂತ ಅಗತ್ಯವೆನಿಸಿದ್ದು ಅದಕ್ಕಾಗಿಯೂ ಬಹಳ ಸಮಯ ವಿನಿಯೋಗಿಸಬೇಕಾಯಿತು. ಇಂತಹ ಪ್ರಯತ್ನ ನನ್ನ ತಿಳುವಳಿಕೆಯಂತೆ ಸಮಾಜವಿಜ್ಞಾನಗಳ ಕುರಿತಾದ ಕನ್ನಡದ ಬೇರಿನ್ನಾವ ಸರಣಿ ಕೃತಿಗಳಲ್ಲೂ ಇದ್ದಂತಿಲ್ಲ.

   ಈ ಪುಸ್ತಕದಲ್ಲಿ ಕಿರು ವಿಶ್ವಕೋಶ ಸಂಪುಟ–1ಕ್ಕೆ ಹೋಲಿಸಿದರೆ ಬಹಳಷ್ಟು ಹೆಚ್ಚಿನ ಭಾರತೀಯ ಶಬ್ದಗಳಿವೆ. ಭಾರತೀಯ ಚಿಂತಕರ, ಸಾಧಕರ ಸುಧಾರಕರ ಕುರಿತಾದ ಕಿರು ಮಾಹಿತಿ ಹಾಗೂ ಉಲ್ಲೇಖಗಳಿವೆ. ಮುನ್ನುಡಿಯಲ್ಲಿಯೇ ತಿಳಿಸಿರುವಂತೆ ಇದು ನನ್ನ ಉದ್ದೇಶ ಕೂಡಾ ಆಗಿತ್ತು. ಸಮಾಜಶಾಸ್ತ್ರವನ್ನು ಭಾರತೀಯ ಹಿನ್ನೆಲೆಯಲ್ಲಿ ಹಾಗೂ ಭಾರತೀಯ ಸಮಾಜವನ್ನು ಉದಾಹರಣೆಯಾಗಿರಿಸಿಕೊಂಡು ಅಧ್ಯಯನ–ಅಧ್ಯಾಪನ ಮಾಡುವಾಗ ಬಹಳ ಸಹಜವಾಗಿ ಎಂಬಂತೆ ಪಾಶ್ಚಾತ್ಯ ಲೇಖಕರ ಕೃತಿಗಳಲ್ಲಿ ಅಥವಾ ಅವರು ಸೃಷ್ಟಿಸಿದ ವಿಶ್ವಕೋಶ ಇಲ್ಲವೇ ನಿಘಂಟುಗಳಲ್ಲಿ ಇಲ್ಲಿನ ಸಮಾಜ ಸಂಸ್ಕೃತಿಗಳಿಗೆ ವಿಶಿಷ್ಟವಾದ ಎಷ್ಟೋ ಪದಗಳ/ ಪರಿಕಲ್ಪನೆಗಳ ಹಾಗೂ ಇಲ್ಲಿನ ಲೇಖಕರ–ಸಾಧಕರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿರುವುದು ನಮ್ಮ ಗಮನ ಸೆಳೆಯುತ್ತದೆ. ಅಂತಹ ಎಲ್ಲಾ ಬಗೆಯ ಮಾಹಿತಿಯನ್ನು ಪಾಶ್ಚಾತ್ಯ ಲೇಖಕರ/ ಪ್ರಕಾಶಕರ ಪುಸ್ತಕಗಳಲ್ಲಿ ನಿರೀಕ್ಷಿಸುವುದು ಸರಿಯಲ್ಲವಾದರೂ ಕೊನೆಯ ಪಕ್ಷ ಖ್ಯಾತಿವೆತ್ತ ಭಾರತೀಯ ಚಿಂತಕರು ಮತ್ತು ವಿಭಿನ್ನ ಸಮಾಜ ವಿಜ್ಞಾನಗಳ ಕ್ಷೇತ್ರಕ್ಕೆ ಅವರು ನೀಡಿದ ಕೆಲವು ಅಮೋಘ ಕೊಡುಗೆಗಳ ಬಗ್ಗೆ ಕೂಡ ಪ್ರಸ್ತಾಪ ಮಾಡದಿರುವುದು ಯಾವುದೇ ದೃಷ್ಟಿಯಿಂದ ನೋಡಿದರೂ ಒಂದು ಕೊರತೆಯಾಗಿಯೇ ಕಾಣಿಸುವುದು. ಉದಾಹರಣೆಗೆ, ಹಿಂಸಾತ್ಮಕ ಸ್ವರೂಪದ ರಕ್ತಕ್ರಾಂತಿಯ ಮೂಲಕವಾದರೂ ಸಮಾನತೆಯ ತತ್ತ್ವಾಧಾರಿತ ಸಾಮ್ಯವಾದಿ ಸಮಾಜದ ಸ್ಥಾಪನೆಯಾಗಲಿದೆ ಮತ್ತು ಅದೊಂದು ಐತಿಹಾಸಿಕ ಅನಿವಾರ್ಯ ಎಂಬ ತಾತ್ತ್ವಿಕ ವಿಚಾರ ಮುಂದಿರಿಸಿದ ಕಾರ್ಲ್‌ಮಾರ್ಕ್ಸ್ ಮತ್ತು ಆತನ ವಿಚಾರದ ಸಮರ್ಥಕರೆಂದೇ ಪರಿಗಣಿತರಾದ ನೂರಕ್ಕೂ ಅಧಿಕ ಪಾಶ್ಚಾತ್ಯ ಚಿಂತಕರ ಬಗ್ಗೆ ಮಾಹಿತಿ ನೀಡುವ ಪಾಶ್ಚಾತ್ಯ ಮೂಲದ ಸಮಾಜಶಾಸ್ತ್ರ ಸಂಬಂಧಿತ ಆಕ್ಸ್‌ಫರ್ಡ್,

ಕೊಲಿನ್ಸ್ ಹಾಗೂ ಪೆಂಗ್ವಿನ್ ಮತ್ತಿತರ ಡಿಕ್ಷನರಿಗಳು ಅಹಿಂಸಾತ್ಮಕ ಕ್ರಾಂತಿಯ ಕಹಳೆಯನ್ನು ಮೊಳಗಿಸಿ ಪಾಕಿಸ್ತಾನವನ್ನೊಳಗೊಂಡಂತೆ 1947ರ ಸಂದರ್ಭದ 40 ಕೋಟಿಗೂ ಅಧಿಕ ಜನರ ರಾಜಕೀಯ ಸ್ವಾತಂತ್ರ್ಯ ಪ್ರಾಪ್ತಿಗೆ ಕಾರಣರಾದ ಭಾರತದ ಶ್ರೇಷ್ಠ ಜನನಾಯಕ, ಚಿಂತಕ, ಸುಧಾರಕ, ದ್ರಷ್ಟಾರರೆಂದೆನಿಸಿಕೊಂಡ ಗಾಂಧೀಜಿಯವರ ಹೆಸರನ್ನೇ ಉಲ್ಲೇಖ ಮಾಡುವುದಿಲ್ಲ. ಕೊನೆ ಪಕ್ಷ, "ಆಕ್ಸ್‌ಫರ್ಡ್ ಕನ್‌ಸೈಸ್ ಡಿಕ್ಷನರಿ ಆಫ್ ಪಾಲಿಟಿಕ್ಸ್"(2004) ಎಂಬ ಪದಕೋಶದಲ್ಲಾದರೂ ಗಾಂಧೀಜಿ ಬಗ್ಗೆ ಅರ್ಧ ಪುಟದಷ್ಟಾದರೂ (ಪುಟ–218)ವಿವರಣೆ ಇದೆ ಎಂಬುದೇ ಸಮಾಧಾನದ ಸಂಗತಿ. ಆದರೆ ಅದೇ ಪುಸ್ತಕದಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಮಾರ್ಕ್ಸಿಸಂ ಬಗ್ಗೆ ಮೂರು ಇಡೀ ಪುಟಗಳು ಹಾಗೂ ಚೀನಾದ ಮಾವೋತ್ಸೆತುಂಗನ ಬಗ್ಗೆ ಎರಡೂವರೆ ಪುಟಗಳ ವಿವರಣೆಯಿದೆ. ಅದೇರೀತಿ ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲೂ ಆಧ್ಯಾತ್ಮಕತೆಯ ಬಿರುಗಾಳಿ ಎಬ್ಬಿಸಿದ ಸ್ವಾಮಿ ವಿವೇಕಾನಂದರ ಬಗ್ಗೆ, ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದ ಹಾಗೂ ಲೆನಿನ್ನನ ಮೆಚ್ಚುಗೆಗೂ ಪಾತ್ರರಾಗಿದ್ದ ಎಂ.ಎನ್. ರಾಯ್‌ರವರ ಬಗ್ಗೆ, "ಭಾರತದ ಪ್ರಪ್ರಥಮ ಆಧುನಿಕ ವ್ಯಕ್ತಿ" ಎಂಬ ಖ್ಯಾತಿಯ ಮಹಾನ್ ಮೇಧಾವಿ ರಾಜಾರಾಂ ಮೋಹನರಾಯ್‌ರವರ ಬಗ್ಗೆ–ಇಂತಹ ಇನ್ನೂ ಹಲವರ ಬಗ್ಗೆ ಕೂಡಾ ಯಾವುದೇ ಉಲ್ಲೇಖಗಳಿಲ್ಲ.

3. ಇದೀಗ ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ಪಾಶ್ಚಾತ್ಯ ಮೂಲದ ಇಂತಹ ಎಲ್ಲಾ ಪದಕೋಶಗಳಲ್ಲಿ ಕೂಡ ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಹಾಗೂ ಇಟಲಿ ಈ ಐದು ದೇಶಗಳ ಚಿಂತಕರು ಮತ್ತು ಅವರುಗಳ ಕೊಡುಗೆಗಳನ್ನೇ ಹೆಚ್ಚಾಗಿ ಬಿಂಬಿಸುವ ಪ್ರಯತ್ನ ಕಾಣಬರುವುದು. ಉಳಿದ ದೇಶಗಳ, ಅದರಲ್ಲೂ ಏಷ್ಯಾದ ದೇಶಗಳ ಬಗೆಗಿನ ಸರಿಯಾದ ಮಾಹಿತಿಯ ಕೊರತೆಯಿದೆ ಎಂದು ಈ ಲೋಪಕ್ಕೆ ಕಾರಣ ನೀಡಬಹುದಾದರೂ ಮಾಹಿತಿಯ ಯುಗದಲ್ಲಿ ಇದನ್ನು ಒಪ್ಪಿಕೊಳ್ಳುವುದು ಕಷ್ಟ. ಸಮಾಜಶಾಸ್ತ್ರದಂತಹ ನವೋದಿತ ಸಮಾಜವಿಜ್ಞಾನದ ಬೆಳವಣಿಗೆಗೆ ಈ ಪಾಶ್ಚಾತ್ಯ ದೇಶಗಳ ಚಿಂತಕರ ಕೊಡುಗೆ ಮಹತ್ತ್ವದಿದ್ದಿರಬಹುದಾದರೂ ಇಪ್ಪತ್ತನೆ ಶತಮಾನದ ಕೊನೆಯ ಹಂತದಲ್ಲಿ ಹಾಗೂ ಇಪ್ಪತ್ತೊಂದನೆ ಶತಮಾನದ ಆದಿಭಾಗದಲ್ಲಿ ಹೊರಬಿದ್ದ ಇಂತಹ ಪದಕೋಶಗಳಲ್ಲಿ ಅನ್ಯಾನ್ಯ ದೇಶಗಳಿಗೆ ಸೇರಿದವರಾಗಿದ್ದರೂ ಜಾಗತಿಕ ಮಾನವ ಹಾಗೂ ಸಾಮಾಜಿಕ ಚಿಂತನೆಗೆ ಕೊಡುಗೆ ನೀಡಿದ ಆಯ್ದ ಕೆಲವು ಚಿಂತಕರ ಬಗ್ಗೆ ಪ್ರಸ್ತಾಪಿಸುವುದು ಅವಶ್ಯವಾಗಿತ್ತು ಎಂದೆನಿಸುವುದು. ಅಲ್ಲದೆ ಇಂತಹ ಕೆಲವು ಪುಸ್ತಕಗಳನ್ನು ಭಾರತದಂತಹ ಏಷ್ಯಾದ ದೇಶಗಳಲ್ಲಿ ರಿಯಾಯಿತಿ ದರದಲ್ಲಿ ಮಾರಾಟ ಮಾಡುತ್ತಿರುವಾಗ ಈ ದೇಶಗಳಲ್ಲಿನ ಆಯ್ದ ಕೆಲವು ಮಹಾನ್ ಚಿಂತಕರ ಬಗ್ಗೆ ಸಂಕ್ಷಿಪ್ತವಾಗಿಯಾದರೂ ಈ ಪುಸ್ತಕಗಳಲ್ಲಿ ಉಲ್ಲೇಖಿಸುವುದರಿಂದ ಅವುಗಳ ವಿಷಯ ವ್ಯಾಪ್ತಿ ಇನ್ನಷ್ಟು ಹೆಚ್ಚುತ್ತಿತ್ತು. ಈಗಿನ ಸದ್ಯದ ಸ್ಥಿತಿಯಲ್ಲಿ ವಿದೇಶೀ ಮೂಲದ ಕೃತಿಗಳಿಂದ ಇದನ್ನು ನಿರೀಕ್ಷಿಸುವುದು ಸಾಧ್ಯವಿಲ್ಲವಾದ್ದರಿಂದ (ಅದೇ ಪುಸ್ತಕಗಳನ್ನೇ ಅನಿವಾರ್ಯವಾಗಿ ಎಂಬಂತೆ ಮುಖ್ಯ ಆಕರ ಗ್ರಂಥಗಳನ್ನಾಗಿರಿಸಿಕೊಂಡು ಈ ನನ್ನ 'ಕಿರು ವಿಶ್ವಕೋಶ ಸರಣಿಯನ್ನು ಸಿದ್ಧಪಡಿಸಿದ್ದಿರಬಹುದಾದರೂ) ಎಲ್ಲೆಲ್ಲಿ ನಮಗೆ ಸಾಧ್ಯವೋ ಅಂತಹ ಕಡೆಗಳಲ್ಲಿ ನಮ್ಮ ದೇಶದ ಸಮಾಜವಿಜ್ಞಾನಗಳ ವಿದ್ಯಾರ್ಥಿಗಳಿಗೆ ನಮ್ಮ ಸಮಾಜದ ಚಿಂತಕರ ಕೊಡುಗೆಗಳ ಬಗ್ಗೆ ಹಾಗೂ ದೇಶೀಯ ನೆಲೆಯ

ಪರಿಕಲ್ಪನೆಗಳ ಬಗ್ಗೆ ಒಂದಿಷ್ಟು ಕಿರು ಮಾಹಿತಿಯನ್ನು ನೀಡುವ ಪ್ರಯತ್ನವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ.

4. ಇಲ್ಲಿ ಉಲ್ಲೇಖಿಸಿದ ಅಂಶಕ್ಕೆ ಪೂರಕವಾಗಿ 'ಕಿರು ವಿಶ್ವಕೋಶ ಸಂಪುಟ–2' ಎಂಬ ಈ ಕೃತಿಯಲ್ಲಿಯೂ ಈ ಕೊರತೆಯನ್ನು ನೀಗಿಸುವ ಕಿರುಪ್ರಯತ್ನ ಮಾಡಿರುವುದನ್ನು ಕಾಣಬಹುದು. ಅಂದರೆ ಈ ಪುಸ್ತಕದಲ್ಲಿ ಭಾರತೀಯ ಸಮಾಜ/ ಪರಿಸರಕ್ಕೆ ಸಂಗತವಾದ ಮತ್ತು ಭಾರತೀಯ ಸಂದರ್ಭಗಳಿಗೆ ಹೊಂದಿಕೊಳ್ಳುವ ವಿವರಣೆ, ವ್ಯಾಖ್ಯಾನ ಹಾಗೂ ಉದಾಹರಣೆಗಳನ್ನು ಅಲ್ಲಲ್ಲಿ ನೀಡಲಾಗಿದೆ. ಅಲ್ಲದೆ ಭಾರತೀಯ ಮೂಲದ್ದೆನ್ನಬಹುದಾದ ಹೆಚ್ಚುಕಡಿಮೆ 260 ಪರಿಕಲ್ಪನೆ/ ಪದಗಳಿವೆ ಹಾಗೂ ಸಂಪುಟ 1ರಲ್ಲಿ ಮಾಡಿರುವಂತೆ ಭಾರತೀಯ ಸಮಾಜಶಾಸ್ತ್ರಜ್ಞರನ್ನೊಳಗೊಂಡಂತೆ ಸುಮಾರು 112 ಮಂದಿ ಭಾರತೀಯ ಸಮಾಜ ಚಿಂತಕರು/ ಸಾಧಕರು ಹಾಗೂ ಸುಧಾರಕರ ಬಗ್ಗೆ ಒಂದಿಷ್ಟು ಮಾಹಿತಿ ಇದೆ.

5. ಕಿರು ವಿಶ್ವಕೋಶ ಸಂಪುಟ–1ರಲ್ಲಿ ಅರ್ಥ ವ್ಯಾಖ್ಯಾನ ನೀಡಲಾಗಿದ್ದ ಕೆಲವೊಂದು ಪದ ಪರಿಕಲ್ಪನೆಗಳಿಗೆ [ಉದಾ: Globalisation ಇತ್ಯಾದಿ] ಈ ಬಾರಿ ಮತ್ತೆ ಪುನಃ ಅಗತ್ಯತೆಯ ಆಧಾರದ ಮೇಲೆ ಹೆಚ್ಚುವರಿ ವಿವರಣೆ ನೀಡಿದ್ದು ಓದುಗರಿಗೆ ಸಾಮಯಿಕವಾಗಿ ಸಹಾಯಕವಾಗುವಂತೆ ಮಾಡಲಾಗಿದೆ.

   ಸಮಾಜಶಾಸ್ತ್ರವನ್ನು ಅಭ್ಯಸಿಸುವವರ, ಅದು ಒಳಗೊಂಡಿರುವ ವಿಷಯಗಳನ್ನು ಕುರಿತು ಗ್ರಂಥ ರಚಿಸುವವರ, ಮುಖ್ಯವಾಗಿ ಪಠ್ಯಪುಸ್ತಗಳನ್ನು ಸಿದ್ಧಪಡಿಸುವವರ ಹಾಗೂ 'ಸಮಾಜಶಾಸ್ತ್ರದ ಪದಕೋಶ' ಇಲ್ಲವೇ ವಿಶ್ವಕೋಶದಂತಹ ಬೃಹತ್ ಕೃತಿಯನ್ನು ಹೊರತರಲು ಉದ್ದೇಶಿಸುವವರ ಗಮನಕ್ಕೆ ಬಹುಬೇಗನೆ ಬರುವ ಒಂದು ಮುಖ್ಯ ಅಂಶವೆಂದರೆ, ಸಮಾಜಶಾಸ್ತ್ರವು ಒಂದು ಅಚ್ಚುಕಟ್ಟಾದ, ಇಲ್ಲವೇ ಕ್ರಮವರಿತು ಸುವ್ಯವಸ್ಥಿತವಾಗಿ ರೂಪಿಸಿದ ಅಧ್ಯಯನಶಾಸ್ತ್ರವಲ್ಲ ಎಂಬುದು. ಸಮಾಜ ಹಾಗೂ ಸಾಮಾಜಿಕ ಸಂಬಂಧಗಳ ಅಧ್ಯಯನಶಾಸ್ತ್ರವಾಗಿರುವ ಸಮಾಜಶಾಸ್ತ್ರದ ಗಡಿಗಳು ಬಹು ವಿಸ್ತೃತವಾಗಿದ್ದು ಅವುಗಳನ್ನು ನಿಖರವಾಗಿ ಗುರುತಿಸುವುದೇ ಕಷ್ಟವಾಗಿರುವುದರಿಂದ ಮತ್ತು ಎಷ್ಟೋ ಬಾರಿ ಅವು ಇತರ ಸಮಾಜವಿಜ್ಞಾನಗಳ ಕಕ್ಷೆಗಳ ಮೇಲೂ ಚಾಚಿಕೊಂಡಿರುವುದರಿಂದ ಆ ಅಧ್ಯಯನ ಕ್ಷೇತ್ರಗಳಿಗೆ ಹೆಚ್ಚು ಪ್ರಸ್ತುತವಿರುವ ಕೆಲವು ಪದಗಳು, ಪರಿಕಲ್ಪನೆಗಳು ಹಾಗೂ ಚಿಂತಕರ ಬಗೆಗಿನ ಪ್ರಸ್ತಾಪಗಳು ಸಮಾಜಶಾಸ್ತ್ರದಲ್ಲಿಯೂ ಆಗಿಂದಾಗ್ಗೆ ಬರುವುದು ತೀರಾ ಸಹಜ. ಇಂತಹ ಪ್ರಸ್ತಾಪಗಳನ್ನು ಕೂಡ ಗಮನದಲ್ಲಿರಿಸಿಕೊಂಡು ಈ ಸಂಪುಟವನ್ನು ಸಿದ್ಧಗೊಳಿಸಲಾಗಿದೆ.

6. ಕಿರು ವಿಶ್ವಕೋಶ ಸಂಪುಟ–1ರಲ್ಲಿ 'ವಿಶೇಷ ಲಕ್ಷಣಗಳ ಕುರಿತು' [ಪುಟ 20] ಉಲ್ಲೇಖ ಮಾಡುವಾಗ ತಿಳಿಸಿದ್ದಂತೆ ಈಗಿನ ಸಂಪುಟ–2ರಲ್ಲಿಯೂ ಕೂಡ ಸಮಾಜಶಾಸ್ತ್ರದ ಜೊತೆ ಜೊತೆಗೆ ಸಮಾಜಶಾಸ್ತ್ರೀಯ ಅಧ್ಯಯನದ ಸಂದರ್ಭದಲ್ಲಿ ಹೆಚ್ಚು ಸಹಾಯಕ ವಾಗಬಹುದೆನ್ನುವ ಉದ್ದೇಶದಿಂದ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮನಃಶಾಸ್ತ್ರ, ಇತಿಹಾಸ, ಮಾನವಶಾಸ್ತ್ರ, ತತ್ತ್ವಶಾಸ್ತ್ರ, ಶಿಕ್ಷಣಶಾಸ್ತ್ರ, ಭಾರತಶಾಸ್ತ್ರ(Indology), ಮತಧರ್ಮ–ಇವೇ ಮೊದಲಾದ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವಾರು ಪದಗಳನ್ನು, ಪರಿಕಲ್ಪನೆಗಳನ್ನು ಮತ್ತು ಈ ಕ್ಷೇತ್ರಗಳಲ್ಲಿ ಹೆಚ್ಚು ಪ್ರಸಿದ್ಧಿ ಪಡೆದ ಕೆಲವು ವ್ಯಕ್ತಿಗಳನ್ನು ಔಚಿತ್ಯವರಿತು ಪರಿಚಯಿಸುವ ಪ್ರಯತ್ನ ಮಾಡಲಾಗಿದೆ.

7. ಈಗಿನ ಕಿರು ವಿಶ್ವಕೋಶ ಸಂಪುಟ–2ರಲ್ಲಿ ಪ್ರಕಟಿತ ಕಿರುವಿಶ್ವಕೋಶ ಸಂಪುಟ–1ರಲ್ಲಿ ಕಣ್ತಪ್ಪಿನಿಂದ ಬಿಟ್ಟುಹೋಗಿರಬಹುದಾದ ಸಮಾಜಶಾಸ್ತ್ರೀಯ ಪ್ರಾಮುಖ್ಯದ ಕೆಲವು ಸಾಮಾನ್ಯ ಪದ/ ಪರಿಕಲ್ಪನೆಗಳ ಜೊತೆಗೆ [ಉದಾ: Sociological Perspective, Social Justice, Empowerment of Women ಇತ್ಯಾದಿ] ಇದೀಗ ಹೆಚ್ಚು ಪ್ರಾಮುಖ್ಯ ಗಳಿಸಿ ಚಾಲನೆಯಲ್ಲಿರುವ ಪದ ಪರಿಕಲ್ಪನೆಗಳನ್ನು [ಉದಾ: Post structuralism, Post modernism, Social Media, Facebook... ಇತ್ಯಾದಿ] ಕೂಡ ಸಾಧ್ಯವಾದಷ್ಟು ಸಂಕ್ಷಿಪ್ತದಲ್ಲಿ ಪರಿಚಯಿಸುವ ಪ್ರಯತ್ನವನ್ನು ಮಾಡಲಾಗಿದೆ.
8. ಈ ಕೃತಿಯ ಬಳಕೆಯನ್ನು ಹೆಚ್ಚು ವ್ಯಾಪಕವಾಗಿ ಮಾಡಲು ಸಾಧ್ಯವಾಗುವಂತೆ ಇದನ್ನು ಸಮಾಜಶಾಸ್ತ್ರವನ್ನು ಇದೀಗ ಅಧ್ಯಯನ–ಅಧ್ಯಾಪನ ಮಾಡುತ್ತಿರುವವರಿಗೆ ಮಾತ್ರ ಅನುಕೂಲವಾಗುವಂತೆ ಸಂಕುಚಿತಗೊಳಿಸದೆ ಐಎಎಸ್, ಕೆಎಎಸ್, ಎನ್ಇಟಿ, ಎಸ್ಎಲ್ಇಟಿ, ಕೆಎಸ್ಇಟಿ, ಸರಕಾರಿ ಇಲಾಖಾ ಪರೀಕ್ಷೆಗಳು ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ಮಾಡುವವರಿಗೆ, ಜೊತೆಗೆ ನರ್ಸಿಂಗ್, ಹೋಟೆಲ್ ಮ್ಯಾನೇಜ್‌ಮೆಂಟ್, ಬಿಎಸ್‌ಡಬ್ಲ್ಯೂ, ಎಂಎಸ್‌ಡಬ್ಲ್ಯೂ ಎಂಬಿಎ, ಬಿ.ಎಡ್, ಲಾ, ಮುಂತಾದ ಕೋರ್ಸ್‌ಗಳನ್ನು ಮಾಡುವವರಿಗೆ ಕೂಡ ಸಹಾಯಕವಾಗುವಂತೆ ಸ್ವಲ್ಪ ಹೆಚ್ಚು ವಿಸ್ತೃತ ವ್ಯಾಪ್ತಿಯಲ್ಲಿ ಸಿದ್ಧಗೊಳಿಸಲಾಗಿದೆ.
9. ಈ ಕೃತಿಯನ್ನು ಶಾಸ್ತ್ರೀಯತೆಯ ಕಟ್ಟುಪಾಡುಗಳಿಗೆ ಒಳಪಡಿಸದೆ ಸಮಾಜಶಾಸ್ತ್ರದ ವಿದ್ಯಾರ್ಥಿಗಳಲ್ಲದವರ ಬಳಕೆಯಲ್ಲಿಯೂ ಆಸಕ್ತಿ ಹುಟ್ಟುವಂತೆ ಮಾಡಲು 'ಪಂಡಿತರ ಭಾಷೆ'ಗಿಂತಲೂ ಸಾಮಾನ್ಯರ ಭಾಷೆಯನ್ನೇ ಬಳಸಿ ಸಿದ್ಧಗೊಳಿಸಲಾಗಿದೆ. ಅಂತೆಯೇ, ಇದರಲ್ಲಿ ಪರಿಚಯಿಸಲಾಗಿರುವ ಒಟ್ಟು 2117 ಪದಗಳ ಹಾಗೂ 223 ವ್ಯಕ್ತಿಗಳನ್ನು ಕುರಿತಾದ ಒಟ್ಟು 1220 ಪುಟಗಳ ಮಾಹಿತಿ, ವಿವರಣೆ, ವ್ಯಾಖ್ಯಾನಗಳಲ್ಲಿ ಕನಿಷ್ಠ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಸಾಮಾನ್ಯ ಓದುಗರೂ ಆಸಕ್ತಿಯಿಂದ ಓದಲು ಸಾಧ್ಯವಾಗುವಂತಿದೆ ಎಂದು ಖಚಿತವಾಗಿ ಹೇಳಬಹುದು. ಇದೇ ಕಾರಣಕ್ಕಾಗಿ ಈ ಪುಸ್ತಕವನ್ನು ಸಮಾಜಶಾಸ್ತ್ರವನ್ನು ಬೋಧಿಸುವ/ ಕಲಿಯುವ ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ, ಸ್ನಾತಕೋತ್ತರ ಕೇಂದ್ರಗಳಲ್ಲಿ ಮಾತ್ರವಲ್ಲದೆ ಪ್ರೌಢಶಾಲೆಗಳನ್ನು ಒಳಗೊಂಡಂತೆ ಪದವಿಪೂರ್ವ ಕಾಲೇಜುಗಳು, ಬಿ.ಎಡ್. ಹಾಗೂ ಕಾನೂನು ಕಾಲೇಜುಗಳು, ತಾಂತ್ರಿಕ, ವೈದ್ಯಕೀಯ ಮುಂತಾದ ವೃತ್ತಿಪರ ವಿದ್ಯಾಸಂಸ್ಥೆಗಳು, ಸಾರ್ವಜನಿಕ ಗ್ರಂಥಾಲಯಗಳು–ಮುಂತಾದ ಸಂಸ್ಥೆಗಳಲ್ಲಿ ಪರಾಮರ್ಶನಕ್ಕೆ ಅನುಕೂಲವಾಗುವಂತೆ ಬಳಸಬಹುದಾಗಿದೆ.
10. ಈ ಕೃತಿಯಲ್ಲಿ ಇನ್ನೊಂದು ವಿಶೇಷತೆಯಿದೆ. ಮಹಾನ್ ಚಿಂತಕರ, ಸಾಧಕರ, ಸುಧಾರಕರ ಹಾಗೂ ಶ್ರೇಷ್ಠ ವ್ಯಕ್ತಿಗಳ ಜೀವನಚರಿತ್ರೆಯನ್ನು ಓದಬೇಕೆಂಬ ಇಚ್ಛೆ ಇದ್ದವರಿಗೆ ಆಸಕ್ತಿದಾಯಕವಾಗಿ ಎಂಬಂತೆ ಈ ಕೃತಿಯಲ್ಲಿ ಒಟ್ಟು ಸುಮಾರು 223 ಮಂದಿ ಅಂತಹ ಶ್ರೇಷ್ಠ ವ್ಯಕ್ತಿಗಳ ಸಂಕ್ಷಿಪ್ತ ಪರಿಚಯವನ್ನು ಹೆಚ್ಚಿನ ಸಂದರ್ಭಗಳಲ್ಲಿ ಅವರ ಫೋಟೊ ಸಮೇತ ನೀಡಲಾಗಿದೆ. ಇಂತಹ ಪರಿಚಯ ನೀಡುವ ಸಂದರ್ಭದಲ್ಲಿ ವ್ಯಕ್ತಿಗಳ ಆಯ್ಕೆಯನ್ನು ಭಾರತಕ್ಕೆ ಮಾತ್ರ ಸೀಮಿತವಾಗಿರಿಸದೆ ಜಗತ್ತಿನ ಹಲವಾರು ದೇಶಗಳಿಗೆ ಮತ್ತು ಹಲವಾರು ವಿಚಾರಧಾರೆಗಳಿಗೆ ಸಂಬಂಧಿಸಿದ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಔಚಿತ್ಯವರಿತು ಆಯ್ಕೆ ಮಾಡಿಕೊಳ್ಳಲಾಗಿದೆ.

ಹೀಗೆ ಪರಿಚಯಿಸಲಾಗಿರುವ ವ್ಯಕ್ತಿಗಳನ್ನು ಕುರಿತು ಓದುತ್ತಾ ಹೋಗುವ ಓದುಗರಿಗೆ ಇನ್ನೂ ಹೆಚ್ಚಿನ ಮಹತ್ತ್ವದ ಸಾಧನೆಗೈದ ಅದೆಷ್ಟೋ ವ್ಯಕ್ತಿಗಳ ಪರಿಚಯವನ್ನು ಇದರಲ್ಲಿ ಮಾಡಬಹುದಿತ್ತು. ಅಥವಾ ಅತ್ಯಂತ ಪ್ರಮುಖ ವ್ಯಕ್ತಿಗಳ ಪ್ರಸ್ತಾಪವೇ ಇದರಲ್ಲಿಲ್ಲ ಎಂದು ಅನಿಸಲೂಬಹುದು. ಅಥವಾ ಅಂತಹ ಆಕ್ಷೇಪಣೆ ಅವರಿಂದ ಬರಲೂಬಹುದು. ಆದರೆ ಈ ಕುರಿತು ಹೆಚ್ಚು ಚರ್ಚೆಗೆ ಹೋಗದೆ ಪ್ರತಿಯೊಂದು ಕೃತಿಗೂ ಅದರದ್ದೇ ಆದ ಕೆಲವು ಇತಿಮಿತಿಗಳಿರುವಂತೆ ಕೃತಿಕಾರನಿಗೂ ತನ್ನದೇ ಆದ ಇತಿಮಿತಿಗಳಿವೆ ಎಂದು ವಿನಮ್ರನಾಗಿ ಹೇಳಲಿಚ್ಛಿಸುತ್ತೇನೆ.

11. ಕಿರು ವಿಶ್ವಕೋಶ ಸಂಪುಟ–1ರಲ್ಲಿ ಹೇಳಿರುವ ಅಂಶವನ್ನು {ಪುಟ 21} ಮತ್ತೆ ಪುನರುಚ್ಚರಿಸಲಿಚ್ಛಿಸುತ್ತೇನೆ. ಅಂದರೆ ಈ ಕೃತಿಯನ್ನು ಕಿರು ವಿಶ್ವಕೋಶವೆಂದು ಕರೆಯಲಾಗಿದ್ದರೂ ಇದು ನನ್ನೊಬ್ಬನ ಪ್ರಯತ್ನದ ಹಾಗೂ ನನ್ನೆಲ್ಲಾ ಬೌದ್ಧಿಕ ಇತಿಮಿತಿಗಳಿಗೆ ಒಳಪಟ್ಟ ಕೃತಿ. ಇಲ್ಲಿ ಪರಿಚಯಿಸಲಾಗಿರುವ ವಸ್ತು–ವಿಷಯ/ ಪದ–ಪರಿಕಲ್ಪನೆ ಹಾಗೂ ವ್ಯಕ್ತಿಗಳ ಕುರಿತಂತೆ ತತ್‌ಕ್ಷಣಕ್ಕೆ ಲಭ್ಯವಿದ್ದಷ್ಟು ಮಾಹಿತಿಯನ್ನು, ಈ ಕೃತಿಯ ಇತಿಮಿತಿಯ ಹಿನ್ನೆಲೆಯಲ್ಲಿ ನನ್ನ ಗ್ರಹಿಕೆಗೆ ತಕ್ಕಂತೆ ಪ್ರಸ್ತಾಪಿಸುವ ಪ್ರಯತ್ನ ಮಾಡಿದ್ದೇನೆ. ಇದೇ ಅಧಿಕೃತ ಹಾಗೂ ಅಂತಿಮ ಎಂದು ಹೇಳಲಾರೆ. ಸಮಾಜಶಾಸ್ತ್ರದಂತಹ ಸದಾ ಬೆಳೆಯುತ್ತಿರುವ ವಿಜ್ಞಾನದಲ್ಲಿ ಹಾಗೆ ಹೇಳುವುದು ಸಾಧ್ಯವೂ ಇಲ್ಲ. ಆದಾಗ್ಯೂ ಹಲವಾರು ಸಮಾಜಶಾಸ್ತ್ರ ನಿಘಂಟು ಪುಸ್ತಕಗಳ ಹಾಗೂ ಇನ್ನಿತರ ಕೃತಿಗಳ ಮಾಹಿತಿಯ ಆಧಾರದಲ್ಲಿಯೇ ಹೆಚ್ಚಿನ ಕಡೆಗಳಲ್ಲಿ ವಿವರಣೆ/ ವ್ಯಾಖ್ಯಾನ ನೀಡಿದ್ದೇನೆ ಎಂದು ಮಾತ್ರ ಹೇಳಬಲ್ಲೆ. ಮಾಹಿತಿಯ ಕೊರತೆಯಿರುವ ಕೆಲವು ಸಂದರ್ಭಗಳಲ್ಲಿ ಪತ್ರಿಕೆಗಳು, ನಿಯತಕಾಲಿಕೆಗಳು, ಸಾಪ್ತಾಹಿಕಗಳು ಮತ್ತು ಮಾಸಿಕ ಪತ್ರಿಕೆಗಳಲ್ಲಿನ ಮಾಹಿತಿಯನ್ನು ಬಳಸಿಕೊಂಡಿದ್ದೇನೆ. ಒಟ್ಟಿನಲ್ಲಿ ಹೇಳುವುದಿದ್ದರೆ ಸ್ವಂತದ ವಿವರಣೆಗಳು ತೀರಾ ಕಡಿಮೆಯಿದ್ದು ಅನ್ಯಾನ್ಯ ಗ್ರಂಥಗಳಲ್ಲಿ ಉಲ್ಲೇಖವಿರುವ ವಿವರಣೆ–ವ್ಯಾಖ್ಯಾನ–ಮಾಹಿತಿಯಲ್ಲಿ ಸೂಕ್ತವಾದುದಷ್ಟನ್ನು ಮಾತ್ರ ಆಯ್ಕೆ ಮಾಡಿಕೊಂಡು ನನ್ನದೇ ಆದ ಶೈಲಿಯಲ್ಲಿ ನಿರೂಪಿಸಿದ್ದೇನೆ.

12. ಕಿರು ವಿಶ್ವಕೋಶ ಸಂಪುಟ–1ನ್ನು ರಚಿಸುವ ಕೊನೆಯ ಹಂತದಲ್ಲಿ ಸಾಕಷ್ಟು ವ್ಯಾಪಕವಾಗಿ ಹಾಗೂ ಬೃಹತ್ ಸ್ವರೂಪದಲ್ಲಿಯೆ ಇದೆ ಎಂಬ ಭಾವನೆಯುಂಟಾಗಿದ್ದರೂ ಚಿಕ್ಕ ಅಕ್ಷರಗಳಿಂದ 1000 ಪುಟಗಳಿದ್ದು ಅದನ್ನು ಬರೆದು ಮುಗಿಸಿ 2001ರಲ್ಲಿ ಪ್ರಕಟಿಸಿದ ಅಲ್ಪ ಕಾಲದಲ್ಲಿಯೇ ಅದರಲ್ಲಿ ಅನೇಕ ಪ್ರಮುಖ ಪದ–ಪರಿಕಲ್ಪನೆಗಳೇ ಬಿಟ್ಟುಹೋಗಿವೆ ಎಂಬ ಅಂಶ ಗಮನಕ್ಕೆ ಬಂದಿತ್ತು. ಆದರೆ ಇದೀಗ 2019ರಲ್ಲಿ ಸುಮಾರು 18 ವರ್ಷಗಳ ನಂತರ ಮತ್ತೆ ಅದೇ ಭಾವನೆ ಮನಸ್ಸಿಗೆ ಬರುತ್ತಿದೆ. ಆರಂಭದಲ್ಲಿ ಕಿರುವಿಶ್ವಕೋಶ ಸಂಪುಟ–1ಕ್ಕೆ ಕೇವಲ ಅನುಬಂಧದ ರೂಪದಲ್ಲಿ ಬಿಟ್ಟುಹೋದ ಕೆಲವು ಪ್ರಮುಖ ಪದ/ಪರಿಕಲ್ಪನೆ/ವ್ಯಕ್ತಿಗಳನ್ನು ಸೇರಿಸುವ ವಿಚಾರವಿದ್ದರೂ ಬರಬರುತ್ತಾ ಅದರ ಗಾತ್ರ ಹೆಚ್ಚತೊಡಗಿ ಇದೀಗ ಸಂಪುಟ 1ರ ಗಾತ್ರವನ್ನು ಮೀರಿ ಒಟ್ಟು ಸುಮಾರು 1220ಕ್ಕೂ ಮೀರಿದ ಪುಟಗಳೊಂದಿಗೆ ಹೊರಹೊಮ್ಮಿದರೂ ಇದಕ್ಕೆ ಇನ್ನೂ ಒಂದಿಷ್ಟು ಹೊಸ ವಿಚಾರ, ವೈಚಾರಿಕ ಒಲವುಗಳು ಹಾಗೂ ಬೆಳವಣಿಗೆಗಳ ಬಗ್ಗೆ ಸೇರಿಸಬಹುದಿತ್ತು ಎನ್ನಿಸುತ್ತಿದೆ. 'ಜ್ಞಾನಕ್ಕೆ ಎಲ್ಲೆ ಎಂಬುದಿಲ್ಲ' ಎಂಬ ತಾತ್ವಿಕತೆಯೇ ಇಂತಹ ತುಡಿತಕ್ಕೊಂದು ಸಮಜಾಯಿಶಿಕೆ ಎಂದುಕೊಳ್ಳುತ್ತೇನೆ.

13. 'ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟ–2' ಎಂಬ ಶಿರೋನಾಮೆಯೇ ಸೂಚಿಸುವಂತೆ ಇದು 2001ರಲ್ಲಿ ಪ್ರಕಟವಾದ ನನ್ನ ಕೃತಿ ಸಮಾಜಶಾಸ್ತ್ರದ ಕಿರು ವಿಶ್ವಕೋಶದ ಮುಂದುವರಿದ ಭಾಗ [ಆಗ ಅದನ್ನು ಸಂಪುಟ–1 ಎಂದು ಕರೆದಿರಲೂ ಇಲ್ಲ]. ಅದನ್ನು ಬರೆದಿರುವ ಶೈಲಿಯಂತೆ ಇದರಲ್ಲಿಯೂ ಕೂಡ ಮುಖ್ಯವಾಗಿ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ಆಂಗ್ಲ ಭಾಷೆಯಲ್ಲಿರುವ ಪಾರಿಭಾಷಿಕ ಪದಗಳಿಗೆ ಕೇವಲ ಕನ್ನಡ ಅನುವಾದ ನೀಡುವ ಪದಕೋಶದಂತಲ್ಲದೆ ಪ್ರತಿಯೊಂದು ಪದದ ಬಗ್ಗೆಯೂ ಸಂಕ್ಷಿಪ್ತ ಮಾಹಿತಿ ಹಾಗೂ ಅರ್ಥ ವಿವರಣೆ ನೀಡುವ ಪ್ರಯತ್ನಮಾಡಲಾಗಿದೆ. 2001 ರಿಂದೀಚೆಗೆ ಈ 18 ವರ್ಷಗಳಲ್ಲಿ ಇದಕ್ಕೆ ಸರಿಗಟ್ಟುವ ಪರ್ಯಾಯವಾಗಿ ಎಂಬಂತೆ ಬೇರಿನ್ನಾವ ಬಗೆಯ ವಿಶ್ವಕೋಶವೂ ಕನ್ನಡದಲ್ಲಿ ರಚನೆಯಾಗದೇ ಇದ್ದುದರ ಹಿನ್ನೆಲೆಯಲ್ಲಿ(ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗವು 2003ರಲ್ಲಿ ಹೊರತಂದ ಡಾ. ಚಂದ್ರಶೇಖರ ದಾಮ್ಲೆಯವರ ಸಂಪಾದಕತ್ವದ 526 ಪುಟಗಳ 'ಸಮಾಜವಿಜ್ಞಾನಗಳ ಪಾರಿಭಾಷಿಕ ಪದಕೋಶ' ಎಂಬ ಡಿಕ್ಷನರಿಯ ಹೊರತಾಗಿ) ಕಿರು ವಿಶ್ವಕೋಶ ಎಂದು ಕರೆದಿರುವುದರ ಹೆಸರಿಗೆ ಒಂದಿಷ್ಟಾದರೂ ಅನ್ವರ್ಥಕವಾಗಿರಲಿ ಎಂಬ ಉದ್ದೇಶದಿಂದಲೂ ಇದೀಗ ಈ ಕಿರು ವಿಶ್ವಕೋಶ ಸಂಪುಟ–2 ಹೊರಬರುತ್ತಿದೆ ಎನ್ನಬಹುದು.

14. ಈ ಕೃತಿಯ ಮಗದೊಂದು ವಿಶೇಷತೆ ಎಂದರೆ, ನನಗೆ ತಿಳಿದಂತೆ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ದೇಶೀಯ ಅಥವಾ ಪ್ರಾಂತೀಯ ಭಾಷೆಯಲ್ಲಿ ಕಿರು ವಿಶ್ವಕೋಶವೊಂದನ್ನು ಚಿಕ್ಕ ಅಕ್ಷರಗಳಿಂದ ಕೂಡಿದ ಸುಮಾರು 2500 ಪುಟಗಳಿಗೆ ಕಡಿಮೆಯಿಲ್ಲದಂತೆ [ಸಾಮಾನ್ಯ ಗಾತ್ರದ ಅಕ್ಷರಗಳಲ್ಲಾದರೆ, ಕನಿಷ್ಠ 3000 ಪುಟಗಳಿಗೆ ಕಡಿಮೆಯಿಲ್ಲದಂತೆ] ಎರಡು ಸಂಪುಟಗಳಲ್ಲಿ ಹೊರತರುವ ಪ್ರಯತ್ನ ನಡೆದಿರುವುದಿಲ್ಲ. ಈ ದೃಷ್ಟಿಯಲ್ಲಿ ಇದೊಂದು ಪ್ರಥಮ ಪ್ರಯತ್ನ. ಅಲ್ಲದೆ ಇದೀಗ ಆಂಗ್ಲಭಾಷೆಯಲ್ಲಿ ಲಭ್ಯವಿರುವ 'ಆಕ್ಸ್‌ಫರ್ಡ್ ಡಿಕ್ಷನರಿ ಆಫ್ ಸೋಶಿಯಾಲಜಿ', 'ಕೊಲಿನ್ಸ್ ಡಿಕ್ಷನರಿ ಆಫ್ ಸೋಶಿಯಾಲಜಿ', 'ಆಕ್ಸ್‌ಫರ್ಡ್ ಕನ್‌ಸೈಸ್ ಡಿಕ್ಷನರಿ ಆಫ್ ಪಾಲಿಟಿಕ್ಸ್', ಡಬ್ಲ್ಯೂ.ಪಿ. ಸ್ಕಾಟ್ರವರ 'ಡಿಕ್ಷನರಿ ಆಫ್ ಸೋಶಿಯಾಲಜಿ' ಹಾಗೂ ಇನ್ನಿತರ ಚಿಕ್ಕ ಗಾತ್ರದ ಡಿಕ್ಷನರಿಗಳಲ್ಲೂ ಕೂಡ ಇದೀಗ ನಾವು ನೀಡಿರುವ 2500 ಪುಟಗಳಷ್ಟು ವಿವರಣೆಯಾಗಲೀ, 4000ಕ್ಕೂ ಅಧಿಕ ಪದಗಳ ಹಾಗೂ 450ಕ್ಕೂ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳ ಭಾವಚಿತ್ರ ಸಹಿತವಾದ ಪರಿಚಯಾತ್ಮಕ ಮಾಹಿತಿಯಾಗಲೀ ಇರುವುದಿಲ್ಲ. ಗುಣಾತ್ಮಕವಾಗಿ ಅವುಗಳನ್ನು ಸರಿಗಟ್ಟಲು ಸಾಧ್ಯವಾಗದೇ ಹೋದರೂ, ಪದಗಳ–ಪರಿಕಲ್ಪನೆಗಳ/ ವ್ಯಕ್ತಿಗಳ ಪರಿಚಯದ ವ್ಯಾಪಕತೆಯಲ್ಲಿ ಅಲ್ಲದೆ ಈ ಯಾವುದೇ ಆಂಗ್ಲಭಾಷಾ ಸಮಾಜಶಾಸ್ತ್ರದ ಡಿಕ್ಷನರಿ ಪುಸ್ತಕಗಳಲ್ಲಿ ಇಲ್ಲದ ಒಂದು ವಿಶೇಷತೆಯಾಗಿ ನಮ್ಮ ಎರಡು ಕಿರು ವಿಶ್ವಕೋಶಗಳಲ್ಲಿ ಒಟ್ಟು 303ಕ್ಕೂ ಅಧಿಕ ವ್ಯಕ್ತಿಗಳ ಭಾವಚಿತ್ರಗಳನ್ನು ನೀಡಲಾಗಿದೆ. ಈ 303 ಭಾವಚಿತ್ರಗಳಲ್ಲಿ ಸುಮಾರು 120ರಷ್ಟು ಭಾವಚಿತ್ರಗಳು ಭಾರತೀಯ ಚಿಂತಕರ/ ವ್ಯಕ್ತಿಗಳ ಕುರಿತಾದವುಗಳಾಗಿದ್ದರೆ ಮಿಕ್ಕುಳಿದ 183 ಭಾವಚಿತ್ರಗಳು ವಿದೇಶೀ ಚಿಂತಕರ/ ವ್ಯಕ್ತಿಗಳ ಕುರಿತಾದವುಗಳಾಗಿವೆ.

15. ಈ ಪುಸ್ತಕವನ್ನು ಸುಲಭವಾಗಿ ಬಳಕೆ ಮಾಡುವ ದೃಷ್ಟಿಯಿಂದ ಕಿರು ವಿಶ್ವಕೋಶ ಸಂಪುಟ–1ರ ಸಂದರ್ಭದಲ್ಲಿ ಮಾಡಿದಂತೆ 'ಸಮಾಜಶಾಸ್ತ್ರ ಶಬ್ದಾರ್ಥ ಮಂಜರಿ' ಎಂಬ ಕಿರುಹೊತ್ತಗೆಯನ್ನು ಈ ಬಾರಿಯೂಮುದ್ರಿಸಿ ಈ ಪುಸ್ತಕ ಕೊಂಡು

ಕೊಂಡವರಿಗೆ ಉಚಿತವಾಗಿ ನೀಡುವ ಕೊಡುಗೆಯನ್ನು ಕಲ್ಪಿಸಲಾಗಿದೆ. ಅಂದರೆ, ಕಳೆದ ಬಾರಿಯ ಸಂಪುಟ–1ರಲ್ಲಿ ಮುದ್ರಿಸಿದ್ದ ಶಬ್ದಾರ್ಥ ಮಂಜರಿ ಪುಸ್ತಕಕ್ಕೆ ಅದರ ಅಂತ್ಯದಲ್ಲಿ ಹಾಗೂ ಅದರ ದ್ವಿತೀಯಾರ್ಧದಲ್ಲಿ ಈಗಿನ ಪುಸ್ತಕದಲ್ಲಿರುವ ಶಬ್ದಗಳನ್ನು/ ಪರಿಕಲ್ಪನೆಗಳನ್ನು ಇಂಗ್ಲಿಷ್ ವರ್ಣಮಾಲೆಯ ಸರಣಿಯಂತೆ ಅರ್ಥಸಹಿತವಾಗಿ [ವಿವರಣೆ ಹೊರತುಪಡಿಸಿ] ಮುದ್ರಿಸಿ ಆಯಾ ಪದಗಳು/ ಪರಿಕಲ್ಪನೆಗಳು ಯಾವಯಾವ ಪುಟಗಳಲ್ಲಿ ಬರುತ್ತವೆ ಎಂಬುದನ್ನು ಕೂಡ ಸೂಚಿಸಲಾಗಿದೆ. ಇದೇ ಶಬ್ದಾರ್ಥ ಮಂಜರಿ ಪುಸ್ತಕದಲ್ಲಿ ವಿಶ್ವಕೋಶ ಸಂಪುಟ–1ರಲ್ಲಿರುವ ಪದಗಳ/ ಪರಿಕಲ್ಪನೆಗಳ ಪಟ್ಟಿ ಕೂಡ ಸಂಬಂಧಿತ ಪುಟಗಳ ಸಹಿತ ಯಥಾವತ್ತಾಗಿ ಇರುವುದರಿಂದ ಓದುಗರು ತಾವು ಬಯಸುವ ಪದಗಳು/ ಪರಿಕಲ್ಪನೆಗಳು ಪದಪುಂಜಗಳು ಅಥವಾ ಚಿಂತಕರ ಕುರಿತಾದ ಮಾಹಿತಿ ನಮ್ಮ ಕಿರು ವಿಶ್ವಕೋಶ ಸರಣಿಯ ಯಾವ ಸಂಪುಟದ ಯಾವ ಪುಟದಲ್ಲಿ ಲಭ್ಯವಿದೆ ಎಂಬುದನ್ನು ಕೂಡ ತಕ್ಷಣ ಕಂಡುಕೊಳ್ಳಬಹುದು. ಉದಾ: Bogardus Social Distance Scale= ಬೊಗಾರ್ಡಸ್ ಸಾಮಾಜಿಕ ಅಂತರ ಮಾಪಕ ಎಂಬ ನಮೂನೆಗೆ ಅರ್ಥ ನೀಡುವಾಗ ಇದೇ ವಿಷಯದ ಕುರಿತು ವಿವರಣೆಯಿರುವ ಕಿರುವಿಶ್ವಕೋಶ ಸಂಪುಟ–1ರಲ್ಲಿರುವ ನಮೂದನೆಯನ್ನು ನೋಡಿರಿ: ಕಿರು ವಿಶ್ವಕೋಶ ಸಂಪುಟ–1ರಲ್ಲಿ Social Distance Scale ಪುಟ ಸಂಖ್ಯೆ 783, ಎಂಬುದಾಗಿ ಸೂಚಿಸಲಾಗಿದೆ.

ಅಲ್ಲದೆ, ಈ ಚಿಕ್ಕ ಪುಸ್ತಕವು ಇಂಗ್ಲೀಷ್ ಭಾಷೆಯಲ್ಲಿರುವ ಸಾಮಾಜಿಕ ಮತ್ತು ಸಮಾಜಶಾಸ್ತ್ರೀಯ ಪದಗಳ/ ಪರಿಕಲ್ಪನೆಗಳ ಕನ್ನಡ ಅನುವಾದವೇನೆಂಬುದನ್ನು ತಕ್ಷಣದಲ್ಲಿ ತಿಳಿದುಕೊಳ್ಳುವುದಕ್ಕೂ ಸಹಾಯಕವಾಗುವುದು. ಕೇವಲ ಈ ಉದ್ದೇಶಕ್ಕಾಗಿ ಮಾತ್ರ ಈ ಶಬ್ದಾರ್ಥ ಮಂಜರಿ ಪುಸ್ತಕವನ್ನು ಪ್ರತ್ಯೇಕವಾಗಿ ಕೊಂಡುಕೊಳ್ಳಬೇಕೆಂದರೂ ಅದಕ್ಕೆ ಕೂಡ ಅವಕಾಶವಿದೆ.

16. ಕಿರು ವಿಶ್ವಕೋಶ ಸಂಪುಟ–1ರಲ್ಲಿ ಅದೆಷ್ಟೋ ಹೊಸ ಪದಗಳನ್ನು/ ಪರಿಕಲ್ಪನೆಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸುವ ಸವಾಲು ಎದುರಾದಂತೆ ಈ ಬಾರಿಯೂ ಆಗಿದೆ. ಆದರೆ ಅದೃಷ್ಟವಶಾತ್ ಹಂಪಿ ಕನ್ನಡ ವಿ.ವಿ. ಸಿದ್ಧಗೊಳಿಸಿದ್ದ 'ಸಮಾಜವಿಜ್ಞಾನಗಳ ಪಾರಿಭಾಷಿಕ ಪದಕೋಶ' ಎಂಬ ಕೃತಿಯು 2003ರಲ್ಲಿ ಪ್ರಕಟವಾಗಿದ್ದರಿಂದ ಅದರ ಮೂಲಕ ಅದೆಷ್ಟೋ ಇಂಗ್ಲಿಷ್ ಪದಗಳ/ ಪರಿಕಲ್ಪನೆಗಳ ಕನ್ನಡಾನುವಾದವನ್ನು ತಿಳಿದು ಕೊಳ್ಳಲು ಸಾಧ್ಯವಾಯಿತು. ನನ್ನ ಈ ಕೃತಿಯನ್ನು ಸಿದ್ಧಗೊಳಿಸುವಲ್ಲಿ ಈ ಪದಕೋಶ ನೀಡಿದ ಸಹಾಯವನ್ನು ಮರೆಯಲಾರೆ. ಅಲ್ಲದೆ, ಎಷ್ಟೋ ಪದಗಳಿಗೆ ಅಲ್ಲಿ ನೀಡಿರುವ ಕಿರು ವಿವರಣೆಯನ್ನು ಯಥಾವತ್ತಾಗಿ ಕೂಡ ಉಲ್ಲೇಖಿಸಿದ್ದೇನೆ. ಆದರೆ ಈ ಪಾರಿಭಾಷಿಕ ಪದಕೋಶದಲ್ಲಿಯೂ ಉಲ್ಲೇಖಿತವಾಗಿರದ ಪದಗಳೂ ಈ ಪುಸ್ತಕದಲ್ಲಿ ಸಾಕಷ್ಟಿದ್ದು ಅವುಗಳಿಗೆ ನನ್ನದೇ ಆದ ರೀತಿಯ ಅನುವಾದ ನೀಡಿದ್ದೇನೆ. ಉದಾಹರಣೆಗೆ, ಸ್ವ–ಪ್ರಸ್ತುತೀಕರಣ, ಗಾತ್ರ ಕುಸಿತತೆ, ಪ್ರಣಯ ವಿಹಾರಿ ಅತ್ಯಾಚಾರ, ಅಭಿಪ್ರಾಯ ನಿರ್ವಹಣೆ, ಸಂವಹನ ದೃಷ್ಟಿ ಪಥ, ವೈಧಾನಿಕ ಬಹುತ್ವ, ವಿಶ್ವಾಸಾರ್ಹತೆಯ ಶ್ರೇಣಿವ್ಯವಸ್ಥೆ, ಪೀಡಿತ ವಿಶ್ರಾಂತ ವರ್ಗ, ಯೋಗ್ಯತಾವಾದ, ಇತ್ಯಾದಿ[ಅನುಕ್ರಮವಾಗಿ ಇಂಗ್ಲಿಷ್‌ನಲ್ಲಿ Presentation of Self, Downsizing, Date Rape, Impression Management, Mediascape, Methodological

Pluralism, Hierarchy of Credibility, Harried Leisure Class, Credentialism, etc.]ಗಳು ನಾನು ತಿಳಿದಂತೆ ಕನ್ನಡದಲ್ಲಿ ಮೊತ್ತಮೊದಲ ಬಾರಿಗೆ ಅನುವಾದಿತವಾದ ಪರಿಕಲ್ಪನೆಗಳಾಗಿದ್ದು ಅಂತಹವುಗಳ ಬಗ್ಗೆ ಪರಿಣಿತರು ತಮ್ಮ ಅಭಿಪ್ರಾಯ–ಸಲಹೆ ಸೂಚಿಸಿದರೆ ಸಮಾಜಶಾಸ್ತ್ರದ ಕನ್ನಡ ಶಬ್ದಕೋಶವು ಹೆಚ್ಚು ಶ್ರೀಮಂತವಾಗುವುದು.

17. ಕಿರುವಿಶ್ವಕೋಶ ಸಂಪುಟ–1ರಲ್ಲಿರುವಂತೆ ಈ ಪುಸ್ತಕದಲ್ಲಿಯೂ ಚಿಂತಕರು, ಸಾಧಕರು, ಸುಧಾರಕರು ಮುಂತಾದವರನ್ನು ಪರಿಚಯಿಸುವಾಗ ಸಾಧ್ಯವಾದಲ್ಲೆಲ್ಲಾ ಅವರ ಚಿಕ್ಕ ಭಾವಚಿತ್ರಗಳನ್ನು ನೀಡುವ ಪ್ರಯತ್ನ ಮಾಡಿದ್ದು ಈ ವಿಷಯದಲ್ಲಿ ಆಂಗ್ಲಭಾಷೆಯಲ್ಲಿರುವ **'ಡಿಕ್ಷನರಿ ಆಫ್ ಸೋಶಿಯಾಲಜಿ'** ಎಂಬ ಹೆಸರಿನ ಪುಸ್ತಕಗಳಲ್ಲಿ ಈ ಪ್ರಯತ್ನವಿಲ್ಲದೇ ಇರುವುದರಿಂದಲೂ ಈ ನಮ್ಮ ಕೃತಿ ಅವುಗಳಿಗಿಂತ ಭಿನ್ನವಾಗಿದೆ ಎನ್ನಬಹುದು.

18. ಈ ಹಿಂದಿನ ಕೃತಿಯಂತೆ ಈ ಕೃತಿಯಲ್ಲಿಯೂ ಕೂಡ ಕೆಲವು ಕಡೆಗಳಲ್ಲಿ ಪರಿಕಲ್ಪನೆಗಳ ನಮೂದನೆಗಳನ್ನು ನೀಡುವಾಗ ಆ ಕೂಡಲೇ ಅಲ್ಲಿಯೇ ಅವುಗಳ ಬಗ್ಗೆ ವಿವರಣೆ ನೀಡದೆ ಅವುಗಳಿಗೆ ಸಮಾನಾರ್ಥ ಕೊಡುವ ಇನ್ನಿತರ ನಮೂದನೆಗಳನ್ನು ಉಲ್ಲೇಖಿಸಲಾಗಿದ್ದು ಅವುಗಳನ್ನು ಅಂತಹ ಉಲ್ಲೇಖಿತ ಪದಗಳ/ ಪದಪುಂಜಗಳ/ ಪರಿಕಲ್ಪನೆಗಳ ಮೂಲಕವೇ ಹೆಚ್ಚು ಸುಲಭವಾಗಿ ಹಾಗೂ ಅನುಕೂಲವಾಗುವಂತೆ ವ್ಯಾಖ್ಯಾನಿಸಲಾಗಿದೆ. ಉದಾಹರಣೆಗೆ, Bow and Arrow Ceremony [ಬಿಲ್ಲು ಮತ್ತು ಬಾಣದ ಸಮಾರಂಭ] ಎಂಬ ಪದಪುಂಜವನ್ನು ಅರ್ಥೈಸುವಾಗ ಅದಕ್ಕೆ ಸಂಬಂಧಿಸಿದಂತೆ ನೋಡಿರಿ; Sociological Fatherhood/ Sociological Parenthood ಎಂಬ ನಮೂದನೆಯನ್ನು ಇದೇ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ಇಂತಹ ನಮೂದನೆಗಳಿಂದ ಪದಗಳ–ಪದಪುಂಜಗಳ ನಡುವಿನ ನಿಕಟ ಸಂಬಂಧವು ಮನವರಿಕೆಯಾಗುತ್ತದೆ ಹಾಗೂ ವ್ಯಾಖ್ಯಾನ ನೀಡುವಲ್ಲಿನ ಪುನರಾವರ್ತನೆಯನ್ನು ತಪ್ಪಿಸುವುದು ಕೂಡ ಸಾಧ್ಯವಾಗುತ್ತದೆ.

19. ಈ ಕೃತಿಯಲ್ಲಿ ನಮೂದನೆಗೊಂಡಿರುವ ಹಲವಾರು ಪ್ರಮುಖ ಪದಗಳ/ ಪದಪುಂಜಗಳ/ ಪರಿಕಲ್ಪನೆಗಳ ಪ್ರಮುಖ ವ್ಯಕ್ತಿಗಳ ಕುರಿತಂತೆ ಅರ್ಥ ಇಲ್ಲವೇ ವಿವರಣೆ ನೀಡುವಾಗ ನಾನು ಪಡೆದುಕೊಂಡ ಮಾಹಿತಿಯ ಮೂಲವನ್ನು ಸುಮಾರು 1450ಕ್ಕೂ ಅಧಿಕ ಅಡಿಟಿಪ್ಪಣಿಗಳ ಮೂಲಕ ಔಚಿತ್ಯವರಿತು ಉಲ್ಲೇಖಿಸಲಾಗಿದ್ದು ಇದರಿಂದ ನೀಡಲಾದ ಅರ್ಥ ವ್ಯಾಖ್ಯಾನದ ಅಧಿಕೃತತೆಯನ್ನು ಹೆಚ್ಚಿಸುವುದು ಸಾಧ್ಯವಾಗಿದೆ. ಅಲ್ಲದೆ ಆಸಕ್ತ ಓದುಗರು ಉಲ್ಲೇಖಿತ ಮಾಹಿತಿಯ ಮೂಲಕ್ಕೆ ಹೋಗಿ ಇನ್ನಷ್ಟು ಪೂರಕ ಮಾಹಿತಿಯನ್ನು ಪಡೆದುಕೊಳ್ಳುವುದು ಕೂಡ ಸಾಧ್ಯವಾಗುವಂತಾಗಿದೆ.

ಕೆಲವು ಪ್ರಮುಖ ವ್ಯಕ್ತಿಗಳ ಜೀವನ ವೃತ್ತಾಂತಗಳನ್ನು[Biographic Sketch] ಉಲ್ಲೇಖಿಸುವಾಗ ಅವರು ಹುಟ್ಟಿದ ಹಾಗೂ ಮರಣ ಹೊಂದಿದ ದಿನಾಂಕ ಮತ್ತು ಜೀವಿಸಿದ್ದ ಅವಧಿಯನ್ನು ಮಾತ್ರ ಉಲ್ಲೇಖಿಸದೆ ಅವರ ಜೀವನದ ಪ್ರಮುಖ ಘಟನೆಗಳ, ಅವರ ಜೀವನಶೈಲಿಯ, ಅವರ ಜೀವಿತದ ಸಾಧನೆಗಳ ಬಗ್ಗೆ ಮತ್ತು ಸಮಾಜಕ್ಕೆ ಹಾಗೂ ಮುಂಬರುವ ಪೀಳಿಗೆಗಳಿಗೆ ಅವರು ನೀಡಿದ ಕೊಡುಗೆಗಳ ಕುರಿತು ಕೂಡ ಔಚಿತ್ಯವರಿತು ವಿವರಣೆ ನೀಡಲಾಗಿದೆ. ಮತ್ತೆ ಕೆಲವು ವ್ಯಕ್ತಿಗಳು ಸಮಾಜಕ್ಕೆ ಭಾರೀ ಕೊಡುಗೆಯನ್ನು ನೀಡದೇ ಇದ್ದರೂ ತಾವು ಜೀವಿಸಿದ್ದ ಸಮಾಜದ ಹಾಗೂ ದೇಶದ ಪರಿಸ್ಥಿತಿಗಳನ್ನು ಬದಲಾಯಿಸಲು ಇಲ್ಲವೇ ಪ್ರಭಾವೀಗೊಳಿಸಲು ಹೇಗೆ ಕಾರಣಕರ್ತರಾದರು ಎಂಬ ಬಗ್ಗೆಯೂ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ಇನ್ನು ಕೆಲವು ವ್ಯಕ್ತಿಗಳ ಬಗ್ಗೆ ತಿಳಿಸುವಾಗ ಅವರ ಜೀವಿತದ ಕಾಲ ಹಾಗೂ ಅವರು ರಚಿಸಿದ ಪ್ರಮುಖ

ಗ್ರಂಥಗಳ ಉಲ್ಲೇಖ ಮತ್ತು ಅವರ ಪ್ರಮುಖ ಸಾಧನೆ ಅಥವಾ ಕೊಡುಗೆಗಳ ಬಗ್ಗೆ ಅತಿ ಸಂಕ್ಷಿಪ್ತವಾಗಿ ನಾಲ್ಕಾರು ವಾಕ್ಯಗಳಲ್ಲಿ ಮಾತ್ರ ಪ್ರಸ್ತಾಪಿಸಿರುವುದೂ ಇದೆ.

ಇದೊಂದು ಕೊರತೆ ಎನ್ನುವುದಾದರೆ ಅದಕ್ಕೆ ಅವರನ್ನು ಕುರಿತಾದ ಮಾಹಿತಿಯ ಅಲಭ್ಯತೆ ಒಂದು ಕಾರಣವಾದರೆ, ಕಿರು ವಿಶ್ವಕೋಶದಂತಹ ಸೀಮಿತ ವ್ಯಾಪ್ತಿಯ ಹಾಗೂ ಗಾತ್ರದ ಈ ಪುಸ್ತಕಕ್ಕೆ ಆ ನಿರ್ದಿಷ್ಟ ವ್ಯಕ್ತಿಗಳ ಬಗೆಗಿನ ಇಷ್ಟು ಸಂಕ್ಷಿಪ್ತ ಮಾಹಿತಿ ಸಾಕು ಎನ್ನುವ ನನ್ನ ಮನಸ್ಸಿನ ಭಾವನೆ, ಇನ್ನೊಂದು ಕಾರಣವೆನ್ನಬಹುದು. ಇಂಗ್ಲೀಷ್ ಭಾಷೆಯಲ್ಲಿರುವ ಕೆಲವು 'ಸೋಶಿಯಾಲಜಿ ಡಿಕ್ಷನರಿ'ಗಳಲ್ಲಿ ಆ ಡಿಕ್ಷನರಿಗಳು ರಚನೆಯಾಗಿ ಹೊರಬೀಳುವ ಕಾಲಘಟ್ಟದಲ್ಲಿ ಬದುಕಿದ್ದ ಯಾವುದೇ ವ್ಯಕ್ತಿಗಳ ಬಗ್ಗೆ, ಅವರೆಷ್ಟು ದೊಡ್ಡ ವಿದ್ವಾಂಸರು ಅಥವಾ ಸೈದ್ಧಾಂತಿಕ ಸಾಧಕರಾಗಿದ್ದರೂ ಅವರ ಬಗ್ಗೆ ಯಾವುದೇ ನಮೂದನೆ [entry] ನೀಡದೆ ಕೇವಲ ನಿಧನವಾಗಿರುವವರ ಬಗ್ಗೆ ಮಾತ್ರ ಮಾಹಿತಿ ನೀಡುವ ನಿಯಮವನ್ನು ಹಾಕಿಕೊಂಡಿದ್ದಾರೆ. ಉದಾಹರಣೆಗೆ, ಗಾರ್ಡನ್ ಮಾರ್ಷಲ್‌ರವರ ಸಂಪಾದಕತ್ವದ 'ಆಕ್ಸ್‌ಫರ್ಡ್ ಡಿಕ್ಷನರಿ ಆಫ್‌ಸೋಶಿಯಾಲಜಿ' [1998]ಯ ಮುನ್ನುಡಿಯಲ್ಲಿಯೇ [ಪುಟvii ಮತ್ತು viii] ಸಂಪಾದಕರು ಹೇಳಿಕೊಂಡಿರುವಂತೆ ಸಮಕಾಲೀನ ತಲೆಮಾರಿನ ಜೀವಂತ ಸಮಾಜಶಾಸ್ತ್ರಜ್ಞರುಗಳಲ್ಲಿ ಯಾರು ಪ್ರಭಾವಿಯಾಗಿದ್ದಾರೆ ಯಾರು ವಿವಾದಾಸ್ಪದರಾಗಿದ್ದಾರೆ, ಯಾರನ್ನು ಸಮಾಜಶಾಸ್ತ್ರೀಯ ವಸ್ತುವಿನಂತೆ ಪುಸ್ತಕದಲ್ಲಿ ಅಳವಡಿಸಿಕೊಳ್ಳಬಹುದೆಂಬುದು ಬಗೆಹರಿಯದ ವಿವಾದದ ಸಂಗತಿಯಾಗಿ ಬಿಡುವ ಸಾಧ್ಯತೆಯೇ ಹೆಚ್ಚು". ಅಂತೆಯೇ, ಅವರು ತಮ್ಮ ಡಿಕ್ಷನರಿಯಲ್ಲಿ ಅಂತಹ ವ್ಯಕ್ತಿಗಳ ಜೀವನ ವೃತ್ತಾಂತವನ್ನು ಪ್ರಸ್ತಾಪ ಮಾಡುವ ಪ್ರಯತ್ನ ಮಾಡಿಲ್ಲ. ಆದರೆ ಅಂತಹ ನಿಬಂಧನೆಗಳನ್ನು ನಾನಿಲ್ಲಿ ಹಾಕಿಕೊಳ್ಳದೆ ಹಾಗೂ ಯಾವುದೇ ನಿರ್ದಿಷ್ಟ ಮಾನದಂಡವನ್ನಿರಿಸಿಕೊಳ್ಳದೆ ನನ್ನದೇ ಆದ ತೀರ್ಮಾನದಂತೆ ಸಾಕಷ್ಟು ಮಂದಿ ಶ್ರೇಷ್ಠ ಸಾಧಕರ ಕುರಿತು ಪ್ರಸ್ತಾಪ ಮಾಡಿದ್ದರೂ ಮತ್ತೆ ಕೆಲವು ಅತಿ ಪ್ರಮುಖ ವ್ಯಕ್ತಿಗಳ ಬಗ್ಗೆ ಉಲ್ಲೇಖ ಮಾಡದೇ ಇದ್ದರೆ ಅದನ್ನು ನನ್ನ ಇತಿಮಿತಿಯಿಂದಾದ ಅಥವಾ ಪುಸ್ತಕದ ರಚನೆಯ ಕಾಲದಲ್ಲಿ ಮನಸ್ಸಿಗೆ ಗೋಚರವಾಗದ ಲೋಪದಿಂದಾದ ಕೊರತೆಯೆಂಬುದಾಗಿ ಪರಿಗಣಿಸಬಹುದು.

ಕಿರುವಿಶ್ವಕೋಶದ ಸಂಪುಟ–1ರಲ್ಲಿ ಅನುಸರಿಸಿದ ಕ್ರಮವನ್ನೇ ಅಂದರೆ, ಆಂಗ್ಲಭಾಷಾ ವರ್ಣಮಾಲೆಯ ಅಕ್ಷರಗಳ ಅನುಕ್ರಮಣಿಕೆಯನ್ನೇ ಇದರಲ್ಲಿಯೂ ಅಳವಡಿಸಲಾಗಿದ್ದು 'ಎ' ಅಕ್ಷರದಿಂದ 'ಝಡ್' ಅಕ್ಷರದವರೆಗಿನ ಆಂಗ್ಲಭಾಷಾ ಅಕ್ಷರಗಳಿಂದ ಆರಂಭವಾಗುವ ಸಮಾಜಶಾಸ್ತ್ರೀಯ ಪದ/ ಪರಿಕಲ್ಪನೆ/ ಪದಪುಂಜ ಹಾಗೂ ಚಿಂತಕರ/ ಸುಧಾರಕರ/ ಸಾಧಕರ ಕುರಿತು ಅರ್ಥವಿವರಣೆ/ ವ್ಯಾಖ್ಯಾನ/ ಮಾಹಿತಿ ನೀಡಲಾಗಿದೆ. ಹಾಗೆ, ವ್ಯಾಖ್ಯಾನ/ ವಿವರಣೆ ನೀಡುವಾಗ ಇಂಗ್ಲಿಷ್ ಮೂಲದ ಪದಗಳನ್ನು, ಹೇಳಿಕೆಗಳನ್ನು ಅಭಿಪ್ರಾಯಗಳನ್ನು ಹಾಗೂ ವ್ಯಾಖ್ಯೆಗಳನ್ನು ಅಗತ್ಯವೆನಿಸಿ ಕಂಡುಬಂದಲ್ಲೆಲ್ಲಾ ಆವರಣದಲ್ಲಿ ಇಲ್ಲವೇ ಅಡಿಟಿಪ್ಪಣಿಯ ರೂಪದಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೇ ನೀಡಲಾಗಿದೆ. ಇದರಿಂದ ಓದುಗರಿಗೆ ವಿಷಯ ಗ್ರಹಣ ಮಾಡಲು ಸುಲಭವಾಗುವುದೆಂಬುದು ನನ್ನ ನಂಬಿಕೆ. [ನನ್ನ ಇತರ ಪಠ್ಯಪುಸ್ತಕಗಳು ಹಾಗೂ ಪರಾಮರ್ಶನ ಗ್ರಂಥಗಳಲ್ಲೂ ಇಂಗ್ಲಿಷ್ ಭಾಷಾ ಪದಗಳನ್ನು, ಸೂಕ್ತ ಕಂಡಲ್ಲೆಲ್ಲಾ ಯಥೇಚ್ಛವಾಗಿಯೇ ಬಳಸಿದ್ದು (ಕನ್ನಡದ ಶಾಸ್ತ್ರೀಯತೆಗೆ ಅಥವಾ ಮಡಿವಂತಿಕೆಗೆ ಇದೊಂದು ಅಪಚಾರವೆಂದು ಕೆಲವರು ಟೀಕಿಸಬಹುದಾದರೂ) ಬಹಳಷ್ಟು ಮಂದಿ ಓದುಗರು ಈ ಕ್ರಮವನ್ನು ಮೆಚ್ಚಿಕೊಂಡಿದ್ದಾರೆಂಬುದನ್ನು ಈ ಸಂದರ್ಭದಲ್ಲಿ ತಿಳಿಯಪಡಿಸಲಿಚ್ಛಿಸುತ್ತೇನೆ.]

ಎಲ್ಲಿಯವರೆಗೆ ಆಂಗ್ಲ ಭಾಷೆಯನ್ನೊಳಗೊಂಡಂತೆ ಪಾಶ್ಚಾತ್ಯ ಭಾಷೆಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಉಗಮವನ್ನು ಕಂಡಿರುವ ಸಮಾಜಶಾಸ್ತ್ರೀಯ ಪರಿಕಲ್ಪನೆಗಳಿಗೆ, ಪದಗಳಿಗೆ ಹಾಗೂ ಪದಪುಂಜಗಳಿಗೆ ಸರ್ವತ್ರ ಒಪ್ಪಿಗೆಯಾಗಬಲ್ಲಂತಹ ಹಾತೂ ಒಪ್ಪಿಗೆಯಾಗಿರುವಂತಹ ಸಮಾನಾರ್ಥದ ಕನ್ನಡ ಪದಗಳನ್ನು/ಪರಿಕಲ್ಪನೆಗಳನ್ನು ಕಂಡುಕೊಂಡು ಅವುಗಳ ಬಳಕೆಯನ್ನು ಜನಪ್ರಿಯಗೊಳಿಸಲು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಪದಕೋಶದ, ಇಲ್ಲವೇ ವಿಶ್ವಕೋಶದ ತಯಾರಿಯಲ್ಲಿ ಆಂಗ್ಲಭಾಷಾ ವರ್ಣಮಾಲೆಯ ಅಕ್ಷರಗಳ ಅನುಕ್ರಮಣಿಕೆ ಯನ್ನು ಅನುಸರಿಸುವುದು ಹಾಗೂ ಸಂದರ್ಭೋಚಿತವಾಗಿ ಅಲ್ಲಲ್ಲಿ ಆಂಗ್ಲಭಾಷೆಯಲ್ಲಿ ಪದಗಳನ್ನು/ ವ್ಯಾಖ್ಯೆಗಳನ್ನು ಅಭಿಪ್ರಾಯಗಳನ್ನು ಉಲ್ಲೇಖಿಸುವುದು ಅಗತ್ಯವೆಂಬುದು ನನ್ನ ಅಭಿಮತವಾಗಿದೆ. 2003ರಲ್ಲಿ ಹಂಪಿ ಕನ್ನಡ ವಿ.ವಿ. ಹೊರತಂದ 'ಸಮಾಜವಿಜ್ಞಾನಗಳ ಪಾರಿಭಾಷಿಕ ಪದಕೋಶ'ದಲ್ಲಿಯೂ ಇದೇ ರೀತಿ ಆಂಗ್ಲ ಭಾಷಾವರ್ಣಮಾಲೆಯ ಅನುಕ್ರಮಣಿಕೆಯನ್ನೇ ಅನುಸರಿಸಲಾಗಿದೆ.

ಈ ಕೃತಿಯಲ್ಲಿ ಸಮಾಜಶಾಸ್ತ್ರೀಯ ಹಾಗೂ ಸಾಮಾಜಿಕ ಪ್ರಾಮುಖ್ಯದ ಪಾರಿಭಾಷಿಕ ಪದಗಳ/ ಪರಿಕಲ್ಪನೆಗಳನ್ನು ಕುರಿತು ಮಾಹಿತಿ/ ಅರ್ಥವಿವರಣೆ ನೀಡುವಾಗ ಸಾಧ್ಯವಾದಷ್ಟು ಮಟ್ಟಿಗೆ ಆಂಗ್ಲ ಭಾಷೆಯಲ್ಲಿರುವ 'ಸೋಶಿಯಾಲಜಿ ಡಿಕ್ಷನರಿ'ಗಳು ಹಾಗೂ ಹಲವಾರು ಗ್ರಂಥಗಳು ಸಮಾಜಶಾಸ್ತ್ರದ ಜನಪ್ರಿಯ ಲೇಖಕರ ಆಂಗ್ಲಭಾಷೆಯಲ್ಲಿರುವ ಪುಸ್ತಕಗಳನ್ನು, ಇಂಟರ್‌ನೆಟ್ ಮತ್ತು ಇನ್ನಿತರ ಮಾಹಿತಿ ಮೂಲಗಳ ನೆರವನ್ನು ಪಡೆದಿದ್ದು, ಅವುಗಳಲ್ಲಿ ಉಲ್ಲೇಖಿತವಾದ ವಸ್ತುವಿಷಯವನ್ನು ಗ್ರಹಿಸಿಕೊಂಡು ನನ್ನದೇ ಆದ ರೀತಿಯಲ್ಲಿ ಪ್ರಸ್ತುತ ಪಡಿಸಿದ್ದೇನೆ. ಅಂದರೆ, ನನ್ನದೇ ಆದ ಸ್ವಂತದ ಅರ್ಥ ವಿವರಣೆ ಕೊಡುವ ಪ್ರಯತ್ನಕ್ಕೆ ವಿಶೇಷವಾಗಿ ಹೋಗದೆ ವಿಶ್ವಾಸಾರ್ಹ ಮಾಹಿತಿ ಮೂಲಗಳಿಂದ ನಾನು ಗ್ರಹಿಸಿಕೊಂಡಿದ್ದನ್ನೇ ಪ್ರಸ್ತಾಪಿಸಿದ್ದೇನೆ. ಆದಾಗ್ಯೂ ಕೆಲವೇ ಕೆಲವು ಪದಗಳಿಗೆ [ಉದಾ: ನನ್ನದೇ ಆದ ವಿವರಣೆ ನೀಡುವ ಪ್ರಯತ್ನ ಮಾಡಿದ್ದೂ ಕೂಡ ಇದೆ. ಆದ್ದರಿಂದ ಇಲ್ಲಿ ಪ್ರಸ್ತಾಪಿಸಿದ ವಿಷಯಗಳು ಒದಗಿಸಿರುವ ಮಾಹಿತಿ ಹಾಗೂ ನೀಡಿದ ಅರ್ಥವಿವರಣೆ ಎಲ್ಲವೂ ಅಧಿಕೃತ, ಅಂತಿಮ. ಇಲ್ಲವೇ ಅತ್ಯಂತ ನಿಕೃಷ್ಟವಾದುದೆಂದು ಹೇಳಲಾರೆ. ನನ್ನ ಗ್ರಹಿಕೆಯ ತಪ್ಪಿನಿಂದಾಗಿ ಕೆಲವೆಡೆ ಅಸಮರ್ಪಕ ವಿವರಣೆ ನೀಡುವಂತಾಗಿದ್ದರೆ ಅದನ್ನು ಒಂದು ಕ್ಷೇತ್ರದ ಶೂನ್ಯವನ್ನು ನಿವಾರಿಸುವಲ್ಲಿನ ಆರಂಭಿಕ ಪ್ರಯತ್ನದ ಇತಿಮಿತಿ ಎಂದು ಪರಿಗಣಿಸಬಹುದೆನ್ನಿಸುವುದು.

ಒಟ್ಟಿನಲ್ಲಿ ಹೇಳುವುದಾದರೆ, ಕಿರು ವಿಶ್ವಕೋಶ ಸರಣಿಯ ಸಂಪುಟ–1 ಹಾಗೂ 2ರಿಂದ ಒಟ್ಟು ಸುಮಾರು 4000ದಷ್ಟು ಸಾಮಾಜಿಕ ಮತ್ತು ಸಮಾಜಶಾಸ್ತ್ರೀಯ ಪ್ರಾಮುಖ್ಯದ ಪದಗಳ/ ಪರಿಕಲ್ಪನೆಗಳ 450 ಮಂದಿ ಸಮಾಜ ಚಿಂತಕರ/ ಸಾಧಕರ ಬಗ್ಗೆ ಒಂದಿಷ್ಟು ಪ್ರಾಥಮಿಕ ಮಾಹಿತಿಯನ್ನು ಒಟ್ಟು ಸುಮಾರು 3500 ಪುಟಗಳಲ್ಲಿ ಕನ್ನಡ ಭಾಷೆಯಲ್ಲಿ ನೀಡುವ ಪ್ರಯತ್ನವನ್ನು ಪ್ರಪ್ರಥಮ ಬಾರಿಗೆ ಮಾಡಲಾಗಿದ್ದು, ಈ ಸಂಬಂಧವಾದ ಬಹುದೊಡ್ಡ ಕೊರತೆಯೊಂದನ್ನು ಒಂದಿಷ್ಟಾದರೂ ನೀಗಿಸುವಲ್ಲಿ ನೆರವಾದೀತೆಂದು ಆಶಿಸಬಹುದಾಗಿದೆ. ಅಲ್ಲದೆ ಇಂತಹ ಕಿರು ಪ್ರಯತ್ನ ಇತರ ಸಮಾಜ ವಿಜ್ಞಾನಗಳಲ್ಲಿ ಇದಕ್ಕಿಂತಲೂ ಶ್ರೇಷ್ಠವಾದ ವಿಶ್ವಕೋಶಗಳನ್ನು ಕನ್ನಡ ಭಾಷೆಯಲ್ಲಿ ಹೊರತಂದು ಸಮಾಜ ವಿಜ್ಞಾನ ಅಧ್ಯಯನಾಸಕ್ತರ ಅಗತ್ಯತೆಯೊಂದನ್ನು ಪೂರೈಸಲು ಸಾಧ್ಯವಾಗುವುದಾದರೆ ಈ ಕೃತಿಯ ಇನ್ನೊಂದು ಅಘೋಷಿತ ಉದ್ದೇಶವೂ ಪೂರ್ಣಗೊಂಡಂತಾಗಿ ನನ್ನ ಪರಿಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸಂಪುಟ–2

* ಕಿರು ವಿಶ್ವಕೋಶ ಸರಣಿಯ ಪ್ರಥಮ ಸಂಪುಟವಾದ 'ಸಮಾಜಶಾಸ್ತ್ರದ ಕಿರು ವಿಶ್ವಕೋಶ'ವನ್ನು [2001]ರಲ್ಲಿ ಬರೆದಂತಹ ಶೈಲಿಯಲ್ಲಿಯೇ ಈ ಪುಸ್ತಕವನ್ನೂ ಕೂಡ ರಚಿಸಲಾಗಿದೆ. ಪುಸ್ತಕದ 'ಲೇಖಕನ ಮನದಿಂಗಿತ' ಎಂಬ ಮುನ್ನುಡಿಯ ವಿಭಾಗದಲ್ಲಿ ತಿಳಿಸಲಾಗಿರುವಂತೆ ಈ ಪುಸ್ತಕವನ್ನು ಸಮಾಜಶಾಸ್ತ್ರದ ಆರಂಭಿಕ ಓದುಗರ ಅಧ್ಯಯನಕ್ಕೆ ಸಹಾಯಕವಾಗುವ ರೀತಿಯಲ್ಲಿ ಸಮಾಜಶಾಸ್ತ್ರೀಯ ಪದಗಳ/ ಪರಿಕಲ್ಪನೆಗಳನ್ನು ಕುರಿತು ಆದಷ್ಟು ಸರಳವಾಗಿ ಹಾಗೂ ಸಂಕ್ಷಿಪ್ತವಾಗಿ ಬರೆಯಲಾಗಿದೆ.
* ಕನ್ನಡದಲ್ಲಿ ಮಾತ್ರವಲ್ಲದೆ, ಇಡೀ ದೇಶದಲ್ಲಿಯೇ ಪ್ರಾಂತೀಯ ಭಾಷೆಗಳಲ್ಲಿ ಪ್ರಪ್ರಥಮ ಸ್ವರೂಪದ್ದೆನ್ನುವ ಹೆಗ್ಗಳಿಕೆಯೊಂದಿಗೆ ಸಮಾಜವಿಜ್ಞಾನಗಳ ಜೊತೆಗೆ ಸಮಾಜಶಾಸ್ತ್ರದ ಬಹುವ್ಯಾಪಕ ವಿಷಯಗಳನ್ನು ಕುರಿತು ಅರ್ಥಪೂರ್ಣ ಕಿರುಮಾಹಿತಿ ನೀಡುವ ಕೃತಿ.
* ಸಮಾಜಶಾಸ್ತ್ರದ ಜೊತೆಗೆ ಅದಕ್ಕೆ ಸಂಬಂಧಪಟ್ಟಂತೆ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮನಃಶಾಸ್ತ್ರ, ಇತಿಹಾಸ, ಮಹಿಳಾ ಅಧ್ಯಯನ, ಮಾನವಶಾಸ್ತ್ರ, ಪರಿಸರ ಅಧ್ಯಯನಶಾಸ್ತ್ರ, ತತ್ತ್ವಶಾಸ್ತ್ರ, ಸಮಾಜಕಾರ್ಯ ಮುಂತಾದ ಅಧ್ಯಯನಶಾಸ್ತ್ರಗಳ ಪರಿಧಿಯಲ್ಲಿ ಬರುವ ಹಲವಾರು ಪರಿಕಲ್ಪನೆಗಳ ಉಲ್ಲೇಖಗಳು.
* ಭಾರತೀಯ ಸಮಾಜ–ಸಂದರ್ಭಕ್ಕೆ ಒತ್ತು ನೀಡುವ ಈ ಕೃತಿ ಎನ್‌ಇಟಿ, ಎಸ್‌ಎಲ್‌ಇಟಿ, ಐಎಎಸ್, ಕೆಎಎಸ್ ಮೊದಲಾದ ಪರೀಕ್ಷೆಗಳನ್ನು ಎದುರಿಸುವ ಕನ್ನಡಿಗರಿಗೆ ಪ್ರಪ್ರಥಮ ಆಯ್ಕೆಯ ಅತ್ಯುಪಯುಕ್ತ ಗ್ರಂಥ ಸರಣಿ.
* ಸಮಾಜಶಾಸ್ತ್ರ ಅಧ್ಯಯನದ ಇನ್ನೂ ಎರಡು ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಹಾಗೂ ಪರಿಸರ ಅಧ್ಯಯನ ಕ್ಷೇತ್ರಗಳ ಬಗೆಗೂ ಸಾಕಷ್ಟು ಪದಗಳ–ಪರಿಕಲ್ಪನೆಗಳ ಪರಿಚಯವಿದೆ.
* ಆಧುನಿಕೋತ್ತರತೆ, ಸಾಮಾಜಿಕ ಸಂಶೋಧನೆಯ ಹಂತಗಳು, ಸಂಶೋಧನಾ ನೀತಿಸಂಹಿತೆ, ಸಂಶೋಧನಾ ವರದಿ, ಸಂಶೋಧನಾ ವಿಧಾನಗಳು, ಬಹುತಂತ್ರ ವಿಧಾನ, ಸಂಶೋಧನೆಯಲ್ಲಿ ಕಂಪ್ಯೂಟರ್ ಅಥವಾ ಗಣಕ ಯಂತ್ರದ ಬಳಕೆ ಮೊದಲಾದ ಪರಿಕಲ್ಪನೆಗಳ ಬಗ್ಗೆ ಉಪಯುಕ್ತ ಮಾಹಿತಿ ಕೃತಿಯಲ್ಲಿದೆ.
* ಸಮಾಜಶಾಸ್ತ್ರದ ಕಿರು ವಿಶ್ವಕೋಶ ಸರಣಿಯ ಎರಡನೆ ಸಂಪುಟವನ್ನು ಜೈ ಭಾರತ್ ಪ್ರಕಾಶನ, ಮಂಗಳೂರು ಹೊರತಂದಿದೆ. ಸಾದಾ ಪ್ರತಿಯ ಬೆಲೆ 900 ರೂಪಾಯಿಗಳಾಗಿದ್ದು, ಗ್ರಂಥಾಲಯ ಪ್ರತಿಯ ಬೆಲೆ 1050 ರೂಪಾಯಿಗಳು.

✠✠✠

ಭಾರತದ ಸ್ವಾತಂತ್ರ್ಯ ದಿನಾಚರಣೆ ಒಂದು ಸಂಭ್ರಮವೋ? ಹೊಸ ಸವಾಲೋ?

ರೊನಾಲ್ಡ್ ಪ್ರವೀಣ್ ಕೊರೆಯಾ
ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು
ವಾಮದಪದವು, ದ.ಕ.

ಹಲವು ಶತಮಾನಗಳ ನಿರಂತರ ಹೋರಾಟದ ಫಲವಾಗಿ ಭಾರತ ದೇಶ ಆಗಸ್ಟ್ 15, 1947ರಂದು ಒಂದು ಸ್ವತಂತ್ರ ದೇಶವಾಗಿ ಹೊರಹೊಮ್ಮಿತು. ಆಗಸ್ಟ್ 15 ಪ್ರತಿವರ್ಷ ನಮಗೆ ಸಂಭ್ರಮದ ದಿನವಾಗಿ ಕಂಡರೂ, ಆ ದಿನ ನಮ್ಮ ದೇಶ ಪರಾಕೀಯ ನಿಯಂತ್ರಣದಿಂದ ಮುಕ್ತಿಯನ್ನು ಮಾತ್ರ ಪಡೆದಿತ್ತು. ಆದರೆ ನೈಜ ಸ್ವಾತಂತ್ರ್ಯ ಬಹು ಮಂದಿ ಭಾರತೀಯರಿಗೆ ಮರಿಚಿಕೆಯಾಗಿಯೇ ಉಳಿದಿತ್ತು. ಆಗಸ್ಟ್ 15 ನಮ್ಮ ದೇಶದ ಜನರಿಗೆ ಸ್ವಾತಂತ್ರ್ಯ ಹೋರಾಟದ ಕೊನೆಯಾಗಿರದೇ, ಸ್ವಾತಂತ್ರ್ಯದ ಹಲವು ಆಯಾಮ ಹಾಗೂ ಪರಿಕಲ್ಪನೆಗಳನ್ನು ಸಾಕ್ಷಾತ್ಕಾರಗೊಳಿಸುವ ಒಂದು ಹೊಸ ಸವಾಲನ್ನು ಒಡ್ಡಿತು. ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ನಾವು ನಮಗೇ ಕೆಲವೊಂದು ಸಹಜವಾದ ಸರಳ ಪ್ರಶ್ನೆಗಳನ್ನು ಕೇಳಬೇಕಾಗಿದೆ.

ಮೊದಲನೆಯದಾಗಿ, ನಮ್ಮ ದೇಶಕ್ಕೆ ಯಾರು ಸ್ವಾತಂತ್ರ್ಯವನ್ನು ನೀಡಿದರು? ಈ ಪ್ರಶ್ನೆಗೆ ನಮ್ಮ ಉತ್ತರ ಬ್ರಿಟೀಷರು ಎಂದಾದರೆ ಅವರು ಯಾವ ರೀತಿಯ ಸ್ವಾತಂತ್ರ್ಯವನ್ನು ನಮಗೆ ನೀಡಿದರು.

ಎರಡನೆಯದಾಗಿ ಪರಕೀಯರು ನಮ್ಮ ದೇಶದ ಮೇಲೆ ದಾಳಿ ಮಾಡುವ ಮೊದಲು ನಾವು ಸ್ವತಂತ್ರರೇ? ಒಂದು ವೇಳೆ ನಮ್ಮ ಉತ್ತರ ಹೌದಾದರೆ, ನಾವು ಯಾಕೆ ಹಾಗೂ ಹೇಗೆ ನಮ್ಮ ದೇಶದ ಸ್ವಾತಂತ್ರ್ಯವನ್ನು ಕಳೆದುಕೊಂಡೆವು?

ಈ ಮೇಲಿನ ಎರಡು ಪ್ರಶ್ನೆಗಳಿಗೆ ಅಷ್ಟು ಸರಳವಾಗಿ ಉತ್ತರಿಸಲು ಸಾಧ್ಯವಿಲ್ಲ.ಏಕೆಂದರೆ ಸ್ವಾತಂತ್ರ್ಯ ಎಂಬ ಪರಿಕಲ್ಪನೆ ತುಂಬಾ ಸಂಕೀರ್ಣವಾದುದು. ಬ್ರಿಟೀಷರು ನಮ್ಮ ದೇಶವನ್ನು ಬಿಟ್ಟು ತೊಲಗಿದ ನಂತರ ನಮ್ಮನ್ನು ನಾವೇ ಆಳಲು ಆರಂಭಿಸಿದೆವು. ಈ ರೀತಿ ನಾವು ನಮ್ಮ ರಾಜಕೀಯ ಸ್ವಾತಂತ್ರ್ಯವನ್ನು ಪುನರ್ ಸ್ಥಾಪಿಸಿದೆವು. ಇಲ್ಲಿ ಗಮನಿಸಬೇಕಾದ ಅಂಶ ಏನೆಂದರೆ, ಸ್ವಾತಂತ್ರ್ಯ ಎಂಬ ಪರಿಕಲ್ಪನೆ ಬಹು ಆಯಾಮಗಳನ್ನು ಹೊಂದಿದೆ. ಉದಾಹರಣೆಗೆ, ನೈಸರ್ಗಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ನಾಗರಿಕ ಸ್ವಾತಂತ್ರ್ಯ, ಆರ್ಥಿಕ, ರಾಜಕೀಯ, ಆಧ್ಯಾತ್ಮಿಕ, ಬೌದ್ಧಿಕ ಹಾಗೂ ಇನ್ನಿತರ. ಈ ದಿನ ನಾವು ರಾಜಕೀಯ ಸ್ವಾತಂತ್ರ್ಯವನ್ನು ಪೆಡದುಕೊಂಡದ್ದನ್ನು ವಿಜ್ರಂಭಣೆಯಿಂದ ಆಚರಿಸುವ ಮೊದಲು, ಸ್ವಾತಂತ್ರ್ಯ ಎಂಬ ಪರಿಕಲ್ಪನೆಯ ವಿವಿಧ ಆಯಾಮಗಳನ್ನು ಎಷ್ಟರ ಮಟ್ಟಿಗೆ ಭಾರತೀಯ ನಾಗರಿಕರು ಅನುಭವಿಸುತ್ತಿದ್ದಾರೆ ಎಂಬುವುದನ್ನು ವಿಮರ್ಶಿಸಬೇಕಾಗಿದೆ.

ನಮ್ಮ ದೇಶದಲ್ಲಿ ಎಲ್ಲಾ ನಾಗರಿಕರಿಗೆ ಸಮಾನತೆ ಇಲ್ಲದೇ ಕೇವಲ ಸಂವಿಧಾನದಲ್ಲಿ ಹಕ್ಕುಗಳನ್ನು ಅಥವಾ ಸ್ವಾತಂತ್ರ್ಯವನ್ನು ನೀಡಿದರೆ ಸಾಲದು, ಭಾರತ ಸಮಾಜದಲ್ಲಿ ಹಲವು ರೀತಿಯ ವೈವಿಧ್ಯತೆಗಳನ್ನು ಕಾಣುತ್ತಿದ್ದೇವೆ. ಸ್ವಾತಂತ್ರ್ಯ ಎಂಬುವುದು ಕೇವಲ ಬಾಯಿ ಮಾತಿಗೆ

ಸೀಮಿತವಾಗಿರದೇ, ಎಲ್ಲಾ ವರ್ಗದ ಜನರಿಗೆ ಸಕಾರಾತ್ಮಕ ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ನೀಡಿದ್ದಲ್ಲಿ ಮಾತ್ರ ಈ ದಿನವನ್ನು ಆಚರಿಸುವುದು ಅರ್ಥ ಪೂರ್ಣವಾಗುತ್ತದೆ. ಸಕಾರಾತ್ಮಕ ಸ್ವಾತಂತ್ರ್ಯ ಎಂದರೆ ನಮ್ಮ ದೇಶದ ಎಲ್ಲಾ ಸಾಮಾಜಿಕ ಸ್ಥರಗಳ ಹಾಗೂ ಎಲ್ಲಾ ವರ್ಗಗಳ ಜನರಿಗೆ ಮುಕ್ತ ಅವಕಾಶಗಳನ್ನು ನೀಡುವುದು. ಉದಾಹರಣೆಗೆ, ಮಹಿಳೆಯರು, ಪ.ಜಾ, ಪ.ಪ, ದಲಿತರು ಇತರ ಹಿಂದುಳಿದ ವರ್ಗದವರು, ಬಡವರು, ಅಂಗವಿಕಲರು ಹಾಗೂ ಕೆಲವು ಶತಮಾನಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಿತ ಹಾಗೂ ವಂಚಿತ ವರ್ಗದವರಿಗೆ ಮೀಸಲಾತಿಯನ್ನು ನೀಡುವುದರ ಮೂಲಕ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಕಲ್ಪಿಸುವುದು. ಅದೇ ರೀತಿ ಮೇಲ್ಕಾಣಿಸಿದ ಎಲ್ಲಾ ವರ್ಗದ ಜನರಿಗೆ ನಮ್ಮ ದೇಶದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಲು ಇರುವ ಅಡಚಣೆಗಳನ್ನು ತೆಗೆದು ಹಾಕುವುದು. ಎಲ್ಲಿವರೆಗೆ ಈ ಬಗೆಯ ಸ್ವಾತಂತ್ರ್ಯ ನಮ್ಮ ದೇಶದಲ್ಲಿ ಅನುಷ್ಠಾನವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಈ ದಿನವನ್ನು ಆಚರಿಸುವುದು ಹಾಸ್ಯಾಸ್ಪದ ಎಂದರೆ ತಪ್ಪಾಗಲಾರದು. ಈ ದಿನದ ನಮ್ಮ ಘೋಷಣೆ ಏನಾಗಬೇಕೆಂದರೆ "ಸಮಾನತೆಯಿಂದ ಸ್ವಾತಂತ್ರ್ಯದೆಡೆಗೆ."

ಭಾರತ ಜಗತ್ತಿನ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶ. ನಾವು ನಮ್ಮ ದೇಶವನ್ನು ಅಮೇರಿಕಾದೊಂದಿಗೆ ಹೋಲಿಕೆ ಮಾಡುತ್ತಿದ್ದೇವೆ. ನಾವು ಅಮೇರಿಕಾವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ನಮ್ಮ ದೇಶಕ್ಕೆ ಸುಮಾರು 5,000 ವರ್ಷಗಳ ಇತಿಹಾಸವಿದೆ. ಆದರೆ ಅಮೇರಿಕಾ ದೇಶಕ್ಕೆ ಕೆಲವೇ ಶತಮಾನಗಳ ಇತಿಹಾಸವಿದೆ. ಅಮೇರಿಕಾದಲ್ಲಿ ವಾಸಿಸುತ್ತಿರುವ ಹೆಚ್ಚಿನ ಜನರು ವಿವಿಧ ದೇಶಗಳಿಂದ ವಲಸೆ ಬಂದವರಾಗಿರುತ್ತಾರೆ. ಅಮೇರಿಕಾದ ಲೂಸಿಯಾನ ರಾಜ್ಯದ ಗವರ್ನರ್ ಆಗಿದ್ದ ಭಾರತೀಯ ಮೂಲದ ಬಾಬಿ ಜಿಂದಾಲ್ ಪ್ರಕಾರ ಅಮೇರಿಕಾ ಅಂದರೆ ಒಂದು ಅಲೋಚನೆ, ಒಂದು ವಿಚಾರ ಅಥವಾ ಒಂದು ಚಿಂತನೆ. ಅಮೇರಿಕಾ ದೇಶ ವಿವಿಧ ದೇಶಗಳಿಂದ ವಲಸೆ ಬಂದ ಜನರಿಗೆ ನೆಲೆಯನ್ನು ಕಲ್ಪಿಸಿದೆ. ಅಮೇರಿಕಾದ ಮೂಲ ನಿವಾಸಿಗಳಿಗಿಂತ ವಲಸೆ ಬಂದ ಜನರೇ ಇವತ್ತು ಆ ದೇಶವನ್ನು ಆಳುತ್ತಿದ್ದಾರೆ ಅಥವಾ ನಿಯಂತ್ರಿಸುತ್ತಿದ್ದಾರೆ. ಈ ಒಂದು ನೆಲೆಯಲ್ಲಿ ಅಮೇರಿಕಾದಲ್ಲಿ ಒಂದು ಮಾತು ಚಾಲ್ತಿಯಲ್ಲಿದೆ ಅದೇನೆಂದರೆ 'Our brains are Indians and pockets are Jews' ಅಂದರೆ ಅಮೇರಿಕಾದಲ್ಲಿರುವ ಹೆಚ್ಚಿನ ತಂತ್ರಜ್ಞರು, ವೈದ್ಯರು ಭಾರತೀಯ ಮೂಲದವರಾಗಿದ್ದಾರೆ ಹಾಗೂ ಆ ದೇಶದ ಸಂಪತ್ತು ಆ ದೇಶದಲ್ಲಿ ನೆಲೆಸಿರುವ ಯಹೂದಿ ಮೂಲದ ಜನರ ಕೈಯಲ್ಲಿದೆ. ಅಮೇರಿಕಾ ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಭಾರತೀಯ ಸಂಜಾತರು ನಿರ್ಣಾಯಕ ಪಾತ್ರವನ್ನು ವಹಿಸಿರುತ್ತಾರೆ. ಹಾಗೂ ಹೆಚ್ಚಿನ ಉದ್ಯಮ ಕ್ಷೇತ್ರ, ಉತ್ಪಾದಕ ಮೂಲ, ಸಂಪತ್ತು ಯಹೂದಿ ಮೂಲದ ಅಮೇರಿಕಾದ ನಾಗರಿಕರ ಕೈಯಲ್ಲಿದೆ.

ಅಮೇರಿಕಾ ದೇಶ ವ್ಯಕ್ತಿವಾದ, ಉದಾರವಾದ, ಪ್ರಜಾಪ್ರಭುತ್ವ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ನಂಬಿಕೆಯನ್ನು ಹೊಂದಿದೆ. ಅಮೇರಿಕಾ ನೆಲದಲ್ಲಿ ಸರ್ವರಿಗೂ ಸಮಾನತೆ, ಸ್ವಾತಂತ್ರ್ಯವನ್ನು ನೀಡಿದ ಕಾರಣ ಆ ದೇಶ ಇಂದು ಒಂದು ಸೂಪರ್ ಪವರ್ ಅಂದರೆ ಶಕ್ತಿಶಾಲಿ ರಾಷ್ಟ್ರವಾಗಲು ಸಾಧ್ಯವಾಯಿತು, ಒಂದು ವೇಳೆ ಭಾರತೀಯರಾದ ನಾವು ಭಾರತ ಎಂಬುವುದು ಒಂದು ಆಲೋಚನೆ, ವಿಚಾರ ಹಾಗೂ ಚಿಂತನೆ ಎಂದು ಪರಿಗಣಿಸಿಸರ್ವಧರ್ಮ ಸಹಿಷ್ಣುತೆ, ಸರ್ವಧರ್ಮ ಸಮಭಾವದಿಂದ ಒಟ್ಟಾಗಿ ಬದುಕಿ, ಬಾಳಿ, ಶ್ರಮಿಸಿದಲ್ಲಿ ನಾವು ಯಾವಾಗಲೋ ಅಮೇರಿಕಾವನ್ನು ಹಿಂದಿಕ್ಕಬಹುದಿತ್ತು. ಈ ಸತ್ಯವನ್ನು

ತಿಳಿದ ಜಗತ್ತಿನ ಹೆಚ್ಚಿನ ಪ್ರಬಲ ರಾಷ್ಟ್ರಗಳು ಹಾಗೂ ನೆರೆಕರೆಯ ರಾಷ್ಟ್ರಗಳು ಭಾರತೀಯರ ನಡುವಿನ ಒಗ್ಗಟ್ಟಿಗೆ ಸದಾ ಅಡ್ಡಿಯನ್ನು ಉಂಟುಮಾಡುತ್ತಾ, ಸವಾಲನ್ನು ಒಡ್ಡುತ್ತಿದ್ದಾರೆ. ಭಾರತದಲ್ಲಿ ನಡೆಯುತ್ತಿರುವ ಬುಡಮೇಲು ಕೃತ್ಯಗಳು, ಭಯೋತ್ಪಾದನೆ, ಹಿಂಸಾಚಾರ, ಕೋಮು ಗಲಭೆಗಳಿಂದಾಗಿ ದೇಶದ ಪ್ರಗತಿ ಕುಂಠಿತಗೊಂಡಿದೆ.

ಈ ಜಗತ್ತಿನಲ್ಲಿ ಭಾರತ ದೇಶ ಮಾತ್ರ ಹೆಚ್ಚು ಯುವ ಜನ ಸಂಖ್ಯೆಯನ್ನು ಹೊಂದಿದೆ. ನಮ್ಮ ದೇಶದ ಜನರ ಸರಾಸರಿ ವಯಸ್ಸು ಅಂದಾಜು 29ವರ್ಷ. ನಮ್ಮ ದೇಶದ ರಾಜಕೀಯ ಪಕ್ಷಗಳು ಹಾಗೂ ವಿವಿಧ ಸಂಘಟನೆಗಳು ಈ ಯುವಶಕ್ತಿಯನ್ನು ಸದ್ಬಳಕೆ ಮಾಡುವ ಬದಲಾಗಿ ಯುವ ಜನತೆಯ ದಿಕ್ಕನ್ನು ತಪ್ಪಿಸುತ್ತಿದ್ದಾರೆ. ಯುವಕರನ್ನು ಒಂದು ಉತ್ಪಾದಕಾ ಶಕ್ತಿಯನ್ನಾಗಿ ಪರಿವರ್ತಿಸಿದಲ್ಲಿ ದಿವಂಗತ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಕನಸಿನ ಭಾರತ vision 2020 ಸಾಕಾರಗೊಳ್ಳುವುದರಲ್ಲಿ ಸಂಶಯವಿಲ್ಲ.

ಭಾರತದ ಸಂಸದೀಯ ಮಾದರಿಯ ಪದ್ಧತಿಯನ್ನು ನಾವು ಪಕ್ಷ ಪದ್ಧತಿಯ ಪ್ರಜಾಪ್ರಭುತ್ವ ಎಂದು ಕರೆಯುತ್ತೇವೆ. ಯಾಕೆಂದರೆ ಸಂಸದೀಯ ವ್ಯವಸ್ಥೆಯಲ್ಲಿ ಕನಿಷ್ಠ ಎರಡು ರಾಜಕೀಯ ಪಕ್ಷಗಳಿಲ್ಲದೆ ಸರಕಾರ ರಚಿಸಲು ಅಸಾಧ್ಯ. ಒಂದೇ ರಾಜಕೀಯ ಪಕ್ಷ ಇದ್ದಲ್ಲಿ ಅದು ಚೀನಾ ದೇಶದ ತರಹ ಏಕ ಪಕ್ಷ ಸರ್ವಾಧಿಕಾರಕ್ಕೆ ಕಾರಣವಾಗುತ್ತದೆ. ಈ ಒಂದು ವಾಸ್ತವವನ್ನು ನಾನು ಈ ಸಂದರ್ಭದಲ್ಲಿ ಏಕೆ ಉಲ್ಲೇಖ ಮಾಡುತ್ತೇನೆಂದರೆ ಇಂದು ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳಿಗೆ ಅಧಿಕಾರವೊಂದು ಬಿಟ್ಟರೆ ದೇಶದ ಜನರ ಹಿತ, ಜನರ ಭವಿಷ್ಯತ್ತಿನ ಬಗ್ಗೆ ಅಷ್ಟೊಂದು ಕಾಳಜಿ ಕಾಣುತ್ತಿಲ್ಲ. ರಾಜಕೀಯ ಪಕ್ಷಗಳು ಬಂಡವಾಳ ಶಾಹಿಗಳ ಕೈ ಗೊಂಬೆಗಳಾಗಿವೆ ಎಂದರೆ ತಪ್ಪಾಗಲಾರದು.

ನಮ್ಮ ದೇಶದಲ್ಲಿ ಎಷ್ಟು ರಾಜಕೀಯ ಪಕ್ಷಗಳು ಇರಬೇಕು; ಯಾವುದು ಒಳ್ಳೆಯ ಪಕ್ಷ, ಯಾವುದು ಭ್ರಷ್ಟಪಕ್ಷ ಎಂಬುವುದರ ಬಗ್ಗೆ ಚರ್ಚೆಗಳು ನಡೆಯುತ್ತಲೇ ಇವೆ. ಭಾರತದಂತಹ ವೈವಿಧ್ಯತೆ ಇರುವ ದೇಶಕ್ಕೆ ವಿವಿಧ ರಾಜಕೀಯ ಪಕ್ಷಗಳು ಅನಿವಾರ್ಯ. ಭ್ರಷ್ಟಾಚಾರಕ್ಕೆ ಪಕ್ಷ ಅಥವಾ ಜಾತಿ ಎಂಬುವುದಿಲ್ಲ. ಇವತ್ತು ರಾಜಕೀಯ ಪಕ್ಷಗಳು ಮಾಡಬೇಕಾದ ಸಂಕಲ್ಪವೇನೆಂದರೆ 'ನಮಗೆ ಮತ ಹಾಕಿ, ನಾವು ಭಾರತವನ್ನು ಹಸಿವು ಮುಕ್ತ, ಅಸಾಮಾನತೆಮುಕ್ತ, ಬಡತನಮುಕ್ತ, ನಿರುದ್ಯೋಗಮುಕ್ತ, ಹಿಂಸೆಮುಕ್ತ, ಲೈಂಗಿಕ ದೌರ್ಜನ್ಯಮುಕ್ತ, ಶೋಷಣೆಮುಕ್ತ, ಭಯೋತ್ಪಾದನೆ ಮುಕ್ತ, ಭ್ರಷ್ಟಾಚಾರ ಮುಕ್ತವನ್ನಾಗಿ ಮಾಡುತ್ತೇವೆ'. ರಾಜಕೀಯ ಪಕ್ಷಗಳು ಧರ್ಮ ಅಥವಾ ಜಾತಿ ರಾಜಕಾರಣ ಮಾಡದೇ ಆರ್ಥಿಕ ವಿಚಾರಗಳ ನೆಲೆಯಲ್ಲಿ ಚುನಾವಣಾ ಪ್ರಚಾರ ಮಾಡಿದಲ್ಲಿ ಭಾರತ ಅಮೇರಿಕಾವನ್ನು ಹಿಂದಿಕ್ಕುವುದರಲ್ಲಿ ಸಂದೇಹವಿಲ್ಲ. ರಾಜಕಾರಣಿಗಳು ಮುಂದಿನ ಚುನಾವಣೆಗೆ ಹಣ ಮಾಡುವ ಅಥವಾ ಚಿಂತಿಸುವ ಬದಲು ನೀತಿಗಳನ್ನು ರೂಪಿಸುವಾಗ ದೇಶದ ಮುಂದಿನ ಪೀಳಿಗೆ ಬಗ್ಗೆ ಅಲೋಚಿಸಬೇಕಾಗಿದೆ. ಸ್ವತಂತ್ರ ಭಾರತದ ಮೊದಲ ಜನಪ್ರತಿನಿಧಿಗಳಲ್ಲಿ ರಾಜಕೀಯ ಬದ್ಧತೆ, ನಿಷ್ಠೆ, ಪ್ರಮಾಣಿಕತೆ, ಸೇವಾ ಮನೋಭಾವ ಮತ್ತು ಮುತ್ಸದ್ಧಿತನ ಕಂಡು ಬರುತ್ತಿತ್ತು.ದೇಶದ ಭವಿಷ್ಯತ್ತಿನ ಬಗ್ಗೆ ಅವರಲ್ಲಿ ನಿಜವಾದ ಕಳಕಳಿ ಇತ್ತು. ಆದರೆ ಇಂದು ಉದ್ಯಮಿಗಳು ತಮ್ಮ ಉದ್ಯಮ ಸಾಮ್ರಾಜ್ಯವನ್ನು ರಕ್ಷಿಸಲು ಹಾಗೂ ವಿಸ್ತರಿಸಲು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದು ದುಃಖಕರ ವಿಚಾರವಾಗಿದೆ. ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ಈ ಸನ್ನಿವೇಶದಲ್ಲಿ ನಮ್ಮ ರಾಜಕಾರಣಿಗಳು ದೇಶದ ಪ್ರಾಥಮಿಕ ಹಿತಾಸಕ್ತಿಯನ್ನು ಬಲಪಡಿಸಬೇಕಾಗಿದೆ. ಅತಿಯಾದ ವಿದೇಶಿ ಅವಲಂಬನೆ ಅಥವಾ ಉದಾರೀಕರಣ ನಮ್ಮ ದೇಶದ ಸ್ವದೇಶಿ ಕೈಗಾರಿಕೆಗಳ

ಸರ್ವನಾಶಕ್ಕೆ ಕಾರಣವಾದಿತು. ದೊಡ್ಡ ಪ್ರಮಾಣದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ, ಬಹುರಾಷ್ಟ್ರೀಯ ಕಂಪನಿಗಳನ್ನು ನಮ್ಮ ದೇಶಕ್ಕೆ ರತ್ನಗಂಬಳಿ ಹಾಕಿ ಸ್ವಾಗತಿಸುವುದು ಒಂದು ರೀತಿಯಲ್ಲಿ ಇದು ನವ ವಸಾಹತುಶಾಹಿ ಅಥವಾ ನವ ಸಾಮ್ರಾಜ್ಯ ಶಾಹಿಗೆ ಕಾರಣವಾದಿತು. ಅತೀಯಾದ ಕೈಗಾರೀಕರಣದಿಂದ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಸ್ಥಾಪನೆಯಿಂದ ಮೊದಲ ಸ್ವಾತಂತ್ರ್ಯ ಹರಣವಾಗುವುದು ನಮ್ಮ ದೇಶದ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಸುಮಾರು 573ಕ್ಕೂ ಹೆಚ್ಚು ಬುಡಕಟ್ಟು ಸಮುದಾಯದ್ದು ಹಾಗೂ ರೈತರದ್ದು. ಹೀಗೆ ಆರ್ಥಿಕ ಸುಧಾರಣೆಯ ಏಕಮುಖಿ ಚಲನೆಯಿಂದ ಸ್ವದೇಶಿ ಆರ್ಥಿಕತೆ ಕಂದಕಕ್ಕೆ ಕುಸಿಯಲಿದೆ. ಅತೀಯಾದ ಆರ್ಥಿಕ ವಿದೇಶಿಕರಣದಿಂದ ನಮ್ಮ ದೇಶದ ಸಾಮಾನ್ಯ ಬಡಜನರ ಸ್ವಾತಂತ್ರ್ಯವನ್ನು ಹರಣ ಮಾಡಿದಂತಾಗುತ್ತದೆ.

ನಮ್ಮ ಸರ್ಕಾರಗಳಿಗೆ ಬಂಡವಾಳ ಬೇಕು, ಸಮಾನತೆ ಬೇಕಿಲ್ಲ, ಸ್ವಾಬಿಮಾನವೂ ಬೇಕಿಲ್ಲ, ಸ್ವಾವಲಂಬನೆಯೂ ಬೇಕಿಲ್ಲ, ಆರ್ಥಿಕ ವಿದೇಶೀಕರಣಕ್ಕೆ ಒಳಗಾಗಿ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಒತ್ತೆ ಇಡುತ್ತಾರೆ, ಉಳ್ಳವರ ಸ್ವಾತಂತ್ರ್ಯವನ್ನು ವಿಸ್ತರಿಸುತ್ತದೆ ಎಂದರೆ ತಪ್ಪಾಗಲಾರದು.

ಇಂಥ ಸನ್ನಿವೇಶದಲ್ಲಿ ಪಾಲೆಸ್ತಿನಿಯನ್ ಕವಿ ಖಲೀಲ್ ಗಿಬ್ರಾನ್ ತನ್ನ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತೇನೆ, "ತಮಟೆ ಬಡಿದು ಆಕ್ರಮಣಕಾರರನ್ನು ಬರಮಾಡಿಕೊಳ್ಳುವ ನಾಡಿನ ಬಗೆಗೆ ದುಃಖವಾಗುತ್ತಿದೆ ನನಗೆ, ನಿದ್ರೆಯಲ್ಲಿ ಮಾತ್ರ ಆಕ್ರಮಣಕಾರರನ್ನು ದ್ವೇಷಿಸುತ್ತ, ಎಚ್ಚರದಲ್ಲಿ ಒಪ್ಪಿಕೊಳ್ಳುವ ನಾಡಿನ ಬಗೆಗೆ ದುಃಖವಾಗುತ್ತಿದೆ ನನಗೆ..." ಬಡವರ ದುಃಖದ ಧ್ವನಿ ಕೇಳಿಸದೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ಬಂಡವಾಳ ಭೋಗದಲ್ಲಿ ದುಃಖವನ್ನು ಮರೆತರೆ ಭಾರತಕ್ಕೆ ಬೆಳಕಿಲ್ಲ.

ಆಗಸ್ಟ್ 15 1947 ರಲ್ಲಿ ನಾವು ಪಡೆದುಕೊಂಡ ಅಥವಾ ಘೋಷಿಸಿಕೊಂಡ ಸ್ವಾತಂತ್ರ್ಯ ಅಂತ್ಯವಲ್ಲ ಅದು ಭಾರತವನ್ನು ಮುಂದಿನ ಹೋರಾಟಗಳಿಗೆ ಅಣಿಗೊಳಿಸುವ ಒಂದು ದೊಡ್ಡ ಜವಾಬ್ದಾರಿಯನ್ನು ನಮಗೆ ನೀಡಿದೆ. ಸ್ವತಂತ್ರ ಭಾರತದಲ್ಲಿ ಕಳೆದ 73 ವರ್ಷಗಳಿಂದ ನಿರಂತರವಾಗಿ ಹಕ್ಕುಗಳಿಗೋಸ್ಕರ ಚಳುವಳಿಗಳು ನಡೆಯುತ್ತಾ ಬಂದಿದೆ. ಭಾರತದಲ್ಲಿ ನದಿ ನೀರಿನ ಹಂಚಿಕೆ ಸಮಸ್ಯೆ, ವ್ಯಾಪಾರ ವಹಿವಾಟು, ತೆರಿಗೆ, ಪ್ರಾದೇಶಿಕ ಅಸಮತೋಲನ, ಭಾಷೆ, ಸಂಸ್ಕೃತಿ, ಆಚಾರ–ವಿಚಾರ, ಉಡುಗೆ ತೊಡುಗೆ, ಜಾತಿ ಧರ್ಮ, ಕೋಮುವಾದ, ಆಹಾರ ಪದ್ದತಿ, ಭ್ರಷ್ಟಾಚಾರ, ಭಯೋತ್ಪಾದನೆ, ಬಡತನ, ನಕ್ಸಲ್ ವಾದ, ಪ್ರತ್ಯೇಕತೆಯ ಹೋರಾಟಗಳು, ಗಡಿಸಮಸ್ಯೆ, ನಿರುದ್ಯೋಗ, ಮಾರ್ಯಾದಾ ಹತ್ಯೆಗಳು, ಅಸ್ಪಶ್ಯತೆ, ಅಪರಾದ, ಕೊಲೆ, ಸುಲಿಗೆ, ವಂಚನೆ, ಕೋಮುದ್ವೇಷದ ಹತ್ಯೆಗಳು, ನರಮೇಧ, ಮೂಢನಂಬಿಕೆ ಹೀಗೆ ಹತ್ತು ಹಲವು ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ದೇಶದ ಉದ್ದಗಲಕ್ಕೂ ನಾವು ಗಮನಿಸಿದರೆ ಹಲವು ಹೋರಾಟಗಳು ನಿರಂತರವಾಗಿ ನಡೆಯುತ್ತಿವೆ. ಉದಾಹರಣೆಗೆ, ಉತ್ತರ ಕರ್ನಾಟಕದಲ್ಲಿ ನೀರಿಗಾಗಿ ರೈತರ ಹೋರಾಟ, ಈಶಾನ್ಯ ರಾಜ್ಯಗಳಲ್ಲಿ ಪ್ರತ್ಯೇಕತೆಯ ಕೂಗು, ದಲಿತರ ಚಳುವಳಿ, ಸಮುದಾಯದ ಹಕ್ಕುಗಳಿಗೋಸ್ಕರ ನಡೆಯುವ ಹೋರಾಟಗಳು, ಮಹಿಳಾ ಚಳುವಳಿಗಳು, ಕಾರ್ಮಿಕರ ಹೋರಾಟ, ಆರ್ಥಿಕ ಮತ್ತು ಸಾಮಾಜಿಕ ಭದ್ರತೆಗೋಸ್ಕರ ನಡೆಯುವ ಧರಣಿಗಳು ಇತ್ಯಾದಿ. ಇವನ್ನು ಗಮನಿಸಿದರೆ ಭಾರತೀಯರಾದ ನಾವು ನಿಜವಾಗಿಯೂ ಸ್ವತಂತ್ರರೇ ಎಂಬ ಪ್ರಶ್ನೆ ಕಾಡುತ್ತಿದೆ. ನಮ್ಮ ದೇಶದ ಮುಖ್ಯ ಚುನಾವಣಾ ಆಯುಕ್ತರಾದ ಸುನಿಲ್ ಅರೊರಾ ಮತದಾರರನ್ನು ಉದ್ದೇಶಿಸಿ ಈ ರೀತಿ ಹೇಳ್ತಾರೆ, "Eternal vigilance

is the price of liberty" ಅಂದರೆ ನಿರಂತರ ಜಾಗೃತಿಯೇ ಸ್ವಾತಂತ್ರ್ಯಕ್ಕೆ ನಾವು ನೀಡುವ ಬೆಲೆ. ಅಂದರೆ ಎಲ್ಲಿಯವರೆಗೆ ದೇಶದ ಪ್ರಜೆಗಳಲ್ಲಿ ತಮ್ಮ ಸ್ವಾತಂತ್ರ್ಯ ಹಾಗೂ ಹಕ್ಕುಗಳ ಬಗ್ಗೆ ನಿರಂತರ ಜಾಗೃತಿ, ಪ್ರಜ್ಞೆ ಇರುವುದಿಲ್ಲವೋ ಆವಾಗ ನಾವು ಎಲ್ಲರಿಂದ ಮೋಸ, ವಂಚನೆಗೆ ಒಳಗಾಗುತ್ತೇವೆ. ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು, ಹಕ್ಕುಗಳನ್ನು ಪುನರ್ ಸ್ಥಾಪಿಸಲು, ನ್ಯಾಯವನ್ನು ಪಡೆಯಲು ನ್ಯಾಯಾಂಗದ ಮೊರೆ ಹೋಗಬೇಕಾಗುತ್ತದೆ. ಹಣ ಮತ್ತು ಸಮಯವನ್ನು ವ್ಯಯಿಸಬೇಕಾಗುತ್ತದೆ. ಒಂದು ವೇಳೆ ನಮ್ಮ ಹಕ್ಕುಗಳ ಬಗ್ಗೆ ನಮ್ಮಲ್ಲಿ ನಿರಂತರ ಜಾಗೃತಿ ಇದ್ದರೆ ಯಾರೂ ನಮ್ಮ ಮೇಲೆ ಸವಾರಿ ಮಾಡುವಂತಿಲ್ಲ.

ಒಂದು ರಾಜಕೀಯ ವ್ಯವಸ್ಥೆಯಲ್ಲಿ ಮೌಲ್ಯಗಳನ್ನು ಬಲವಂತವಾಗಿ ಜನರ ಮೇಲೆ ಹೇರಲಾಗುತ್ತದೆ. ಇದನ್ನು ಡೇವಿನ್ ಈಸ್ಟನ್ ಅವರು "Authoritative allocation of values"ಎಂದು ಕರೆಯುತ್ತಾರೆ. ಈ ಮೌಲ್ಯಗಳು ಸಾರ್ವತ್ರಿಕವಾಗಿರಬೇಕೆಂದಿಲ್ಲ. ಒಂದು ಸಮುದಾಯದಿಂದ ಇನ್ನೊಂದು ಸಮುದಾಯಕ್ಕೆ ಹೋಲಿಕೆ ಮಾಡಿದಾಗ ಈ ಮೌಲ್ಯಗಳು ವಿಭಿನ್ನವಾಗಿರಬಹುದು. ಯಾವ ಯಾವ ಮೌಲ್ಯಗಳು ತಮ್ಮ ಮೇಲೆ ಹೇರಲ್ಪಡುತ್ತಿವೆ ಎಂಬ ಬಗ್ಗೆ ಪ್ರಜೆಗಳು ನಿರಂತರವಾಗಿ ಜಾಗೃತರಾಗಿರಬೇಕಾಗುತ್ತದೆ.

ನಮ್ಮ ದೇಶದ ಸಮಸ್ಯೆಗಳಿಂದ ನಾವು ಮುಕ್ತರಾಗಬೇಕಾದರೆ ಸ್ವಚ್ಛ ಮನಸ್ಸಿನ ಯುವ ಜನತೆ ರಾಜಕೀಯ ಕ್ಷೇತ್ರದಲ್ಲಿ ನಾಯಕತ್ವವನ್ನು ವಹಿಸಬೇಕಾಗಿದೆ. ನಮ್ಮ ದೇಶದ ನೈಸರ್ಗಿಕ ಸಂಪತ್ತನ್ನು ಮುಂಬರುವ ದೇಶದ ಪೀಳಿಗೆಗೆ ಸಂರಕ್ಷಿಸಬೇಕಾಗಿದೆ. ಈ ಕೋವಿಡ್–19 ಸಂದರ್ಭದಲ್ಲಿ ಇಡೀ ದೇಶ, ಜಗತ್ತು ಒಂದಾಗಿ ಹೋರಾಡುತ್ತಿದೆ. ಜನರು ತಮ್ಮಲ್ಲಿರುವ ಎಲ್ಲಾ ವ್ಯತ್ಯಾಸಗಳನ್ನು ಮರೆತು ಬಿಟ್ಟಿದ್ದಾರೆ. ಎಲ್ಲಾ ಧರ್ಮಗಳ ಜನರು ಪ್ರಾರ್ಥನಾ ಸ್ಥಳಗಳನ್ನು ಮರೆತು ಬಿಟ್ಟಂತಿದೆ. ದೇವರ ಮೊರೆ ಹೋಗುವುದು ಕೂಡ ಕಡಿಮೆಯಾಗಿದೆ. ಮನೆಗಳಿಂದ ಹೊರ ಬರ್ತಾ ಇಲ್ಲ. ಜೀವ ಒಂದು ಉಳಿದರೆ ಸಾಕು ಎಂಬ ಸ್ಥಿತಿಗೆ ತಲುಪಿದ್ದಾರೆ. ಕೋಮುಗಲಭೆಗಳು, ಹಿಂಸಾಚಾರಗಳು, ಮೋಸ, ಸುಲಿಗೆ, ವಂಚನೆ, ಅಪರಾಧಗಳು, ಅಪಘಾತಗಳು ಕಡಿಮೆಯಾಗಿವೆ. ಉತ್ತಮ ಆಹಾರ ಪದ್ಧತಿ, ಜೀವನ ಶೈಲಿ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡುತ್ತಿದೆ. ಸರಳ ಜೀವನಕ್ಕೆ ಜನ ಒಗ್ಗಿಕೊಳ್ಳುತ್ತಿದಾರೆ. ಸ್ವಾವಲಂಬನೆಯತ್ತ ದೇಶ ಸಾಗುತ್ತಿದೆ. ಕೊಳ್ಳುಬಾಕ ಸಂಸ್ಕೃತಿಯಿಂದ ಜನ ಹೊರಬರುತ್ತಿದ್ದಾರೆ. ಕೋವಿಡ್–19 ಬಿಟ್ಟು ಬೇರೆ ಕಾರಣಗಳಿಗೋಸ್ಕರ ಆಸ್ಪತ್ರೆಗಳಿಗೆ ಅನಾವಶ್ಯಕವಾಗಿ ಹೋಗುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಅನಾವಶ್ಯಕ ವಾಹನಗಳ ಬಳಕೆ, ನೀರಿನ ಬಳಕೆ, ಇಂಧನ ಬಳಕೆ, ಸರಕುಗಳ ಬಳಕೆ ಕಡಿಮೆಯಾಗಿದೆ. ಇದರ ಅರ್ಥ ಜನರಲ್ಲಿ ತಮ್ಮ ಬಗ್ಗೆ, ಸಮಾಜದ ಬಗ್ಗೆ, ಪರಿಸರದ ಬಗ್ಗೆ ಜಾಗೃತಿ, ಪ್ರಜ್ಞೆ ಮೂಡುತ್ತಿದೆ. ಈ ಒಂದು ಕೋವಿಡ್–19 ನಂತಹ ಪರಿಸ್ಥಿತಿ ದೇಶದ ಅಥವಾ ಜಗತ್ತಿನ ಎಲ್ಲಾ ಜನರಿಗೆ ತಮ್ಮ ಸಾಮಾಜಿಕ ಜವಾಬ್ದಾರಿ ಬಗ್ಗೆ ಆತ್ಮಾವಲೋಕನ ಮಾಡಲು ಸಕಾಲ ಎಂದರೆ ತಪ್ಪಾಗಲಾರದು. ಬಾಯಿಗೆ ಬಂದಂತೆ ಮಾತಾನಾಡುವ, ನಡೆದುಕೊಳ್ಳುವ ರಾಜಕಾರಣಿಗಳು, ಸದಾ ಭ್ರಷ್ಟಾಚಾರದಲ್ಲಿ ಮುಳುಗಿದ ನೌಕರಶಾಹಿಯ ಜವಾಬ್ದಾರಿ ಹೆಚ್ಚಿದೆ. ದಿಕ್ಕು ದೆಸೆಯಿಲ್ಲದೇ ಸದಾ ನಾಗಲೋಟದಲ್ಲಿದ್ದ ಅರ್ಥವ್ಯವಸ್ಥೆಗೆ ಅಂಕುಶ ಹಾಕಿದಂತಿದೆ. ಮಾನವ ಸಂಬಂಧಗಳನ್ನು ಮರೆತ ಜನ ಇಂದು ಕುಟುಂಬಸ್ಥರೊಂದಿಗೆ ಕಾಲ ಕಳೆಯುತ್ತಿದ್ದಾರೆ. ಘಟಿಸಿಹೋದ ತಪ್ಪುಗಳನ್ನು ಮರೆತು ಹೊಸ ಜೀವನವನ್ನು ಮುನ್ನಡೆಸಲು 2020ನೇ ಸ್ವಾತಂತ್ರ್ಯ ದಿನಾಚರಣೆ ಸೂಕ್ತ ಸಮಯ ಎಂದರೆ ಅತಿಶಯೋಕ್ತಿಯಾಗದು. ಜಾಗತೀಕರಣದ ಸುಳಿಗೆ ಸಿಲುಕಿ ನಲುಗಿ ಹೋದ ನಮ್ಮ ದೇಶದ ಆರ್ಥಿಕತೆ, ಸ್ವದೇಶಿ

ಮಂತ್ರವನ್ನು ಮರೆತ ನಮ್ಮ ನೀತಿಕರ್ತರು, ಅತಿಯಾದ ವಿದೇಶಿ ಅವಲಂಬನೆಗೆ ಕಡಿವಾಣ ಹಾಕಲು ಇದು ಸೂಕ್ತ ಕಾಲ. ಮಹಾತ್ಮಾ ಗಾಂಧಿಯವರ ಗ್ರಾಮ ಸ್ವರಾಜ್ಯ, ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿ, ರಾಜಕೀಯ ಹಾಗೂ ಆರ್ಥಿಕ ಸಾವಲಂಬನೆಗೆ ಮರಳಲು ಇದು ಸಕಾಲ.

✠✠✠

ಗಂಡಂದಿರೆಲ್ಲ
ಅರ್ಧರಾತ್ರಿಯಲೆದ್ದು ನಡೆದು
ಸ್ವತಂತ್ರರಾದರೆ
ಹೆಂಡಿರೆಲ್ಲ
ಅರ್ಧನಿದ್ರೆಯಲೆದ್ದು ಕುಳಿತ
ಅತಂತ್ರರು.

ಸಾಫ್ಟ್‌ವೇರ್ ಪ್ರಪಂಚದ ಅನುಭವ ತೆರೆದಿಡುವ ವಸುಧೇಂದ್ರರ ಕತೆಗಳು

ಡಾ. ಎಚ್.ಕೆ. ವೆಂಕಟೇಶ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಉಡುಪಿ–576106

ವಸುಧೇಂದ್ರ ಅವರು ಹೊಸಗನ್ನಡದ ಭರವಸೆಯ ಕಥೆಗಾರರು. ತಮ್ಮ ಮೊದಲ ಕಥಾ ಸಂಕಲನ ಮನೀಷೆಯಿಂದಲೂ ಹೊಸರೀತಿಯ ಬರವಣಿಗೆಯ ಕೃಷಿ ಮಾಡಿದವರು. ಕಥೆ ಕಟ್ಟುವ ಕಲೆಯನ್ನು ಕರಗತ ಮಾಡಿಕೊಂಡಿರುವ ಅವರು ಅದರಲ್ಲಿ ಬಗೆಬಗೆಯ ಪ್ರಯೋಗಗಳನ್ನೂ ಮಾಡಿ ಸಹೃದಯರ ಮೆಚ್ಚುಗೆ ಪಡೆದಿದ್ದಾರೆ. ಇದುವರೆಗೆ 64 ಕಥೆಗಳು, 6 ಕಥಾಸಂಕಲನಗಳಲ್ಲಿ ಪ್ರಕಟಗೊಂಡಿವೆ. ಮನೀಷೆ, ಯುಗಾದಿ, ಚೇಳು, ಹಂಪಿ ಎಕ್ಸ್‌ಪ್ರೆಸ್, ಮೋಹನಸ್ವಾಮಿ, ವಿಷಮ ಭಿನ್ನರಾಶಿ ಕಥಾಸಂಕಲನಗಳು ಈ ಅನುಭವಗಳ ಹಿನ್ನೆಲೆಯಲ್ಲೇ ರಚನೆಗೊಂಡಿವೆ. ಕೋತಿಗಳು, ನಮ್ಮಮ್ಮ ಅಂದ್ರೆ ನಂಗಿಷ್ಟ, ರಕ್ಷಕ ಅನಾಥ, ವರ್ಣಮಯ, ಐದು ಪೈಸೆ ವರದಕ್ಷಿಣೆ ಪ್ರಬಂಧಗಳನ್ನು, ಹರಿಚಿತ್ತ ಸತ್ಯ, ತೇಜೋ–ತುಂಗಭದ್ರಾ ಕಾದಂಬರಿಗಳನ್ನು ಈ ಕಥೆಗಳ ಜೊತೆಗೆ ಕಡೆದಿರುವ ವಸುಧೇಂದ್ರರು ಕನ್ನಡದ ಭರವಸೆಯ ಕತೆಗಾರರಾಗಿ ಗುರುತಿಸಿಕೊಂಡಿದ್ದಾರೆ.

ವಸುಧೇಂದ್ರರು ಕನ್ನಡ ಸಾರಸ್ವತ ಲೋಕದ, ಹೊಸ ಕಾಲದ ಕ್ರಿಯಾಶೀಲ ಬರಹಗಾರರು. ಕಾಲದಿಂದ ಕಾಲಕ್ಕೆ ಬದಲಾವಣೆಗೊಳಗಾದ ಸಮಾಜದ ಹೊಸ ಆಶೋತ್ತರಗಳಿಗೆ ಸಾಹಿತಿಗಳು ಸಜೀವವಾಗಿ ಸ್ಪಂದಿಸುತ್ತಾರೆ. ಹಾಗೆ ಸ್ಪಂದಿಸುವ ಮೂಲಕ ಸಮಾಜದ ಅನುಭವಗಳಿಗೆ ಕನ್ನಡಿಯಾಗುತ್ತಾರೆ. ತಾವು ಕಂಡುಂಡ, ಅನುಭವಿಸಿದ ಅನುಭವಗಳನ್ನು ಕಥೆಯಾಗಿಸುತ್ತಾರೆ. ಅಂತಹ ಕಥೆಗಾರರಾಗಿ ಹೊಸ ಸಂವೇದನೆಗಳನ್ನು ನವೀನವಾಗಿ ನಿರೂಪಿಸುವ ಮುಖೇನ ಹೊಸ ತಲೆಮಾರಿನ ಲೇಖಕರಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವವರು ವಸುಧೇಂದ್ರ ಅವರು.

ತೊಂಬತ್ತರ ದಶಕದಲ್ಲಿ ದೇಶವನ್ನು ಅಪ್ಪಳಿಸಿ ಬಂದ ಜಾಗತೀಕರಣಕ್ಕೆ ತೆರೆದುಕೊಂಡು ಅಲ್ಲಿನೆಲ್ಲ ಅನುಭವಗಳನ್ನು ನವಿರಾದ ಕಥೆಯಾಗಿಸುವ ಕಲಾವಂತಿಕೆ ವಸುಧೇಂದ್ರರಿಗೆ ಸಿದ್ಧಿಸಿದೆ. 1991ರ ಅನಂತರ ಕಾಣಿಸಿಕೊಂಡ ಜಾಗತೀಕರಣ, ಜಾಗತೀಕರಣದ ಪರಿಣಾಮವಾದ ಸಂಬಂಧಗಳ ಸಡಿಲತೆ, ಸಾಮರಸ್ಯದ ಕೊರತೆ, ದಿಢೀರನೆ ಹಣ ಮಾಡುವ ಸ್ವಭಾವ, ದಾಂಪತ್ಯದ ಬಿರುಕುಗಳು, ನಗರೀಕರಣದ ಸಮಸ್ಯೆಗಳು, ತೃತೀಯಲಿಂಗದವರ ಬವಣೆಗಳು, ಬಳ್ಳಾರಿ ಗಣಿಯ ಮಲಿನತೆಗಳು, ಸಾಫ್ಟ್‌ವೇರ್ ಲೋಕದ ಬಿಕ್ಕಟ್ಟುಗಳು, ಪರಿಸರ ನಾಶ ಮೊದಲಾದ ಸಮಸ್ಯೆ–ಸವಾಲುಗಳಿಗೆ ಬರಹದ ರೂಪ ಕೊಟ್ಟವರು ಅವರು. ಹಳ್ಳಿಯ ಅನುಭವವಿರುವ, ಐಟಿ ಪರಿಸರದಲ್ಲಿ ದುಡಿದಿರುವ, ನಗರದ ಯಾಂತ್ರಿಕತೆಯನ್ನು ಅರಿತುಕೊಂಡಿರುವ ವಸುಧೇಂದ್ರರು ಈ ಎಲ್ಲ ತೆರನಾದ ಅನುಭವಗಳನ್ನು ಸೊಗಸಾದ ಕತೆಯಾಗಿಸುತ್ತಾರೆ.

ಕಥೆ ಹೇಳುವ ಕಲೆ, ಅದರ ನೆಲೆ ವಸುಧೇಂದ್ರರಿಗೆ ಒಲಿದಿದೆ. ಕೆಲಸದ ಒತ್ತಡದ

ನಡುವೆಯೂ ಬರೆಯುವ, ಟ್ರಾಫಿಕ್ ಜಾಮ್‌ನ ಭಯಾನಕ ಕಾಡಿನ ನಡುವೆಯೂ ತಣ್ಣಗೆ ಕುಳಿತು ಜನರ ಭಾವಗಳನ್ನು ಅಕ್ಷರ ರೂಪಕ್ಕಿಳಿಸುವ, ತೃತೀಯ ಲಿಂಗದವರ ಬಗ್ಗೆ ಮುಚ್ಚುಮರೆ ಮಾಡುವ ಕಾಲದಲ್ಲೂ ಬಚ್ಚಿಡದೆ ಎಲ್ಲವನ್ನೂ ತೆರೆದು ಬಿಚ್ಚಿಡುವ, ಕಥೆಯಾಗಿಸುವ, ಬಳ್ಳಾರಿ ಗಣಿಯ ಕೂಪದಿಂದೆದ್ದು ಧೂಳೆಬ್ಬಿಸಿದ ಅನುಭವಗಳನ್ನು ಕಥೆಯಾಗಿಸಿ ಕಲೆಯಾಗಿಸುವ, ಸಾಫ್ಟ್‌ವೇರ್ ಜಗತ್ತಿನ ಬಹುಬಗೆಯ ಅನುಭವಗಳನ್ನು ಕಥಾ ಸಂವಿಧಾನಕ್ಕೆ ಕರಗಿಸಿ ಕಥನಾತ್ಮಕವಾಗಿ ಕಟ್ಟುವ ಬಗೆ ವಸುಧೇಂದ್ರರಿಗೆ ಸಿದ್ಧಿಸಿದೆ.

ವಸುಧೇಂದ್ರ ಅವರ ಮೊದಲ ಕಥಾ ಸಂಕಲನಗಳನ್ನು ಗಮನಿಸಿದರೆ ಅಲ್ಲಿ ಹಳೆಯ ಪಳೆಯ ನೆನಪುಗಳು ಮುಂದೊತ್ತಿ ಬರುತ್ತವೆ. ಬೆಂಗಳೂರು ನಗರದ ನಡುವೆ ನಿಂತು ಬಳ್ಳಾರಿಯ ತನ್ನ ಹುಟ್ಟೂರಿನಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಚಿತ್ರಿಸುತ್ತಾರೆ. ರೈತರ ಚಿನ್ನದ ಬೆಳೆ ತೆಗೆಯುವ ಹೊಲಗಳು, ಬಾಹುಬಲಿಯಂತೆ ಅಚಲವಾಗಿ ನಿಂತ ಬೆಟ್ಟಗಳು ಗಣಿಧನಿಗಳ ಹಣದಾಸೆಯ ಉಳಿಪೆಟ್ಟಿಗೆ ಕರಗಿ ಹೋಗುತ್ತಿರುವ ಚಿತ್ರಣವನ್ನು ಕೊಡುತ್ತಾರೆ. ಕನ್ನಡ ಶಾಲೆಗಳ ಜಾಗದಲ್ಲಿ ಇಂಗ್ಲೀಷ್ ಮೀಡಿಯಂನ ಕಾನ್ವೆಂಟ್‌ಗಳು, ನೇಗಿಲ ಜಾಗದಲ್ಲಿ ಬುಲ್ಡೋಜರ್‌ಗಳು, ಕೆರೆಯ ಜಾಗಗಳಲ್ಲಿ ಸೈಟುಗಳು, ಅಪಾರ್ಟ್‌ಮೆಂಟುಗಳು, ಹಕ್ಕಿಗಳ ಜಾಗದಲ್ಲಿ ಹೆಲಿಕಾಪ್ಟರ್‌ಗಳು ಆವರಿಸಿಕೊಳ್ಳುತ್ತಿರುವ ಸೂಕ್ಷ್ಮಗಳನ್ನು ಕಟ್ಟಿಕೊಡುತ್ತಾರೆ.

ಅನಂತರದ ಕಥಾ ಸಂಕಲನಗಳಲ್ಲಿ ಹಳ್ಳಿಗಳಿಂದ ನಗರಕ್ಕೆ ಬಂದ ಜನರ ತೊಳಲಾಟಗಳು, ಗ್ರಾಮ–ನಗರಗಳವರ ಆಲೋಚನೆಗಳ ಸಂಘರ್ಷ, ಸಂಪ್ರದಾಯ–ಆಧುನಿಕತೆಯ ನಡುವಿನ ಮುಸುಕಿನ ಗುದ್ದಾಟ, ನಗರದ ಯಾಂತ್ರೀಕರಣ, ಅನಾಥಭಾವ, ಅಪಾರ್ಟ್‌ಮೆಂಟ್ ಸಂಸ್ಕೃತಿಯ ಹಾವಳಿ, ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಗಳ–ನೌಕರರ ಮನೋಭಿಲಾಷೆಗಳು–ಮನೋವಿಕಾರಗಳು, ಮೊಬೈಲಿನಲ್ಲಿ ಮುಳುಗಿ ಮೈಮನ ಮರೆತುಬಿಟ್ಟವರ ಹೃದಯದ ಮಿಡಿತ ತಪ್ಪಿ ನರಳಾಡುತ್ತಿರುವ ಯುವಪೀಳಿಗೆಗಳ ಹೊಣೆಗೇಡಿತನಗಳು, ತೃತೀಯ ಲಿಂಗದವರ ಬದುಕಿನ ಬಹುಮುಖಗಳ ದರ್ಶನ ಕಂಡುಬರುತ್ತದೆ. ರಾಕೆಟ್ ವೇಗದಲ್ಲಿ ಸಾಗುತ್ತಿರುವ ಬದುಕಿನಲ್ಲಿ ಸಂಬಂಧಗಳು ಸೊರಗಿ ಹೋಗುತ್ತಿರುವುದನ್ನು ಕಂಡು ಮತ್ತೆ ಅದನ್ನು ಮರಳಿ ಪಡೆಯಬೇಕಾದ ಅನಿವಾರ್ಯತೆಯ ಕಡೆಗೆ ನಮ್ಮ ಮನಸ್ಸುಗಳನ್ನು ಸೆಳೆಯುತ್ತಾರೆ.

ಜಾಗತೀಕರಣದ ಜಗತ್ತಿನಲ್ಲಿ–ಸಾಫ್ಟ್‌ವೇರ್ ಲೋಕದೊಳಗೆ...

1960ರ ದಶಕದ ಕೊನೆಯ ಭಾಗದಲ್ಲಿ ಮತ್ತು 1970ರ ದಶಕದ ಮೊದಲ ಭಾಗದಲ್ಲಿ ಈ ಜಾಗತೀಕರಣ ಎನ್ನುವ ಪದ ಚಾಲ್ತಿಗೆ ಬಂತು. ಸಾಹಿತ್ಯ ಸಮಾಜದ ಪ್ರತಿಬಿಂಬ ಮತ್ತು ಗತಿಬಿಂಬ. ಸಮಾಜದ ಎಲ್ಲ ಆಗು–ಹೋಗುಗಳಿಗೂ ಸಾಹಿತ್ಯ ತನ್ನದೇ ನೆಲೆಯಲ್ಲಿ ಪ್ರತಿಕ್ರಿಯಿಸುತ್ತದೆ. 1991ರಲ್ಲಿ ಭಾರತದಲ್ಲಿ ಅಧಿಕೃತವಾಗಿ ಜಾಗತೀಕರಣಕ್ಕೆ ಬಾಗಿಲು ತೆರೆದು ಸ್ವಾಗತಿಸಲಾಯಿತು. ಈ ಉ–ಖಾ–ಜಾಗಳು ಅಂದರೆ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಅತಿವೇಗದಲ್ಲಿ ಮುಕ್ತಮಾರುಕಟ್ಟೆ ನೀತಿಯನ್ನು ಭಾರತದಲ್ಲಿ ಹರಡಿಬಿಟ್ಟಿತು. ಬೇರೆ ದೇಶಗಳ ಬಹುರಾಷ್ಟ್ರೀಯ ಕಂಪನಿಗಳು ಯಾವುದೇ ನಿಯಂತ್ರಣವಿಲ್ಲದೆ ತಮ್ಮ ವ್ಯವಹಾರವನ್ನು ನಡೆಸಲು ಇದು ರಹದಾರಿ ಮಾಡಿಕೊಟ್ಟಿತು. ಯಾವ ದಾರಿ ಹಿಡಿದರೂ ಸರಿ ಅವುಗಳ ಮುಖ್ಯ ಗುರಿ ಲಾಭ ಮಾತ್ರ. ಸಾಮಾಜಿಕ ಜವಾಬ್ದಾರಿ, ಸಾಮಾಜಿಕ ಹೊಣೆಗಾರಿಕೆ ಕಿಂಚಿತ್ತೂ ಅವುಗಳಿಗಿಲ್ಲ. ಈ ಖಾಸಗಿ ಕಂಪನಿಗಳು ವಿಶ್ವದಲ್ಲಿ ತಮ್ಮ ಏಕಸ್ವಾಮ್ಯತೆ ಸಾಧಿಸಲು ಹಾತೊರೆಯುತ್ತಿವೆ. ಇವುಗಳು ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಕಂಪನಿಗಳಲ್ಲಿ

ತಮ್ಮ ಸಹಭಾಗಿತ್ವ ಸ್ಥಾಪಿಸುವುದು, ತಮ್ಮ ಷೇರುಗಳಿಗೆ ಅವಕಾಶ ಗಿಟ್ಟಿಸಿಕೊಳ್ಳುವುದು, ಮುಂದೆ ಸಾರ್ವಜನಿಕ ಉದ್ದಿಮೆಯನ್ನೇ ತಮ್ಮದನ್ನಾಗಿ ಮಾಡಿಕೊಳ್ಳುವ ಹುನ್ನಾರ ನಡೆಸುತ್ತಿವೆ.

ಜಾಗತೀಕರಣ ಎಂದರೆ ಜಗತ್ತಿನ ಗಡಿಗಳನ್ನು ತೊಡೆದು, ರಾಷ್ಟ್ರ ಎಂಬ ಭೌಗೋಳಿಕ ಪರಿಕಲ್ಪನೆಯನ್ನು ಪುಡಿ ಮಾಡಿ, ಮುಕ್ತಗೊಳಿಸಿ ಮೇಲ್ನೋಟಕ್ಕೆ ವಿಶ್ವಮಾನವ ಪ್ರಜ್ಞೆಯಂತೆ ತೋರಿದರೂ, ವಾಸ್ತವದಲ್ಲಿ ಶ್ರೀಮಂತ ರಾಷ್ಟ್ರಗಳ ಅಡಿಯಾಳಾಗಿ ಬಡರಾಷ್ಟ್ರಗಳ ಜನತೆಯ ರಕ್ತ ಹೀರುತ್ತಿದೆ. ಜಾಗತೀಕರಣ ಎಂದರೆ ಆಮದು ನೀತಿ–ನಿಯಮಗಳನ್ನು ಸರಳಗೊಳಿಸುವುದು, ಸಡಿಲಗೊಳಿಸುವುದು. ಇದರ ಪರಿಣಾಮವಾಗಿ ಕೇಂದ್ರ–ರಾಜ್ಯ ಸರ್ಕಾರಗಳು ತಾವು ಹಮ್ಮಿಕೊಳ್ಳಬಯಸುವ ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಕಡಿಮೆ ಮಾಡಬೇಕು, ಅದರೊಟ್ಟಿಗೆ ಸಮಾಜ ಕಲ್ಯಾಣ ಯೋಜನೆಗಳಿಗೆ ಮೀಸಲಿಡುವ ಹಣದ ಪ್ರಮಾಣವನ್ನೂ ಮಿತಿಗೊಳಿಸಬೇಕು. ಅದರಂತೆ ನಮ್ಮ ಸರ್ಕಾರಗಳು ಶಿಕ್ಷಣ, ಆರೋಗ್ಯದ ಮೇಲಿನ ಹಣವನ್ನು ನಿರಂತರವಾಗಿ ಕಡಿತಗೊಳಿಸುತ್ತಾ ಬರುತ್ತಿವೆ. ಮತ್ತೊಂದೆಡೆ ಖಾಸಗಿ ಕಾರ್ಪೋರೇಟ್ ವಲಯಕ್ಕೆ ಕೋಟಿಗಟ್ಟಲೆ ತೆರಿಗೆ ವಿನಾಯ್ತಿಯನ್ನು ಬಳುವಳಿಯಾಗಿ ಕೊಡುತ್ತಿವೆ. ಈ ಎಲ್ಲ ಅಂಶಗಳು ಕಳೆದ ಎರಡು ದಶಕಗಳಲ್ಲಿ ಜನಸಾಮಾನ್ಯರ ಪಾಲಿಗೆ ಮರಣ ಶಾಸನವಾಗಿ ಪರಿಣಮಿಸಿವೆ.

ಜಾಗತೀಕರಣವು ನಮ್ಮಂತಹ ತೃತೀಯ ಜಗತ್ತಿನ ರಾಷ್ಟ್ರಗಳ ಪ್ರಾಕೃತಿಕ ಸಂಪತ್ತನ್ನು ಬಲಿಷ್ಠ ರಾಷ್ಟ್ರಗಳ ಕಡೆಗೆ ಜಾರಿಸುತ್ತಿದೆ. ಜಾಗತೀಕರಣ, ಉದಾರಣೀಕರಣ, ಖಾಸಗೀಕರಣಗಳಿಂದಾಗಿ ಮಾನವ ಸಮಾಜದ ಎಲ್ಲ ಸಂಬಂಧಗಳೂ ಮಾರುಕಟ್ಟೆಯ ಸರಕುಗಳಾಗಿ ಮಾರ್ಪಡುತ್ತಿವೆ. ಈ ಜಾಗತೀಕರಣದಿಂದ ಹಣ, ಅಧಿಕಾರ, ಅಂತಸ್ತುಗಳಿಗೆ ಮನ್ನಣೆ ಸಿಕ್ಕಿ ತಂದೆ–ತಾಯಿ–ಮಕ್ಕಳು, ಅಣ್ಣ–ತಮ್ಮ, ಅಕ್ಕ–ತಂಗಿ, ಬಂಧು–ಬಳಗಗಳ ಸಂಬಂಧಗಳೆಲ್ಲವೂ ಶಿಥಿಲವಾಗಿ ಮಾರುಕಟ್ಟೆಯಿಂದ ನಿಯಂತ್ರಿಸಲ್ಪಡುತ್ತಿವೆ. ಮನುಷ್ಯ ಸಂಬಂಧಗಳನ್ನು ಹಾಳು ಮಾಡಿರುವ ಈ ಜಾಗತೀಕರಣವು ಜನತೆಯನ್ನೇ ಅಪಮೌಲ್ಯಗೊಳಿಸುತ್ತಿದೆ.

ರಹಮತ್ ತರೀಕೆರೆ ಅವರು ಗುರುತಿಸುವಂತೆ ಜಾಗತೀಕರಣವನ್ನು ಎರಡು ನೆಲೆಗಳಲ್ಲಿ ಗ್ರಹಿಸಬಹುದು. 'ನಮ್ಮ ಸಂಸ್ಕೃತಿ ಪ್ರಾಚೀನವಾದುದು, ಬಹುಮುಖಿಯಾದುದು. ಇದರ ಮೇಲೆ ವಿದೇಶದ ಏಕರೂಪಿ ಸಂಸ್ಕೃತಿಯು ಜಾಗತೀಕರಣದ ರೂಪದಲ್ಲಿ ಬಂದಿದೆ. ನಮ್ಮ ಸಂಸ್ಕೃತಿಯನ್ನು ಮಲಿನಗೊಳಿಸಲು ಬಂದ ಈ ಆಕ್ರಮಣಕಾರಿ ದುಷ್ಟನನ್ನು ನಮ್ಮ ಸಂಸ್ಕೃತಿಯ ಮೂಲಕವೇ ಮುಖಾಮುಖಿ ಮಾಡಬೇಕಾಗಿದೆ' ಎನ್ನುವ ಜಾಗತೀಕರಣ ವಿರೋಧಿ ಚಿಂತನೆ ಒಂದು ಕಡೆಯಾದರೆ, 'ಜಾಗತೀಕರಣವು ನಮ್ಮ ಸಮಾಜದ ಕೆಳಜಾತಿಗಳ ದಲಿತರ ದಮನಿತ ಸಂಸ್ಕೃತಿಗಳನ್ನು ವಿಶ್ವದ ಆಧುನಿಕ ಸಂಸ್ಕೃತಿಗಳ ಜತೆ ಸಂವಾದ ಮಾಡಿ ಕೆಳಜಾತಿಗಳ ಬಿಡುಗಡೆಗೆ ಒದಗಿಸಿರುವ ದೇವದೂತನಂತೆ. ಇದಕ್ಕೆ ಬೆನ್ನು ಕೊಡದೆ ಮುಖಾಮುಖಿ ಮಾಡಿ ಲಾಭ ಪಡೆಯಬೇಕು' ಎನ್ನುವ ಜಾಗತೀಕರಣ ಪರವಾದ ಚಿಂತನೆ ಮತ್ತೊಂದು ಕಡೆಗಿವೆ.

ಈ ಶತಮಾನದಲ್ಲಾದ ಮಹತ್ವದ ಬದಲಾವಣೆಗೆ ಕನ್ನಡ ಸಾರಸ್ವತ ಲೋಕ ಜೀವಂತವಾಗಿ ಸ್ಪಂದಿಸಿದೆ. ಆಧುನಿಕತೆ, ಜಾಗತೀಕರಣದ ಒತ್ತಡಗಳಿಗೆ ಸಿಲುಕಿ ಕನ್ನಡ ತತ್ತರಿಸಿ ಹೋಗುತ್ತದೆ ಎನ್ನುವುದರ ನಡುವೆಯೇ ಅದು ಆ ಎಲ್ಲ ಸವಾಲುಗಳಿಗೆ ಸೃಜನಶೀಲವಾಗಿ ಎದೆಯೊಡ್ಡಿ ಮುನ್ನಡೆದಿದೆ. ಅದರ ಫಲವಾಗಿಯೇ ಹೊಸಗನ್ನಡದಲ್ಲಿ ಅನೇಕ ಹೊಸಬರಹಗಾರರು ವೈವಿಧ್ಯಮಯವಾಗಿ ಬರೆಯುತ್ತಿದ್ದಾರೆ, ವರ್ತಮಾನದ ತುರ್ತುಗಳಿಗೆ ಬರಹ ರೂಪ ಕೊಡುತ್ತಿದ್ದಾರೆ. ಅಂತಹವರಲ್ಲಿ ವಸುಧೇಂದ್ರ ಒಬ್ಬರು.

ವಸುಧೇಂದ್ರರ 'ಹಂಪಿ ಎಕ್ಸ್‌ಪ್ರೆಸ್' ಕಥಾಸಂಕಲನ ಜಾಗತೀಕರಣದ ಅನಂತರದ ನಮ್ಮ ಸಮಾಜದ ಬಿಕ್ಕಟ್ಟುಗಳನ್ನು ಬಿತ್ತರಿಸುತ್ತದೆ. ಮುಖ್ಯವಾಗಿ ಬಳ್ಳಾರಿಯ ಸುತ್ತಮುತ್ತ ಮನುಷ್ಯನ ಹಣದ ದಾಹದಿಂದಾದ ಅನಾಹುತಗಳನ್ನು ದಾಖಲಿಸುತ್ತದೆ. ಆ ಪ್ರದೇಶದಲ್ಲಿ ಗಣಿ ಕಾಲಿರಿಸಿದ ಮೇಲೆ ಪರಿಸರದ ಮೇಲಾದ ಅತ್ಯಾಚಾರಗಳನ್ನು, ಅದರ ಪರಿಣಾಮವಾಗಿ ಬಳ್ಳಾರಿಯ ಸುತ್ತಮುತ್ತಲ ಹಸಿರೇ ಹೆಸರಿಲ್ಲದಂತೆ ಕಾಣದಂತಾಗಿರುವುದನ್ನು ಬಹಳ ನೋವಿನಿಂದಲೇ ನುಡಿಯುತ್ತಾರೆ. ಅದರಿಂದ ಪ್ರಕೃತಿಯಲ್ಲಾಗುತ್ತಿರುವ ತೀವ್ರ ಏರುಪೇರುಗಳನ್ನು, ಮನುಷ್ಯನ ಆರೋಗ್ಯದ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ಕಥನಾತ್ಮಕವಾಗಿ ಕಟ್ಟಿಕೊಡುತ್ತಾರೆ.

'ಕೆಂಪು ಗಿಣಿ' ಬಳ್ಳಾರಿಯ ಪರಿಸರ ಮಲಿನಗೊಂಡಿರುವುದನ್ನು ನುಡಿಯುವ ಕತೆ. ಜಾಗತೀಕರಣದ ಪ್ರಭಾವ, ಮನುಷ್ಯನ ಹಣದ ದಾಹ, ಆಧುನಿಕತೆಯ ಹಾವಳಿ, ಯಾಂತ್ರೀಕರಣದ ಪ್ರಭಾವಳಿ, ಮನುಷ್ಯನ ಲೆಕ್ಕಾಚಾರದ ಬದುಕು, ಬಾಂಧವ್ಯಗಳ ಸಡಿಲತೆ– ಈ ಎಲ್ಲವುಗಳಿಗೆ ಧ್ವನಿಪೂರ್ಣವಾಗಿ ಕತೆಯಾಗುತ್ತದೆ. 'ನಮ್ಮ ಹೊಲ'ದ ಬಗ್ಗೆ ಪ್ರಬಂಧ ಬರೆಯುವ ನೆಲೆಯಲ್ಲಿ ವಿನೋದದಲ್ಲಿ ಆರಂಭವಾಗುವ ಕತೆ, ಹಳ್ಳಿಯ ಅರಿವಿರದ ನವಪೀಳಿಗೆ ನಗರಮುಖಿಯಾಗಿರುವುದನ್ನು ತಿಳಿಸುತ್ತದೆ. 'ಹೊಲಕ್ಕೆ ಹೋಗುವುದಕ್ಕೆ ಜಾತ್ರೆಗೆ ಹೋಗುವ ಸಂಭ್ರಮದಲ್ಲಿ ಸಿದ್ಧವಾಗಿಬಿಟ್ಟೆವು', 'ಭೂಮಿತಾಯಿಗೆ ಪೂಜಿ ಮಾಡಿಕೊಂಡು ಬರ್ರಿ', 'ಊರಿಗಿಂತಲೂ ಹೆಚ್ಚಿನ ಆಕಾಶ, ಗಾಳಿ, ಬೆಳಕು ಸಿಗುವ ಬಯಲಿಗೆ ಬಂದಿದ್ದರಿಂದ ಅಕ್ಕ–ನಾನು ಇಬ್ಬರೂ ಬಹಳ ಖುಷಿಯಾಗಿದ್ದೆವು'– ಹಳ್ಳಿಯ, ಕೃಷಿಯ, ಪ್ರಕೃತಿಯ ಸಮೃದ್ಧ ಅನುಭವವನ್ನು ಹೇಳುತ್ತಲೇ ಅದರ ಸೌಂದರ್ಯವನ್ನು ವರ್ಣಿಸುತ್ತಾರೆ. "ನನಗೂ ಅಕ್ಕನಿಗೂ ಹೊಲ ತುಂಬಾ ಖುಷಿಯನ್ನು ಕೊಟ್ಟಿತ್ತು... ಅಷ್ಟೊಂದು ಸನಿಹದಲ್ಲಿ ಹತ್ತಾರು ಗಿಣಿಗಳು ಹಾರಿಹೋಗಿದ್ದು ಸಂಭ್ರಮದ ಸಂಗತಿಯಾಗಿತ್ತು... ನೂರಾರು ಗಿಣಿಗಳು ಎಲ್ಲೆಲ್ಲೋ ಗಿಡದಲ್ಲಿ ಕುಳಿತಿದ್ದವು ಒಮ್ಮೆಲೇ ಹಾರಿಹೋದವು. ಆಕಾಶದಲ್ಲಿ ಹಸಿರು ಮೋಡ ಕವಿದುಕೊಂಡಿತು." ಎನ್ನುತ್ತಾ ಹಸಿರಿನ ಮಹಿಮೆಯನ್ನು ಹೇಳುವ ಕತೆಗಾರರು ಕೆಲವಾರು ವರುಷಗಳು ಉರುಳಿದಂತೆ ಹಸಿರೆಲ್ಲ ಮಾಯವಾದುದನ್ನು ಹೇಳುತ್ತಾರೆ. ನೀನು ಒಂದೊಂದೆ ಗಿಣಿಯನ್ನು ಹಿಡಿದುಕೊಡು ಬಾ ನಾನು ಅದಕ್ಕೆ ಮೈಯೆಲ್ಲ ಕೆಂಪು ಬಣ್ಣ ಬಳಿದುಬಿಡ್ತೀನಿ ಎಂದು ತಮಾಷೆಗಾಗಿ ಹೇಳಿದುದೇ ಮುಂದೆ ಸತ್ಯವಾಗಿ ಹೋಗುವ ದುರಂತ ಎದುರಾಗುತ್ತದೆ, ಗಣಿ ಆರಂಭವಾದಾಗ.

ಬಳ್ಳಾರಿಯ ಹಸಿರಿನ ಪರಿಸರದಲ್ಲಿ ಮನುಷ್ಯನ ಹಣದ ಆಸೆಗಾಗಿ ಇದ್ದ ಭೂಮಿಯನ್ನೆಲ್ಲ ಬಗೆದು, ಗಣಿ ಕೆಲಸ ಮಾಡಿ ಇದ್ದ ಪ್ರಕೃತಿಯನ್ನೇ ಹಾಳುಗೆಡವಿದ್ದನ್ನು ನೋವಿನಿಂದ ಬರೆಯುತ್ತಾರೆ. "ಅಲ್ಲಿ ಹೊಲಗಳೇ ಇರಲಿಲ್ಲ. ಬರೀ ಕೆಂಪು ಧೂಳಿನ ಬಯಲು. ಹೆಜ್ಜೆಯಿಟ್ಟರೆ ಕಮಲದ ಹೂಗಳಿರಬೇಕಾದ ನನ್ನ ಹೊಲದಲ್ಲಿ ಆ ಕಮಲದ ರಕ್ತವನ್ನು ಚೆಲ್ಲಾಡಿದಂತೆ ಕಾಣುತ್ತಿತ್ತು. ಆಳವಾದ ಕುಣಿಗಳನ್ನು ಹೊಲಗಳಲ್ಲಿ ತೋಡಿದ್ದರು. ಕಣ್ಣು ಹಾಯಿಸಿದಲ್ಲೆಲ್ಲಾ ಗಣಿಗಾರಿಕೆ ಮಾಡುತ್ತಿದ್ದರು... ಹುಡುಕಿದರೂ ಒಂದಿಷ್ಟು ಹಸಿರು ಕಾಣುತ್ತಿರಲಿಲ್ಲ. ನೂರಾರು ಯಂತ್ರಗಳು ಇಡೀ ಬಯಲಿನಲ್ಲಿ ಏಕಪ್ರಕಾರವಾಗಿ ಕೆಲಸ ಮಾಡುತ್ತಿದ್ದವು. ಮಣ್ಣನ್ನು ಒಯ್ಯಲು ಸಾವಿರಾರು ಲಾರಿಗಳು ಸಾಗರೋಪಾದಿಯಲ್ಲಿ ನಿಂತಿದ್ದವು. ಇಲ್ಲಿಯ ಮಣ್ಣನ್ನು ಚೈನಾಕ್ಕೆ ಒಯ್ಯುತ್ತವಂತೆ."

ನಮ್ಮ ಗ್ರಾಮೀಣರ ನಂಬಿಕೆ ಏನೆಂದರೆ ಈ ಭೂಮಿಯ ಒಳಗೆ ನಿಧಿ ಇದೆ, ಅದನ್ನು ಏಳು ಎಡೆಯ ಸರ್ಪ ಕಾಯುತ್ತಿರುತ್ತದೆ ಎಂದು. ಆದರೆ ಆಧುನಿಕತೆ ಆಗಮಿಸಿದಂತೆ, ಹಣದ

ದುರಾಸೆ ಅಧಿಕವಾದಂತೆ ಅದೆಲ್ಲವನ್ನು ಮಾರಿ ಭೂಮಿಯನ್ನು ಸ್ಮಶಾನವಾಗಿಸುತ್ತಿದ್ದಾನೆ. ನಿತ್ಯ ಅನ್ನ ಕೊಡುವ ಭೂಮಿಯನ್ನು ಅನ್ಯರ ವಶಕ್ಕೊಪ್ಪಿಸಿ ನಿಂತ ನೆಲೆಯನ್ನೇ ಕಳೆದು ಕೊಳ್ಳುತ್ತಿದ್ದಾನೆ. "ಭೂಮಿಯ ಒಳಗಿರುವ ನಿಧಿಯನ್ನೆಲ್ಲಾ ಹೆಕ್ಕಿ ಹೆಕ್ಕಿ ಕಾಣದ ದೇಶಕ್ಕೆ ಕೊಟ್ಟು ಕಳುಹಿಸುತ್ತಿದ್ದವು. ನಮ್ಮ ಊರನ್ನು ಬರಿದು ಮಾಡುತ್ತಿದ್ದವು. ಯಾರನ್ನೋ ದೇಶವನ್ನೇ ಕೊಳ್ಳುವಷ್ಟು ಶ್ರೀಮಂತರನ್ನಾಗಿಸುತ್ತಿದ್ದವು. ಉಳಿದವರನ್ನು ಮಣ್ಣು ತಿನ್ನುವ ಹೀನಾಯ ಸ್ಥಿತಿಗೆ ಇಳಿಸುತ್ತಿದ್ದವು."

ಎಲ್ಲವನ್ನೂ ನೋಡಿದ ನಿರೂಪಕ ಆಡುವ ಮಾತು ಎಂಥವರನ್ನೂ ಕರಗಿಸಿಬಿಡುತ್ತದೆ. "ಅಕ್ಕಾ, ಕೆಂಪುಗಿಣಿಗಳನ್ನು ಈವತ್ತು ನೋಡಿದೆ. ಗಿಡದಲ್ಲಿ ಅವು ಕುಳಿತರೆ ದಾಸವಾಳದ ಹೂ ಸುರಿದಂತೆ ಕಾಣುವುದಿಲ್ಲಕ್ಕ. ಚರ್ಮ ಸುಲಿದು ಅಂಗಡಿಯಲ್ಲಿ ನೇತು ಹಾಕಿದ ಮಾಂಸದ ತುಂಡುಗಳಂತೆ ಕಾಣುತ್ತವೆ." ಹಸಿರು ಮರ, ಹಸಿರು ಹೊಲ, ಹಸಿರು ಗಿಳಿ ಎಲ್ಲವೂ ಕೆಂಪೋ ಕೆಂಪು. ಎಲ್ಲಿ ನೋಡಿದರೂ ಅಲ್ಲೆಲ್ಲ ಕೆಂಪುಸಾಗರವೇ. ಗಣಿ ಆರಂಭವಾದಾಗ ಕಾಡು ಕಣ್ಮರೆಯಾಗಿ, ಭೂತಾಯಿಯ ಎದೆ ಬಗೆದು, ಆಕಾಶವನ್ನು ಕೆಂಬಣ್ಣದಲ್ಲಿ ಅದ್ದಿ ತೆಗೆದಂತೆ ರಕ್ತಮಯವಾಗಿ ಮಾಡಿರುವುದು ನೋವಿನ ಸಂಗತಿ ಎನ್ನುತ್ತಾರೆ. ತಿನ್ನುವ ಅನ್ನ, ಕುಡಿಯುವ ನೀರು, ಉಸಿರಾಡುವ ಗಾಳಿ ಎಲ್ಲದರಲ್ಲೂ ಈ ಗಣಿಯ ಬಳುವಳಿಯಾಗಿ ಬಂದ ಕೆಂಬಣ್ಣ ಬೆರೆತು ಎಲ್ಲರ ಆರೋಗ್ಯವನ್ನೂ ಹದಗೆಡಿಸುತ್ತಿದೆ, ಪ್ರಕೃತಿಯನ್ನೂ ಎನ್ನುತ್ತಾರೆ ಕತೆಗಾರರು. ಆಧುನಿಕತೆ, ಅಭಿವೃದ್ಧಿ ಎನ್ನುವುದು ಮನುಷ್ಯ ತನ್ನ ಮೇಲೆ ತಾನೇ ಎಳೆದುಕೊಂಡ ಮರಣದ ಚಪ್ಪಡಿ ಕಲ್ಲಂತಾಗಿದೆ.

ಆಧುನಿಕ ಕಾಲದಲ್ಲಿ ಇಂಗ್ಲಿಷ್‌ನ ವ್ಯಾಮೋಹ ಹೆಚ್ಚುತ್ತಿದೆ. ಇಂಗ್ಲೀಷ್ ಕಲಿತರೆ ಮಾತ್ರ ಉದ್ಯೋಗ ಎನ್ನುವ ಭ್ರಮೆಯನ್ನು ಬಿತ್ತುತ್ತಿದೆ. ವಸ್ತುಪ್ರದರ್ಶನದಲ್ಲಿ ಎಲ್ಲಾ ಹುಡುಗರು ಇಂಗ್ಲೀಷಿನಲ್ಲಿ ವಿವರಣೆ ಕೊಡಲು ಒದ್ದಾಡುತ್ತಿದ್ದರು ಎನ್ನುವಲ್ಲಿ ಕನ್ನಡ ಶಾಲೆಗಳ ಜಾಗದಲ್ಲಿ ಆಂಗ್ಲ ಶಾಲೆಗಳು ಆಗಮಿಸಿರುವುದನ್ನು, ಅರ್ಧಂಬರ್ಧ ಕಲಿತ ಮಕ್ಕಳು ಇಂಗ್ಲೀಷಿನ ಮೋಹ ಬೆಳೆಸಿಕೊಳ್ಳುತ್ತಿರುವುದರ ಕಡೆಗೆ ಕತೆ ಕಣ್ಣಾಡಿಸುತ್ತದೆ. ಇಂದು ಸರ್ಕಾರವೇ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಕನ್ನಡ ಸರ್ಕಾರಿ ಶಾಲೆಗಳ ಜಾಗದಲ್ಲಿ ಆರಂಭಿಸಿರುವುದು ಮುಳುಗುತ್ತಿರುವ ಹಡಗಿಗೆ ಕಲ್ಲು ಎತ್ತಿ ಹಾಕಿದಂತೆ ಆಗಿದೆ. ಇಂಗ್ಲೀಷ್ ಮೀಡಿಯಂ ಸ್ಕೂಲು ಬಂದಿರುವುದು, ಕಲರ್ ಟಿ.ವಿ. ಆಗಮಿಸಿರುವುದು, ಸೀರಿಯಲ್‌ಗಳು ಸರಣಿಯಾಗಿ ಬರುತ್ತಿರುವುದು, ರಸ್ತೆ ಹಾಳಾಗಿದ್ದರೂ ಸರಿ ಮೊಬೈಲ್ ಬಂದು ಸಿಗ್ನಲ್ ಕವರೇಜ್ ಆಗುವುದು– ಎಲ್ಲವೂ ಬದಲಾಗುತ್ತಿರುವ ಸಮಾಜಕ್ಕೆ ಸಾಕ್ಷಿಯಾಗಿವೆ. ದುಡಿಯುವ ಜನರನ್ನು ಕೋಣೆಯಲ್ಲಿ ಕೂಡಿಹಾಕಿ ಅವರ ತಲೆಗೆ ಬಿತ್ತಬಾರದ ಬೀಜಗಳನ್ನು ಬಿತ್ತಿ ಅವರ ಮನಸ್ಸನ್ನು ಕಲುಷಿತಗೊಳಿಸಲಾಗುತ್ತಿದೆ, ಸೋಮಾರಿಗಳನ್ನಾಗಿಸುತ್ತಿದೆ, ರೋಗಿಗಳನ್ನಾಗಿಸುತ್ತಿದೆ. ಇಡೀ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡವುತ್ತಿದೆ ಈ ಯಾಂತ್ರೀಕೃತ ಬದುಕು ಎನ್ನುತ್ತಾರೆ ಕತೆಗಾರರು. "ಹೊಲವನ್ನು ಕಾಯುತ್ತಿದ್ದ ಏಳುಹೆಡೆಯ ಸರ್ಪ ಇಂದು ಹೊಲವನ್ನು ಕಬಳಿಸುತ್ತಿರುವ ದೈತ್ಯಯಂತ್ರವಾಗಿ, ದೇವತೆಗಳು ವಿಹಾರಕ್ಕೆ ಬರುತ್ತಿದ್ದ ಪುಷ್ಪಕ ವಿಮಾನಗಳು ಇಂದು ಗಣಿ ಉದ್ದಿಮೆದಾರರ ಧೂಳೆಬ್ಬಿಸುವ ಮಲಿನಕಾರಿ ವಾಹನಗಳಾಗಿ, ಕೆಂಪು ಮೆಣಸಿನಕಾಯಿ ಗಿಡದ ಮೇಲಿನ ಹಸಿರು ಗಿಣಿಗಳು ಕೆಂಪು ಮಾಂಸದ ತುಂಡುಗಳಾಗಿ, ಹೊಲದ ರೈತನ ಮಗ ಕುಮಾರಸ್ವಾಮಿ ರಕ್ಕಸಯಂತ್ರದ ಚಾಲಕನಾಗಿ ಕಾಣಿಸಿಕೊಳ್ಳುವುದು ನಗರೀಕರಣದ ಪ್ರಭಾವಕ್ಕೆ ಒಳಗಾಗುತ್ತಿರುವ ಇಂದಿನ ಎಲ್ಲ ಹಳ್ಳಿಗಳ, ಮನುಷ್ಯರ, ಮನಸ್ಸುಗಳ ಚಿತ್ರಣವಾಗಿದೆ."

'ಕೆಂಧೂಳಿ' ಗಣಿಯ ಪರಿಣಾಮ ಜನರ ಮೇಲಾಗುತ್ತಿರುವುದನ್ನು ಹೇಳುವ ಕತೆ. ಸಮಾಜದ ಹಣದ ವ್ಯಾಮೋಹ ಹೆಚ್ಚಾಗಿ, ಭೂಮಿಯನ್ನು ಬಗೆದು, ಪ್ರಕೃತಿಯ ಕಣ್ಣು, ಮುಖ, ಮೈಗಳ ಮೇಲೆಲ್ಲ ಮಣ್ಣು ಎರಚಿ, ಏನೂ ಕಾಣದಂತೆ ಮಾಡಿ ಎಲ್ಲವನ್ನೂ ದೋಚಿಕೊಂಡು ಹೋಗುತ್ತಾ, ಒಲವಿನ ಜಾಗದಲ್ಲಿ ಕಾಂಚಾಣವನ್ನು ತಂದಿಟ್ಟು ಮನುಷ್ಯನ ಮನಸ್ಸುಗಳನ್ನೇ ಕುರುಡಾಗಿಸುತ್ತಿದೆ. ಕತೆಯ ನಿರೂಪಕ ಚಿಕ್ಕಮ್ಮನನ್ನು ಮತ್ತೆ ಮತ್ತೆ ಕೈತೊಳೆದುಕೊಳ್ಳುವ ರೋಗಕ್ಕೆ ಕಾರಣವನ್ನು ಕೇಳಿದಾಗ "ಆ ಮೈನ್ಸ್ ಲಾರಿಗಳು ಓಡಾಡಲಿಕ್ಕೆ ಶುರು ಆದವು ನೋಡು, ಆಗಿಂದ ಶುರು ಆಯ್ತು ನೋಡು ಈ ರೋಗ. ಮನೆಯಾಗೆ ಎಲ್ಲಿ ನೋಡಿದ್ರೂ ಕೆಮ್ಮಣ್ಣಿನ ಧೂಳು. ಮೊದಮೊದಲಿಗೆ ಅಡಿಗೆ ಮಾಡೋದಕ್ಕಿಂತಾ ಹೆಚ್ಚು ಹೊತ್ತು ಈ ಧೂಳು ಒರಸ್ಲಿಕ್ಕೆ ಒದ್ದಾಡಿದೆ... ಮರ–ಗಿಡ, ಹೂವು–ಹಣ್ಣು, ನಾಯಿ–ಹಂದಿ–ಏನು ನೋಡಿದ್ರೂ ಕೆಂಧೂಳು... ಊರಿನ ಧೂಳೆಲ್ಲಾ ಒರೆಸಲಿಕ್ಕೆ ನನ್ನ ಕೈಲಾಗಲ್ಲ ಅಂತ ಗೊತ್ತಾಯ್ತು. ಅದರ ಬದಲು ನಾನೇ ಸ್ವಚ್ಛ ಇದ್ದರೆ ಸಾಕು ಅನ್ನಿಸಲಿಕ್ಕೆ ಶುರು ಆಯ್ತು. ಆಗಲಿಂದ ಹತ್ತಿಕೊಂಡಿತು ನೋಡಪ್ಪ ಈ ರೋಗ. ಬರೀ ಮೈಮೇಲೊಂದೇ ಅಲ್ಲ, ಮೈಯೊಳಗೂ ಬರೀ ಕೆಂಧೂಳೇ ಸೇರಿಕೊಂಡದೇನೋ ಅನ್ನಿಸ್ತದೆ" ಸತ್ತ ಮಗನ ಕಳೇಬರವನ್ನು ಮುಟ್ಟಿದಾಗಲೂ ಮತ್ತೆ ಮತ್ತೆ ಹೋಗಿ ಕೈತೊಳೆದುಕೊಳ್ಳುವ ಹೃದಯಹೀನ ಸ್ಥಿತಿಗೆ ತಾಯಿಯನ್ನೂ ತಲುಪುವಂತೆ ಮಾಡಿರುವ ಈ ಗಣಿಯು ಮಾನವೀಯತೆಯ ಕಗ್ಗೊಲೆಯನ್ನೇ ಮಾಡುತ್ತಿದೆ. ಮೈಗಷ್ಟೇ ಅಲ್ಲ ಮನಸ್ಸಿಗೂ ಧೂಳು ಅಂಟಿಕೊಂಡಿರುವುದನ್ನು ಹೇಳುತ್ತಾ, ಮೈಮೇಲಿನ ಧೂಳನ್ನು ಕೈತೊಳೆದು ಕಳೆಯಬಹುದು, ಆದರೆ ಮನಸ್ಸಿಗೆ ಅಂಟಿಕೊಂಡಿರುವ ಧೂಳನ್ನು ಕಳೆಯುವುದಾದರೂ ಹೇಗೆ? ಎನ್ನುವ ಬಹುಮುಖ್ಯ ಪ್ರಶ್ನೆ ಎತ್ತುತ್ತದೆ ಈ ಕಥೆ. ಇಂದಿನ ಈ ಆಧುನಿಕ ಯುಗದಲ್ಲೂ, ಅಕ್ಷರವಂತರಾದವರಲ್ಲೂ, ಜ್ಞಾನಿಗಳಾದವರಲ್ಲೂ 'ಮನೆಯೊಳಗೆ ಮನೆಯೊಡೆಯನಿಲ್ಲ'ದಿರುವ ದುಸ್ಥಿತಿಯೇ ಈ ಅವಸ್ಥೆಗೆ ಕಾರಣ ಎನ್ನಬಹುದೇನೋ?.

ಬಿ.ಎ. ಎದುರು ಬಿ.ಇ., ಕಾರ್ಖಾನೆ ಕಾರ್ಮಿಕನ ಎದುರು ಸಾಫ್ಟ್‌ವೇರ್ ಎಂಜಿನಿಯರ್‌ನನ್ನು ತಂದು ನಿಲ್ಲಿಸಿ ಬೆಂಗಳೂರಿಗೆ ಸೇರಿ ಕಾರು ಕೊಂಡ ತಕ್ಷಣ ಶ್ರೀಮಂತರಾಗುವ ಜನರ ಲೇವಡಿ ಮಾಡುವ ಬಗೆ ಇಲ್ಲಿದೆ. ತನ್ನ ಬಂಧು ಆಕ್ಸಿಡೆಂಟ್‌ನಲ್ಲಿ ಸತ್ತಾಗಲೂ ಅಲ್ಲಿಗೆ ಹೋಗಬೇಕಾದರೆ ವೀಕೆಂಡ್‌ಗಾಗಿ ಕ್ಯಾಲೆಂಡರ್ ನೋಡುವ ಮನಸ್ಥಿತಿ ರೂಪಿಸಿರುವುದು ಸಂಬಂಧಗಳೇ ಸತ್ತು ಹೋಗಿವೆ ಎನ್ನುವ ಕಡೆಗೆ ಬೆರಳು ಮಾಡಿ ತೋರಿಸುತ್ತದೆ. ದುಡಿಸಿಕೊಳ್ಳುವುದಕ್ಕಷ್ಟೇ ಕೆಲಸಗಾರರು ಬೇಕಿರುವ ಈ ಆಧುನಿಕ ಕಾರ್ಖಾನೆಗಳು ಆ ಕೆಲಸಗಾರರಿಗೆ ತೊಂದರೆಯಾದಾಗ ಅದರಿಂದ ನುಣುಚಿಕೊಳ್ಳುವುದು ಸಾಮಾಜಿಕ ಜವಾಬ್ದಾರಿ ಇಲ್ಲದ ಕೇವಲ ಲಾಭಕೋರತನದ ಉದ್ದೇಶ ಹೊಂದಿರುವುದನ್ನು ಸೂಚಿಸುತ್ತದೆ ಎನ್ನುತ್ತಾರೆ.

'ಒಲ್ಲದ ತಾಂಬೂಲ' ಅಪಾರ್ಟ್‌ಮೆಂಟ್ ಸಂಸ್ಕೃತಿಯ ಆಗಮನ, ಯಾಂತ್ರೀಕರಣದ ಹಾವಳಿಯನ್ನು ಹೇಳುತ್ತಲೇ ಮೋಹನಸ್ವಾಮಿಯ ಮಧುರ ಬಾಂಧವ್ಯಗಳನ್ನು ಕಟ್ಟಿ ಕೊಡುತ್ತದೆ. ಮೋಹನಸ್ವಾಮಿ–ಗುರುರಾಜರ ಸಂಸಾರದ ಸ್ನೇಹ ಹದಿನೈದು ವರ್ಷಗಳಿಂದ ಸುಮಧುರವಾಗಿಯೇ ಇದೆ. ಹಲವಾರು ವರ್ಷಗಳಿಂದ ಇದ್ದ ಸ್ನೇಹ ಕಹಿ ಗಳಿಗೆಯಲ್ಲಿ ಕಡಿದು ಹೋಗಿರುವ, ಮತ್ತೆ ಒಂದುಗೂಡಿಸಲು ಯತ್ನಿಸಿದರೂ ಸಾಧ್ಯವಾಗದಿರುವ ಅಪಾರ ಅನುಭವ ಹೊಂದಿರುವ ಮೋಹನಸ್ವಾಮಿಗೆ ಎಲ್ಲರಿಂದಲೂ ಕಡಿದುಹೋಗಿ ಏಕಾಂಗಿಯಾಗಿ ಬಿಡುವ ಭಯ ಆವರಿಸಿಬಿಟ್ಟಿದೆ. ಓದುವಾಗ ಸಿಗುತ್ತಿದ್ದ ಅಪಾರ ಗೆಳೆಯರು, ಕಾಲಕಳೆದಂತೆ ಮದುವೆಯಾಗಿ ಹೋದಾಗ ಫೋನಿಗಷ್ಟೇ ಸಿಗುತ್ತಿದ್ದವರು, ಈಗ ಮಕ್ಕಳಾಗಿ ಹೋದ ಮೇಲೆ

ಅದಕ್ಕೂ ಸಿಗದೆ ತಾನು ಒಂಟಿಯಾಗುತ್ತಿರುವೆನೆಂಬ ಭೂತ ಅವನನ್ನು ಕಾಡತೊಡಗಿದೆ. ಆ ಒಂಟಿತನಕ್ಕೂ ಆತ ಒಗ್ಗಿಕೊಂಡು ಬಿಟ್ಟಿದ್ದಾನೆ. ನಗರ, ಮಹಾನಗರಗಳ ಜನರ ಮನಸ್ಥಿತಿಯನ್ನು ಕಥೆಗಾರರು ಇಲ್ಲಿ ತೆರೆದಿಡುತ್ತಾ ಹೋಗುತ್ತಾರೆ. ಗ್ರಾಮೀಣ ಪರಿಸರದಿಂದ ಓದಿಗೆಂದು ನಗರಕ್ಕೆ ಬಂದು, ಮುಂದೆ ಕೆಲಸವನ್ನೂ ದಕ್ಕಿಸಿಕೊಂಡು ಹಳ್ಳಿಯ ಕಡೆಗೆ ಮುಖ ಮಾಡಿ ನೋಡಲಾಗದೆ, ನಗರದ ಚಿನ್ನದ ಪಂಜರದಲ್ಲಿ ಬಂಧಿಯಾಗಿ ಬಿಡುವ ಗಿಳಿಯಂತೆ ಯುವ ಸಮೂಹ ಓಡಿಬರುತ್ತಿದೆ ಎನ್ನುತ್ತಾರೆ. ಏಕೆಂದರೆ ಇಂದಿನ ಶಿಕ್ಷಣ 'ಗಿಳಿಯೋದಿ ಫಲವೇನು ಬೆಕ್ಕುಬಹುದ ಹೇಳಲರಿಯದು' ಎನ್ನುವಂತಿದೆ ಎನ್ನುತ್ತಾರೆ.

ಆದರೆ ಅವನು ಒಂಟಿಯಲ್ಲ ಎನ್ನುವಂತೆ, ನಿನ್ನೊಂದಿಗೆ ನಾವಿದ್ದೇವೆ ಎನ್ನುವ ಭರವಸೆಯನ್ನು ಬಿತ್ತುತ್ತಿರುವುದು ಗುರುರಾಜ ಮತ್ತು ಅವನ ಸಂಸಾರ. ಅವರ ಮನೆಗೆ ಹೋದಾಗಲೆಲ್ಲ ಊಟ ಮಾಡಿಸಿಯೇ ಕಳುಹಿಸುವ ಅವರ ಸೌಜನ್ಯ ಈ ನಗರೀಕರಣದೊಳಗೆಯೂ ಇರುವ ಮನುಷ್ಯಪ್ರೀತಿಗೆ ಸಂಕೇತವಾಗಿದೆ. ಅಪರೂಪಕ್ಕಾದರೂ ಅಲ್ಲಲ್ಲಿ ಈ ಮನುಷ್ಯ ಪ್ರೀತಿಯ ಕಾರಂಜಿ ಬುಗ್ಗೆಗಳಿವೆ ಎನ್ನುತ್ತಾರೆ ಕಥೆಗಾರರು, ಆದರೆ ಅವುಗಳ ಸಂಖ್ಯೆ ತುಂಬಾ ಕಡಿಮೆ ಎನ್ನುವುದೂ ಕಟುಸತ್ಯ. ಗುರುರಾಜನ ತಾಯಿ ಮೋಹನಸ್ವಾಮಿಗೆ 'ಬಡಾನ ಮದುವಿ ಆಗಿಬಿಡಲಪ್ಪಾ' ಎಂದು ಹರಸುವುದು ಅವನೆದೆಯಲ್ಲಿ ಆಸೆಯನ್ನು ಬಿತ್ತುತ್ತದೆ. "ಈ ತಾಯಿಯ ಹರಕೆಯಂತೆ ಏನೋ ನನ್ನಲ್ಲಿಯೇ ಪವಾಡ ಜರುಗಿ, ಹೆಣ್ಣನ್ನು ಪಡೆಯುವ ಸ್ಥಿತಿ ಉಂಟಾದರೆ ಬದುಕು ಅದೆಷ್ಟು ಸುಂದರವಲ್ಲವೆ? ಎಂದು ಕನಸು ಕಾಣುತ್ತಾನೆ." ಮೋಹನ ಸ್ವಾಮಿಗೆ ಎಲ್ಲರಂತೆ ಬದುಕಬೇಕೆನ್ನುವ ಆಸೆ ಇದೆ, ಆದರೆ ಅದಕ್ಕೆ ಅವಕಾಶ ಮಾಡಿಕೊಡದ ನಿಸರ್ಗ ಅವನೊಂದಿಗೇ ಇರುವುದು ನೋವಿನ ಸಂಗತಿಯೇ ಆಗಿದೆ. 'ತುತ್ತತುದಿಯಲಿ ಮೊತ್ತಮೊದಲು', 'ಕಗ್ಗಂಟು', 'ಕಾಶೀವೀರರು' ಕಥೆಗಳನ್ನು ಓದಿಕೊಂಡು ಬಂದವರಿಗೆ ಮೋಹನಸ್ವಾಮಿಯ ಈ ಯಾತನೆ ಅರ್ಥವಾಗುತ್ತದೆ.

ಈ ಮೋಹನಸ್ವಾಮಿಗೆ ಅಪಾರ್ಟ್‌ಮೆಂಟೊಂದನ್ನು ಕೊಳ್ಳಲು ಗುರುರಾಜ ಸಲಹೆ ನೀಡುತ್ತಾನೆ. ಅವನ ಮಾತಿನಂತೆ ಅಪಾರ್ಟ್‌ಮೆಂಟ್ ನೋಡಲು ಹೋದಾಗ ಅಲ್ಲಿ ಎದುರಾಗುವ ಮೆಟೀರಿಯಲಿಸ್ಟಿಕ್ ಸಂಸ್ಕೃತಿ, ವಾಸ್ತು ಮೊದಲಾದವು ಮೋಹನಸ್ವಾಮಿಯನ್ನು ಇನ್ನಿಲ್ಲದಂತೆ ಕಾಡಿ, ಹುಲಿಯ ಗುಹೆಯಿಂದ ತಪ್ಪಿಸಿಕೊಂಡು ಹೊರಬರುವಂತೆ ಅಪಾರ್ಟ್‌ಮೆಂಟ್‌ನಿಂದ ತಪ್ಪಿಸಿಕೊಂಡು ಹೊರಬರುತ್ತಾನೆ. ಮನುಷ್ಯ ತನ್ನ ಅಗತ್ಯಕ್ಕಿಂತ ಮೀರಿದ ಐಷಾರಾಮಿಯಲ್ಲಿ ಮುಳುಗಿ ಹೋಗುತ್ತಿದ್ದಾನೆ, ಅಲ್ಲಿ ಮೆಟೀರಿಯಲ್‌ಗಳಿಗೆ ಇರುವ ಬೆಲೆ ಮನುಷ್ಯ ಸಂಬಂಧಗಳಿಗಿಲ್ಲ ಎನ್ನುತ್ತಾರೆ. ಈ ಆಧುನಿಕ ಕಾಲದಲ್ಲೂ ಸಾಂಪ್ರದಾಯಿಕವಾಗಿ ಬಂದ, ಈಗ ಭೂತಾಕಾರವಾಗಿ ಬೆಳೆಯುತ್ತಿರುವ ಜನರ ವಾಸ್ತುವಿನ ಮೋಹವನ್ನು ಕಥೆಗಾರರು ತಿಳಿಸುತ್ತಾರೆ.ಅದು ವೈಜ್ಞಾನಿಕವೇ, ಮೌಢ್ಯವೇ ಎನ್ನುವುದನ್ನೂ ನೋಡದೆ ಕಣ್ಣುಮುಚ್ಚಿ ವಾಸ್ತುವೆಂದು ಸ್ವೀಕರಿಸುತ್ತಿರುವ ಜನರ ಸಂಖ್ಯೆ ಈ ಕಂಪ್ಯೂಟರ್ ಯುಗದಲ್ಲೂ ಅಧಿಕವಾಗುತ್ತಿರುವುದು ನಾಚಿಕೆಗೇಡಿನ ಸಂಗತಿ ಎನ್ನುತ್ತಾರೆ.ಆಧುನಿಕತೆ–ಸಾಂಪ್ರದಾಯಿಕತೆಗಳು ಇಲ್ಲಿ ಸಂಘರ್ಷಕ್ಕಿಂತ, ಕೈಕೈ ಬೆಸೆದು ಸಾಗುವುದು ಅಚ್ಚರಿ ಎನಿಸುತ್ತದೆ.

'ದುರ್ಭಿಕ್ಷ ಕಾಲ' ಜಾಗತಿಕ ಆರ್ಥಿಕ ವಿದ್ಯಮಾನಗಳು ಮನುಷ್ಯ ಸಂಬಂಧಗಳ ಮೇಲೆ ಮಾಡುವ ಹಾವಳಿಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವ ಕಥೆ. ಮನೆಯಲ್ಲಿ ಮಕ್ಕಳಿರಬೇಕೇ?, ಎಷ್ಟು ಮಕ್ಕಳು ಬೇಕು?, ಯಾವಾಗ ಮಕ್ಕಳು ಬೇಕು?, ಮನುಷ್ಯ ಸಂತಾನದ ಆಯ್ಕೆಯನ್ನು ಮನಷ್ಯನೇ ನಿರ್ಧರಿಸದೆ ಜಗತ್ತಿನಲ್ಲಿ ನಡೆಯುವ ವಿದ್ಯಮಾನಗಳು ನಿರ್ಧರಿಸುತ್ತಿರುವುದು,

ನಿಯಂತ್ರಿಸುತ್ತಿರುವುದು ಇತ್ತೀಚೆಗೆ ಕಂಡುಬರುತ್ತಿದೆ. ಬಿಹಾರ ಮೂಲದಿಂದ ಬಂದ ದೇವಿಕಾ ಕಾಲ್‌ಸೆಂಟರಿನ ಕೆಲಸದಿಂದ ಹಂತಹಂತವಾಗಿ ಮೇಲೇರಿ ನೆಲೆಯೂರಿದವಳು. ಬೆಂಗಳೂರಿನ ಮಾಲ್ ಸಂಸ್ಕೃತಿಯ ಭಾಗವಾಗಿ ಬರುವ ಪೇಪರ್ ನೃತ್ಯದ ಹೊತ್ತಿನಲ್ಲಿ ಮಹಾರಾಷ್ಟ್ರ ಮೂಲದ ವಿನಾಯಕ ಕುಲಕರ್ಣಿಯನ್ನು ಸಂಧಿಸಿ, ಪ್ರೇಮಿಸಿ ವಿವಾಹವಾಗುತ್ತಾಳೆ. ಆಧುನಿಕತೆಯ ಆಸೆಗೊಳಗಾಗಿ ದೊಡ್ಡ ಅಪಾರ್ಟ್‌ಮೆಂಟ್‌ನ್ನು ಬ್ಯಾಂಕಿನ ಸಾಲದಲ್ಲಿ ಖರೀದಿಸಿ ಸಂಸಾರ ಸಾಗಿಸುತ್ತಾರೆ. ದೇಹಾರೋಗ್ಯದ ಬಗ್ಗೆ ಅಪಾರ ಕಾಳಜಿ ವಹಿಸುತ್ತಾಳೆ. ಆದರೆ ಮದುವೆಯಾಗಿ ಮೂರು ವರ್ಷಗಳು ಉರುಳಿದರೂ ಮಕ್ಕಳಾಗಲಿಲ್ಲ ಎನ್ನುವ ಸಮಸ್ಯೆ ಭೂತದಂತೆ ಕಾಡಿ, ಆಸ್ಪತ್ರೆಗಳನ್ನು ಅಲೆದು ಡಾಕ್ಟರ್‌ರ ಸಲಹೆಯಂತೆ ಔಷಧಿ ಸ್ವೀಕರಿಸುತ್ತಾಳೆ. ಔಷಧಿಯ ಅಡ್ಡ ಪರಿಣಾಮವಾಗಿ ಇದುವರೆಗೂ ಅವಳು ಕಾಪಾಡಿಕೊಂಡು ಬಂದಿದ್ದ ಸೌಂದರ್ಯವೆಲ್ಲ ಹಾಳಾಗಿ ದಪ್ಪಗಾಗುತ್ತಾಳೆ. ಇಷ್ಟಾದರೂ ಅವಳಿಗೆ ಮಕ್ಕಳು ಮಾತ್ರ ಆಗದೆ, ಆ ಸಂಕಟದಲ್ಲೇ ಬದುಕು ಸಾಗಿಸುತ್ತಾಳೆ. ಪತಿ ಕುಲಕರ್ಣಿಯು ಅವಳನ್ನು ಸಂತೋಷಪಡಿಸಲು ವಿದೇಶ ಪ್ರವಾಸ, ಫಾರ್ಮ್‌ಹೌಸ್ ಭೇಟಿ ಮೊದಲಾದವುಗಳನ್ನು ಮಾಡಿದರೂ ದೇವಿಕಾ ಮೊದಲಿನಂತಾಗುವುದಿಲ್ಲ.

ಇಂತಹ ಸಂದರ್ಭದಲ್ಲೇ ಕೆಲಸ ಹುಡುಕುತ್ತಾ ನಿರಂತರ ಪ್ರಯತ್ನಿಸುತ್ತಿದ್ದ ದೇವಿಕಾಳಿಗೆ ಪ್ರಾಜೆಕ್ಟ್ ಒಂದರಲ್ಲಿ ಕೆಲಸ ಸಿಗುತ್ತದೆ. ಅವಳು ಮೊದಲಿನ ಶ್ರದ್ಧೆಯಿಂದ ಕೆಲಸ ಮಾಡುತ್ತಾ ಎಲ್ಲರ ಮೆಚ್ಚುಗೆ ಗಳಿಸುವ ಹೊತ್ತಿಗೇನೇ, ಅವಳಿಗೆ ಗರ್ಭಾಂಕುರವಾಗುತ್ತದೆ. ಅವಳು ಗರ್ಭ ಧರಿಸಿರುವುದರಿಂದ ಮುಂದೆ ತನ್ನ ಪ್ರಾಜೆಕ್ಟ್‌ಗೆ ಕೆಡುಕಾಗುತ್ತದೆಂದು ಪ್ರಾಜೆಕ್ಟ್‌ನ ಮ್ಯಾನೇಜರ್ ವಿಶಾಲ್ ಮತ್ತವನ ಬಳಗ ದೇವಿಕಾಳಿಗೆ ತೊಂದರೆ ಕೊಡಲಾರಂಭಿಸುತ್ತದೆ. ವಿಶಾಲ್‌ನ ತಾಯಿ ಮಾತ್ರ ಗರ್ಭಿಣಿಯರಿಗೆ ತೊಂದರೆ ಕೊಡಬಾರದೆಂದು ಪರಿಪರಿಯಾಗಿ ತಿಳಿ ಹೇಳುತ್ತಾಳೆ. ಅದ್ಯಾವುದಕ್ಕೂ ವಿಶಾಲ್ ಕಿವಿಗೊಡುವುದಿಲ್ಲ. ಆದರೆ ದೇವಿಕಾ ಕಂಪನಿಯ ಆ ಏಳ್ಗೆಗಿಂತಲೂ ಏಳೆಂಟು ವರ್ಷಗಳಿಂದ ತಾನು ಹಂಬಲಿಸುತ್ತಿದ್ದ ತಾಯಿಯಾಗುವ ಕನಸು ನನಸಾಗುತ್ತದೆಂದು ಅವೆಲ್ಲವುಗಳನ್ನು ಎದುರಿಸಿ ನಿಂತು ಕೆಲಸ ಮಾಡಲಾರಂಭಿಸುತ್ತಾಳೆ.

ಆದರೆ ದಿನಗಳೆದಂತೆ ಆರ್ಥಿಕ ಹಿಂಜರಿತ ಜಗತ್ತಿನಾದ್ಯಂತ ಹರಡಿ, ಅದರ ಪರಿಣಾಮವಾಗಿ ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ದೇವಿಕಾಳ ಪತಿ ಕುಲಕರ್ಣಿ ಕೆಲಸ ಕಳೆದುಕೊಳ್ಳುತ್ತಾನೆ. ಬ್ಯಾಂಕಿನಲ್ಲಿ ಮಾಡಿದ್ದ ಸಾಲ ಕೊಡಲೇಬೇಕಾಗಿರುತ್ತದೆ. ಮೂರು ಹೊತ್ತಿನ ಊಟಕ್ಕೂ ಪರದಾಡಬೇಕಾದ ಕಾಲ ಬರುತ್ತದೆ. ಇಂತಹ ದುರ್ಭಿಕ್ಷ ಕಾಲದಲ್ಲೇ ದೇವಿಕಾ ಮತ್ತವಳ ಪತಿ ಕುಲಕರ್ಣಿ ಇಬ್ಬರೂ ತೀರ್ಮಾನಿಸಿ, ಎಷ್ಟೋ ಕಾಲದಿಂದ ಧ್ಯಾನಿಸಿ ಪಡೆದಿದ್ದ ಅವಳ ಗರ್ಭವನ್ನು ತೆಗೆಯಿಸುತ್ತಾರೆ. ಕೆಲಸದಿಂದ ತೆಗೆದುಬಿಡುತ್ತಾರೆ ಎಂದು ಹೆದರಿ, ಕೆಲಸಕ್ಕಾಗಿಯೇ ಗರ್ಭ ತೆಗೆಸಿಕೊಂಡ ದೇವಿಕಾ ಆ ನೋವಿನಲ್ಲೂ ಕೆಲಸಕ್ಕೆ ಹಾಜರಾಗುತ್ತಾಳೆ. ಯಾವುದಕ್ಕಾಗಿ ದೇವಿಕಾ ಹಂಬಲಿಸುತ್ತಿದ್ದಳೋ, ಏಳೆಂಟು ವರ್ಷಗಳಿಂದ ಹಪಹಪಿಸುತ್ತಿದ್ದಳೋ ಅದು ಈಗ ತಾನಾಗೇ ಕೈಗೂಡಿ ಬಂದರೂ, ಅದನ್ನು ಉಳಿಸಿ ಕೊಳ್ಳಲಾಗದೆ ತಾಯಿಪ್ರೀತಿಯನ್ನೇ ಬದುಕಿಗಾಗಿ ಬಲಿಕೊಡಬೇಕಾದ ಸಂಕಟಕ್ಕೆ ಸಿಕ್ಕಿಹಾಕಿ ಕೊಳ್ಳುತ್ತಾಳೆ ಎನ್ನುತ್ತಾ, ನಮ್ಮ ಬದುಕನ್ನು ಹೇಗೆ ಅನ್ಯಶಕ್ತಿಗಳು ನಿಯಂತ್ರಿಸುತ್ತವೆ ಎನ್ನುವುದನ್ನು ಕತೆ ಸೊಗಸಾಗಿ ಕಟ್ಟಿಕೊಡುತ್ತದೆ. ಜಗತ್ತಿನ ಆರ್ಥಿಕ ಪರಿಸ್ಥಿತಿಗಳು ಹೇಗೆ ಕುಟುಂಬದ ಸುಖ–ದುಃಖಗಳನ್ನು ತನ್ನ ಹತೋಟಿಯಲ್ಲಿಟ್ಟು ಕೊಂಡಿರುತ್ತದೆ, ತನ್ನ ತಾಳಕ್ಕೆ ತಕ್ಕ ಹಾಗೆ ಜನರನ್ನು ಹೇಗೆ ಕುಣಿಸುತ್ತದೆ ಎನ್ನುವುದನ್ನು ಈ ಕಥೆ ತಿಳಿಸುತ್ತದೆ.

ಚೇಳು ಕಥಾಸಂಕಲನದ 'ಚೇಳು' ನಮ್ಮೊಂದಿಗೆ ಸಹಜೀವನ ನಡೆಸುತ್ತಿದ್ದ ಚೇಳುಗಳು ಹಣದ ಮಾರುಕಟ್ಟೆ ಸಂಸ್ಕೃತಿ ಬಂದ ಮೇಲೆ ಮಾರಣ ಹೋಮಕ್ಕೊಳಗಾದುದನ್ನು, ಅದರೊಟ್ಟಿಗೆ ನಮ್ಮ ಜನಪದರ ನಾಟಿವೈದ್ಯ ಪದ್ಧತಿಯು ನಾಮಾವಶೇಷವಾದುದನ್ನು ಹೇಳುವ ಕಥೆ. ಬಂಜೆತನಕ್ಕೆ ಹೆಣ್ಣನ್ನೇ ಸಂಪೂರ್ಣ ಹೊಣೆಗಾರರನ್ನಾಗಿ ಮಾಡುವ ನಮ್ಮ ಸಮಾಜ ಹೆಣ್ಣನ್ನು ಸದಾ ಪುರುಷ ಪ್ರಧಾನತೆಯ ಅಡಿಯಲ್ಲಿ ಇರಿಸಿಕೊಳ್ಳಲು ಒತ್ತಾಯಿಸುತ್ತದೆ ಎನ್ನುವುದನ್ನೂ ಕಥೆ ಹೇಳುತ್ತದೆ. ಚೇಳುಗಳದ್ದೇ ಸಾಮ್ರಾಜ್ಯವಾದ ಊರಿನಲ್ಲಿ, ಚೇಳು ಕಡಿದವರಿಗೆ ಔಷಧಿ ಕೊಡುವ ವೆಂಕಮ್ಮನಿಗೆ ಎಲ್ಲಿಲ್ಲದ ಗೌರವ. ಆದರೆ ವೆಂಕಮ್ಮ ಈ ಔಷಧಿ ಕಲಿತುಕೊಂಡದ್ದಕ್ಕೂ ಒಂದು ಕಥೆಯಿದೆ. ಮದುವೆಯಾಗಿ ಮೂರು ವರ್ಷ ಉರುಳಿದರೂ ಮಕ್ಕಳಾಗದ ವೆಂಕಮ್ಮನನ್ನು ಅವಳ ಗಂಡ ಕೊಮ್ಮಣ್ಣ ಒತ್ತಾಯ ಮಾಡಿ ಭೈರವ ಬಾಬಾನ ಬಳಿಗೆ ಕಳುಹಿಸುವುದು, ಅವರ ನಡುವೆ ಅಕ್ರಮ ಸಂಬಂಧ ಏರ್ಪಟ್ಟು, ಅದು ಎಲ್ಲರಿಗೂ ಗೊತ್ತಾಗಿ, ಭೈರವ ಬಾಬಾನೇ ಚೇಳಿಗೆ ಔಷಧಿ ಕೊಡುವ ವಿದ್ಯೆ ಹೇಳಿಕೊಟ್ಟುದರಿಂದ ಎಲ್ಲರಿಂದ ತಿರಸ್ಕೃತಗೊಂಡ ವೆಂಕಮ್ಮ ದುರ್ಗಮ್ಮನ ಗುಡಿಯಲ್ಲೇ ತನ್ನ ಬದುಕು ಸಾಗಿಸುತ್ತಾ ಚೇಳು ಕಡಿದವರಿಗೆ ಔಷಧಿ ಕೊಡುತ್ತಾ ಹೋಗುತ್ತಾಳೆ.

ಲಕ್ಷ್ಮಿಚಂದಲಾಲನ ಪುತ್ರ ಪಂಕಜನಿಗೆ ಔಷಧಿ ಕೊಡುವುದರಿಂದ ಆದ ಚೇಳಿನ ವೆಂಕಮ್ಮನ ಔಷಧದ ಮಹಿಮೆ, ಹತ್ತೂರಿನವರಿಗೂ ವಿಸ್ತರಿಸಿ, ಕೊನೆಗೆ ಅವಳ ಸವತಿ ಹನುಮಕ್ಕನೇ ಬಂದು ಅಂಗಲಾಚಿದಾಗ, ತನಗೆ ಕೊಟ್ಟ ಕಷ್ಟಗಳನ್ನೂ ಮರೆತು ವೈದ್ಯ ಧರ್ಮವನ್ನು ಪಾಲಿಸಿ ಕೊಮ್ಮಣ್ಣನಿಗೆ ಜೀವದಾನ ಮಾಡುತ್ತಾಳೆ. ಆದರೆ ಕೊಟ್ರೇಶಿಯ ಆಗಮನದಿಂದ, ಹತ್ತು ರೂಪಾಯಿಗೆ ಚೇಳಿನ ಔಷಧಿಯನ್ನು ಮಾರುವುದರಿಂದ ವೆಂಕಮ್ಮನ ಔಷಧವೇ ಯಾರಿಗೂ ಬೇಡವಾಗುತ್ತದೆ. ಕೆಂಪು ದ್ರಾವಣದ ಔಷಧಿಯನ್ನು ಬಳಸಿದರೆ ಸಾಕು ಚೇಳುಗಳು ರಾಶಿ ರಾಶಿಯಾಗಿ ಸತ್ತು ಬೀಳುತ್ತವೆ. ದಿನಗಳೆದಂತೆ ತಿನ್ನುವ ಅನ್ನಕ್ಕೂ ವೆಂಕಮ್ಮ ಪರದಾಡಬೇಕಾಗುತ್ತದೆ. ಕೊನೆಗೆ ಆ ಚೇಳಿನ ಔಷಧಿಯನ್ನು ಖರೀದಿಸಿದ ವೆಂಕಮ್ಮ ಅದನ್ನು ಕುಡಿದೇ ಸಾಯುತ್ತಾಳೆ.

ತೇಜಸ್ವಿಯವರ ಕರ್ವಾಲೋ ಕಾದಂಬರಿಯಲ್ಲಿನ ಮಂದಣ್ಣ ದೇಶೀ ವಿಜ್ಞಾನಿಯಾಗಿ ಕಾಣುವಂತೆ ಇಲ್ಲಿ ವೆಂಕಮ್ಮ ತೋರುತ್ತಾಳೆ. ಚೇಳಿನ ಬಗೆಬಗೆಯ ಜಾತಿಗಳ ಬಗ್ಗೆ ಅಪಾರ ಜ್ಞಾನ ಹೊಂದಿದ್ದ ವೆಂಕಮ್ಮ ಯಾವ ಚೇಳು ಕಡಿದರೆ ಯಾವ ಔಷಧ ಕೊಡಬೇಕು, ಯಾವ ಗಿಡಮೂಲಿಕೆಯಿಂದ ಔಷಧ ತಯಾರು ಮಾಡಬೇಕು, ಯಾವ ಪ್ರಮಾಣದಲ್ಲಿ ಔಷಧ ಬಳಸಬೇಕು ಎನ್ನುವುದನ್ನೆಲ್ಲ ಕರಗತ ಮಾಡಿಕೊಂಡಿದ್ದಳು. ಅಲ್ಲದೇ ಈ ಕೆಲಸವನ್ನೆಲ್ಲ ಅವಳು ಸೇವೆ ಎಂದು ಮಾಡುತ್ತಿದ್ದಳೇ ಹೊರತು, ಹಣ ಸಂಪಾದನೆಗಲ್ಲ ಎನ್ನುವುದು ಲಕ್ಷ್ಮಿಚಂದಲಾಲನ ಪುತ್ರನಿಗೆ ಔಷಧಿ ಕೊಟ್ಟಾಗ ಇದ್ದ ಒಬ್ಬ ಮಗನನ್ನು ಬದುಕಿಸಿದೆ ಎನ್ನುವ ಋಣದಲ್ಲಿ ಅವನು ಹಣದ, ಚಿನ್ನದ ರಾಶಿಯನ್ನೇ ಮುಂದಿಟ್ಟರೂ ವೆಂಕಮ್ಮ ಅದನ್ನು ಸೌಮ್ಯವಾಗಿಯೇ ತಿರಸ್ಕರಿಸುತ್ತಾಳೆ ಎನ್ನುವಲ್ಲಿ ತಿಳಿದುಕೊಳ್ಳಬಹುದು. ತಾನೇನಾದರೂ ಹಣ ಮುಟ್ಟಿದರೆ ಔಷಧದ ಗುಣ ಹೋಗಿಬಿಡುತ್ತದೆ ಎಂದು ಅದನ್ನು ಸ್ವೀಕರಿಸದೆ, ಹಣವೇ ಮುಖ್ಯವಲ್ಲದ ನಮ್ಮ ಪುರಾತನ ವೈದ್ಯ ಪದ್ಧತಿಯ ಶ್ರೇಷ್ಠತೆಯನ್ನು ವೆಂಕಮ್ಮ ಸಾರುತ್ತಾಳೆ. ಆದರೆ ಹಣ ಸಂಪಾದಿಸುವುದಕ್ಕೆಂದೇ ಬಂದ ಕೊಟ್ರೇಶಿಯ ಔಷಧ ಮಾರಾಟದ ಸಂದರ್ಭದಲ್ಲಿ ಈ ಯಾವ ಮೌಲ್ಯಗಳೂ ಕಾಣುವುದಿಲ್ಲ.

ಅಲ್ಲದೆ ವೆಂಕಮ್ಮ ಚೇಳು ಕಡಿದವರಿಗೆ ಔಷಧ ಕೊಡುತ್ತಿದ್ದಳೇ ಹೊರತು ಚೇಳುಗಳನ್ನು

ಸಾಯಿಸುತ್ತಿರಲಿಲ್ಲ, ಆದರೆ ಆಧುನಿಕತೆಯ ಹಣದ ಮಾರುಕಟ್ಟೆಯ ಬಳುವಳಿಯಾಗಿ ಬಂದ ಕೊಟ್ರೇಶಿ ಕೊಟ್ಟ ಔಷಧ ಚೇಳುಗಳ ಮಾರಣಹೋಮವನ್ನೇ ಮಾಡಿಬಿಡುತ್ತದೆ, ಅವುಗಳ ಸಂತತಿಯನ್ನು ನಾಮಾವಶೇಷ ಮಾಡುತ್ತದೆ. ಕೊಲ್ಲದ, ಹಣ ಮುಖ್ಯವೆನಿಸದ, ಸಹಬಾಳ್ವೆಯ ನಮ್ಮ ಪ್ರಾಚೀನ ವೈದ್ಯ ಪದ್ಧತಿಗೂ, ಕೊಲ್ಲುವ, ಹಣವೇ ಪ್ರಧಾನವಾದ, ಜೀವಜಂತುಗಳನ್ನು ತನ್ನ ಅನುಕೂಲಕ್ಕೆ ಕೊಲ್ಲುತ್ತಾ, ಪರಿಸರ ಸಮತೋಲನವನ್ನು ಹಾಳುಗೆಡವುತ್ತಾ ತಾನು ಮಾತ್ರ ಬದುಕುವ ಮನುಷ್ಯನ ಸ್ವಾರ್ಥಲಾಲಸೆಗೂ ಕಥೆಯಲ್ಲಿ ಸೂಕ್ಷ್ಮವಾದ ತಾಕಲಾಟ ನಡೆದು, ಕೊನೆಗೆ ಹಣದ ಮಾರುಕಟ್ಟೆಯೇ ಮೇಲುಗೈ ಸಾಧಿಸುತ್ತದೆ. ಈ ಆಧುನಿಕ ಚೇಳಿನ ಔಷಧಿಗೆ ಚೇಳುಗಳಷ್ಟೇ ಅಲ್ಲದೆ, ಚೇಳಿನ ವೆಂಕಮ್ಮನೇ ಸತ್ತುಹೋಗುವುದು ನಮ್ಮ ಸಕಲಜೀವಿಗಳ ಸಹಬಾಳ್ವೆಯ ತತ್ತ್ವದ ಪ್ರಾಚೀನ ವೈದ್ಧ ಪದ್ಧತಿಯ ಮೇಲೆ ಜಾಗತಿಕ ಹಣದ ಮಾರುಕಟ್ಟೆಯ ಮೌಲ್ಯರಹಿತ ವೈದ್ಯಪದ್ಧತಿಯ ಕುರುಡು ಕಾಂಚಾಣದ ಕ್ರೂರ ನರ್ತನದ ವಿಜಯವನ್ನು ಸೂಚಿಸುವುದು ಮಹಾದುರಂತವೇ ಸರಿ.ಪತಿಯ ಸಂತಾನ ಬಯಕೆಯಿಂದ ಬಾಬಾ ಬಳಿಗೆ ಹೋಗುವ ವೆಂಕಮ್ಮ ತನ್ನ ಬದುಕೇ ಹಾಳಾಗಿ ಹೋದರೂ ಧೃತಿಗೆಡದೆ ಹೋದವಳು, ಆಧುನಿಕತೆಯ ರೂಪವಾಗಿ ಬಂದ ಚೇಳಿನ ಔಷಧಿಯನ್ನು ಎದುರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ನಮ್ಮ ಪ್ರಾಚೀನ ಕಾಲದ ಆಯುರ್ವೇದ ಪದ್ಧತಿಗೂ, ಅದರ ಮೌಲ್ಯಕ್ಕೂ, ಅದರ ಜ್ಞಾನಪರಂಪರೆಗೂ, ಆಧುನಿಕ ಕಾಲದ ಇಂಗ್ಲಿಷ್ ವೈದ್ಯಕ್ಕೂ, ಅದರ ಹಣದ ದಾಹಕ್ಕೂ, ಅದರ ಮೌಲ್ಯರಹಿತ ವರ್ತನೆಗೂ ಇಲ್ಲಿ ಮುಖಾಮುಖಿ ಏರ್ಪಡುತ್ತದೆ. ಬಂಡವಾಳಶಾಹಿಯ ಬೆಂಬಲ ಪಡೆದ ಮಾರುಕಟ್ಟೆ ಕೇಂದ್ರಿತ ಇಂಗ್ಲೀಷ್ ವೈದ್ಯ ಪದ್ಧತಿಯು ಆಯುರ್ವೇದ ಪದ್ಧತಿಯ ಮೇಲೆ ಅಧಿಕಾರ ಸ್ಥಾಪಿಸುವುದು ಇಂದಿನ ವ್ಯವಸ್ಥೆಯ ವ್ಯಂಗ್ಯವೇ ಆಗಿದೆ.

'ಕ್ಷಿತಿಜ ಹಿಡಿಯ ಹೊರಟವರು' ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಗಳಲ್ಲಿ ದುಡಿಯುವವರ ಒಳತುಮುಲಗಳನ್ನು ಹೇಳುವ ಕಥೆ.ಅಪಾರ ಬುದ್ಧಿವಂತೆ ಎನಿಸಿಕೊಂಡ, ಅಮೇರಿಕಾ, ಡೆನ್ಮಾರ್ಕ್, ಇಂಗ್ಲೆಂಡ್‌ಗಳಲ್ಲಿಯೂ ಸೇವೆಸಲ್ಲಿಸಿ ಸೈ ಎನಿಸಿಕೊಂಡ ಕ್ಷಿತಿಗೆ, ಇತ್ತೀಚೆಗೆ ಅದೇ ಉತ್ಸಾಹದಲ್ಲಿ ಕೆಲಸ ಮಾಡಲಾಗದ ಒತ್ತಡವಿದೆ. ದಿನಕ್ಕೆ 14–15 ತಾಸುಗಳು ಕೆಲಸ ಮಾಡುವವಳಾಗಿದ್ದ ಕ್ಷಿತಿಗೆ ಈಗ ಕೆಲಸದ ಸಮಯದಲ್ಲಿಯೇ ನಿದ್ದೆ ಆವರಿಸಿಕೊಳ್ಳುತ್ತಿದೆ. ಮುವತ್ತೈದರಲ್ಲಿ ಮುಪ್ಪಾಗಿಬಿಡುವ ಭಯ ಕಾಡುತ್ತಿದೆ. ಆದರೆ ರಾತ್ರಿ ಮಲಗುವ ಸಮಯದಲ್ಲಿ ಮರುದಿನ ಎದುರಿಗೆ ಬರುವ ಪ್ರಾಜೆಕ್ಟ್ ಶೆಡ್ಯೂಲ್‌ಗಳು, ಡೆಡ್‌ಲೈನ್‌ಗಳು, ಫೈಲುಗಳು ಎದುರಾಗಿ ನಿದ್ದೆ ಮಾಯವಾಗಿ ಬಿಡುತ್ತದೆ.ಲೈಂಗಿಕ ಕ್ರಿಯೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಲಾಗದ ಒತ್ತಡದಲ್ಲಿ ಕ್ಷಿತಿ–ಮೋಹನ ದಂಪತಿಗಳಿದ್ದಾರೆ. ಪ್ರತಿದಿನವೂ ಕಾಡುವ ಟ್ರಾಫಿಕ್‌ಜಾಮ್‌ನ ಸಮಸ್ಯೆ ಅವರನ್ನು ಹಿಂಡುತ್ತಿದೆ. ಅದಕ್ಕಾಗೆ ಈಗ ಬಂದ ಪ್ರಾಜೆಕ್ಟ್‌ನ ಪ್ರಪೋಜಲ್‌ನ್ನು ಮಾಡುವುದಕ್ಕಾಗದೆ ಕ್ಷಿತಿ ಅದನ್ನು ತನ್ನ ಮೇಲಾಧಿಕಾರಿಯಿಂದಲೇ ಮಾಡಿಸಬೇಕಾದ ಅವಲಂಬನೆಗೊಳಗಾಗುತ್ತಾಳೆ. ಹಣದ ಬೆನ್ನು ಹತ್ತಿ ಹೊರಟವರು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲಾಗದೆ ಪರಿತಪಿಸುವ ಚಿತ್ರಣ ಇಲ್ಲಿದೆ. ಬೆಂಗಳೂರಿನ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರ ಮಾನಸಿಕ ಒತ್ತಡಗಳನ್ನು ಕಥೆ ಸಮರ್ಥವಾಗಿ ಮುಂದಿಡುತ್ತದೆ.

ಅಪಾರ ಬುದ್ಧಿವಂತ ಎನಿಸಿಕೊಂಡ, ಕಳೆದ ವರ್ಷವೇ ಆ ಕಂಪನಿಯಲ್ಲಿ ಅತ್ಯುತ್ತಮ ಕೆಲಸಗಾರ ಎನ್ನುವ ಬಿರುದು ಪಡೆದುಕೊಂಡ ಯುವಕನೊಬ್ಬ, ಆಕಸ್ಮಿಕವಾಗಿ ಕೈ ಕಳೆದುಕೊಂಡು ಮೊಂಡನಾಗಬೇಕಾಗುತ್ತದೆ. ಅದರಿಂದ ಅವನ ಕೆಲಸದ ವೇಗ ಕಡಿಮೆಯಾಯಿತೆಂದು ತಿಳಿದ

ಕಂಪನಿ ಅವನನ್ನು ಕೆಲಸದಿಂದ ತೆಗೆದುಹಾಕಲು ಪ್ರಯತ್ನಿಸುತ್ತದೆ. ಅದನ್ನು ಗ್ರಹಿಸಿದ ಆ ಹುಡುಗ ಮತ್ತೊಂದು ಕಂಪನಿಗೆ ಅರ್ಜಿ ಸಲ್ಲಿಸುತ್ತಾನೆ. ಅದರ ಸಂದರ್ಶನದಲ್ಲಿ ಅವನ ಬುದ್ಧಿವಂತಿಕೆಯಿಂದ ಆಯ್ಕೆಯಾಗುತ್ತಾನೆ, ಕೆಲಸದ ಆರ್ಡರ್ ಕೂಡ ಸಿದ್ಧವಾಗಿರುತ್ತದೆ. ಆದರೆ ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ಆ ಹುಡುಗ ಅಂಗವಿಕಲನೆಂದು ಅರಿತು, ಅವನ ಕೆಲಸದ ಆರ್ಡರ್‌ನ್ನು ಹರಿದು ತಮ್ಮ ಕಂಪನಿಗೆ ಅಂಗವಿಕಲ ಅಭ್ಯರ್ಥಿಗಳು ಬೇಡ ಎನ್ನುತ್ತಾರೆ ಕಂಪನಿಯ ಅಧಿಕಾರಿಗಳು. ಆದರೆ ಸಾಫ್ಟ್‌ವೇರ್‌ನಲ್ಲಿ ಕೆಲಸ ಮಾಡಲು ತಲೆ ಬೇಕೇ ಹೊರತು ಕೈಗಳಲ್ಲ ಎನ್ನುವ ಆ ಯುವಕನ ಆತ್ಮವಿಶ್ವಾಸ ಗಮನ ಸೆಳೆಯುತ್ತದೆ.

ಇಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಅಮಾನವೀಯ ನಡವಳಿಕೆ ಎದ್ದು ತೋರುತ್ತದೆ. ಕಂಪನಿಗಳ ಲಾಭಕ್ಕಾಗಿ ಹಗಲು–ರಾತ್ರಿ ದುಡಿಯುವ ನೌಕರರು ಬೇಕೇ ಹೊರತು, ಅವರ ಕಷ್ಟಗಳಲ್ಲ. ಆಕಸ್ಮಿಕವಾಗಿ ಅವರ ಬದುಕಿನಲ್ಲಿ ಬಂದು ಅಪ್ಪಳಿಸುವ ಆಪತ್ತುಗಳಿಗೆ ಅವು ಕುರುಡಾಗಿ ವರ್ತಿಸುತ್ತವೆ. ಇಂಥ ಕಠಿಣ ಸಂದರ್ಭಗಳಲ್ಲಿ ಅವರಿಗೆ ನೆರವಾಗುವವರು ಯಾರು? ಲಾಭಕೋರತನದಿಂದ ವರ್ತಿಸುತ್ತಿರುವ ಕಂಪನಿಗಳು ತಮ್ಮ ಸಾಮಾಜಿಕ ಜವಬ್ದಾರಿಯಿಂದ ನುಣುಚಿಕೊಳ್ಳುತ್ತಿವೆ ಎನ್ನುವ ಕಡೆಗೆ ಕಥೆ ನಮ್ಮ ಗಮನ ಸೆಳೆಯುತ್ತದೆ.

'ಹಲೋ ಭಾರತಿ' ಆಧುನಿಕ ಕಾಲದಲ್ಲಿ ಎಲ್ಲವನ್ನೂ ವ್ಯಾಪಾರೀಕರಣ ಮಾಡಲಾಗುತ್ತದೆ ಎನ್ನುವುದನ್ನು ಉಸುರುವ ಕಥೆ. ಮೋಸ ಮಾಡಿಯೇ ವ್ಯಾಪಾರ ಮಾಡುವ, ವ್ಯಾಪಾರ ಮಾಡುವಾಗ ಪ್ರತಿಸ್ಪರ್ಧಿಗಳನ್ನೆಲ್ಲ ಶತ್ರುಗಳೆಂದು ಬಗೆಯುವ ನಿಲುವುಗಳನ್ನು ಕಥೆಗಾರರು ಟೀಕಿಸುತ್ತಲೇ ಹೋಗುತ್ತಾರೆ. ಪಾಶ್ಚಾತ್ಯ ಇಂಗ್ಲೆಂಡ್ ಮೊದಲಾದ ದೇಶಗಳ ಉದ್ಯೋಗಗಳನ್ನು ಭಾರತೀಯರೇ ಅಧಿಕವಾಗಿ ಪಡೆಯುತ್ತಿರುವುದನ್ನು, ಅದರಿಂದ ತಾವು ಉದ್ಯೋಗ ವಂಚಿತರಾಗಿ ಬದುಕುವುದೇ ಕಷ್ಟವಾಗಿದೆಯೆಂದು ಅಲ್ಲಿನ ಬಾರ್ಬರ ಆಡುವ "ಯು ಬ್ಲಡಿ ಇಂಡಿಯನ್ಸ್... ನಮ್ಮ ದೇಶ ಬಿಟ್ಟು ತೊಲಗಿ... ಜುಜುಬಿ ಕೂಲಿಗೆ ಕೆಲಸ ಮಾಡಿ ನಮ್ಮ ಅನ್ನ ಕಿತ್ತುಗೊಳ್ಳಬೇಡಿ... ನಮ್ಮ ಮಕ್ಕಳನ್ನು ಉಪವಾಸ ಕೆಡವಬೇಡಿ" ಎನ್ನುವ ಮಾತೇ ಸ್ಪಷ್ಟವಾಗಿ ಸೂಚಿಸುತ್ತದೆ. ಭಾರತೀಯರು ಹೊರಗುತ್ತಿಗೆ ಪಡೆಯುವುದರಲ್ಲಿ ಜಗತ್ತಿನೊಂದಿಗೆ ಪೈಪೋಟಿ ಮಾಡಿ ಅದರಲ್ಲಿ ಮೇಲುಗೈ ಸಾಧಿಸುತ್ತಿದ್ದಾರೆ. ಹಾಗಾಗಿ ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳಿರುವ ಯಾವ ದೇಶಗಳಲ್ಲಿ ನೋಡಿದರೂ ಭಾರತೀಯರೇ ಅಧಿಕವಾಗಿ ಕಾಣುತ್ತಿದ್ದಾರೆ. ಇದು ಅಲ್ಲಿನ ಸ್ಥಳೀಯರ ಅನ್ನವನ್ನು ಕಿತ್ತುಕೊಳ್ಳುತ್ತಿದೆ ಎನ್ನುವುದನ್ನು ಒಂದೆಡೆ ತೋರಿಸಿದರೆ, ಭಾರತೀಯರು ತಮ್ಮ ಜ್ಞಾನದ ಮೂಲಕ ವಿಶ್ವದಾದ್ಯಂತ ವಿಸ್ತರಿಸಿಕೊಳ್ಳುತ್ತಿದ್ದಾರೆ ಎನ್ನುವುದನ್ನೂ ಸೂಚಿಸುತ್ತದೆ. ಸೂರ್ಯಮುಳುಗದ ರಾಷ್ಟ್ರವಾಗಿ ಮೆರೆದ ರಾಷ್ಟ್ರದ ಸ್ಥಾನದಲ್ಲಿ ಭಾರತ ಸ್ಥಾಪನೆಗೊಳ್ಳುತ್ತಿರುವುದರ ಸಂಕೇತವಾಗಿಯೂ ಇದು ಕಾಣುತ್ತದೆ.

ಸೆಕ್ಸ್ ಮಾರಾಟಕ್ಕೆ ಬರಗಾಲವಿಲ್ಲವೆಂದು ಪಾಶ್ಚಾತ್ಯ ದೇಶಗಳಲ್ಲಿ ಫೋನ್‌ಸೆಕ್ಸ್ ಅಧಿಕವಾಗುತ್ತಿದೆಯೆಂದು, ಅದಕ್ಕಾಗಿ ಭಾರತೀಯ ಕಾಲ್‌ಸೆಂಟರ್‌ಗಳು ಕಡಿಮೆ ಹಣಕ್ಕೆ ಈ ಕೆಲಸ ನಿರ್ವಹಿಸಬೇಕೆಂದು, ಸಂಬಂಧಗಳನ್ನು ವ್ಯಾಪಾರೀಕರಣಕ್ಕೊಳಗು ಮಾಡಿ ಲಾಭ–ನಷ್ಟದ ಮಾತುಗಳನ್ನೇ ಆಡುತ್ತಾರೆ. ಇಲ್ಲಿ ಉದ್ಯೋಗ, ಹಣ ಮುಖ್ಯವಾಗುತ್ತದೆಯೇ ಹೊರತು ಅದರ ಮೌಲ್ಯಗಳಲ್ಲ. ಇಂದು ಪ್ರತಿಯೊಂದೂ ವ್ಯಾಪಾರೀಕರಣಗೊಳ್ಳುತ್ತಿದೆ, ಸಂಬಂಧಗಳೂ ಕೂಡ ಎನ್ನುವುದರ ಕಡೆಗೆ ಕಥೆಗಾರರು ನಮ್ಮ ಗಮನ ಸೆಳೆಯುತ್ತಾರೆ.

'ಗುಳೆ' ಮನುಷ್ಯ ಮೌಲ್ಯಗಳನ್ನು ಬಿಟ್ಟು ಹಣದಾಸೆಯ ಬೆನ್ನುಹತ್ತಿ ಹೊರಟದ್ದನ್ನು ಹೇಳುವ ಕಥೆ. ಮಾಹಿತಿ ತಂತ್ರಜ್ಞಾನ ಯುಗ ಆರಂಭವಾದ ಮೇಲೆ ಸಾಫ್ಟ್‌ವೇರ್

ಇಂಜಿನೀಯರ್‌ಗಳ ಬೇಡಿಕೆ ಅಧಿಕವಾಯಿತು. ಅದರ ಪರಿಣಾಮ ಅವರ ಸಂಬಳ ಗಗನಕ್ಕೆ ಮುಟ್ಟಿದ್ದು, ಒಂದು ಕಡೆ ನೆಲೆ ನಿಲ್ಲದೆ ಅಧಿಕ ಸಂಬಳ ಕೊಡುವ ಕಂಪನಿಗೆ ವಲಸೆ ಹೋಗುವ ಮೌಲ್ಯರಹಿತ ವ್ಯವಸ್ಥೆ ರೂಢಿಯಾಗಿರುವುದನ್ನು ಕತೆಗಾರರು ತಿಳಿಸುತ್ತಾರೆ. ಅದರ ಜೊತೆಗೆ ಕೌಶಲ್ಯಗಳಿಲ್ಲದಿದ್ದರೂ ಈ ಅಧಿಕ ಸಂಬಳ ಕೊಡುವ ಕೆಲಸವೇ ಬೇಕೆಂದು ದುಂಬಾಲು ಬೀಳುವ ಯುವಪೀಳಿಗೆ ಸೃಷ್ಟಿಯಾದುದನ್ನು ಕತೆ ಹೇಳುತ್ತದೆ. ಆಧುನಿಕ ಕಾಲದ ಮನುಷ್ಯನ ಹಣದ ಆಸೆಯಲ್ಲಿ ಸಂಬಂಧಗಳು ಕೊಚ್ಚಿ ಹೋಗುತ್ತಿರುವುದರ ಕಡೆಗೆ ಕತೆ ನಮ್ಮ ಗಮನ ಸೆಳೆಯುತ್ತದೆ. ಎಲ್ಲಕ್ಕೂ ಒಂದು ಅಂತ್ಯ ಇರುವಂತೆ, ಜಗತ್ತಿನಾದ್ಯಂತ ಆರ್ಥಿಕ ಹಿಂಜರಿಕೆ ಸಂಭವಿಸಿ ಎಷ್ಟೋ ಜನ ಉದ್ಯೋಗ ಕಳೆದುಕೊಂಡು ಬೀದಿಪಾಲಾಗುವ, ಬದುಕಿಗಾಗಿ ಪರದಾಡಬೇಕಾದ ಪರಿಸ್ಥಿತಿಯನ್ನು ಎದುರಿಸುವ ಸಂಗತಿಯನ್ನು ಕತೆ ನುಡಿಯುತ್ತದೆ.

ಮನೀಷೆ ಕಥಾಸಂಕಲನದ 'ಹುಲಿಗೆವ್ವ' ತಳವರ್ಗದ ಕುರುಡ ದಾಸಪ್ಪನ ಮಗಳು ಹುಲಿಗೆವ್ವ ತನ್ನ ಬದುಕಿನಲ್ಲಿ ಎದುರಾದ ಎಲ್ಲ ಬಗೆಯ ಕಷ್ಟಗಳನ್ನು ಎದುರಿಸಿ ಮಲ್ಟಿನ್ಯಾಷನಲ್ ಕಂಪನಿಯ ಮೇಲ್ಮಟ್ಟದ ಹುದ್ದೆಯನ್ನು ಅಲಂಕರಿಸಿರುವುದನ್ನು ಹೇಳುವ ಕಥೆ. ಅಪ್ಪನೊಂದಿಗೆ ಹಾಡುತ್ತಾ ಭಿಕ್ಷೆ ಬೇಡುತ್ತಾ, ಆ ಕಷ್ಟದಲ್ಲೇ ಓದುತ್ತಾ, ಅಪ್ಪ ಸತ್ತಾಗ ದಿಕ್ಕಿಲ್ಲದೆ ಸಂಡೂರಿನಿಂದ ಮುಂಬೈಗೆ ಹೋಗಿ ಮೈಮಾರಿಕೊಂಡೂ ವಿದ್ಯೆ ಕಲಿತು ಕೆಲಸ ಪಡೆದು ಹಂತಹಂತವಾಗಿ ಮೇಲೇರುತ್ತಾಳೆ ಹುಲಿಗೆವ್ವ. ಈಗ ಉನ್ನತ ಸ್ಥಾನದಲ್ಲಿದ್ದರೂ ತನ್ನ ಹಿಂದಿನ ಬದುಕನ್ನು, ತನ್ನ ಊರವರನ್ನೂ, ತನ್ನ ಹೆಸರನ್ನೂ ಮರೆಯದ ನೆಲದ ಪ್ರೀತಿಯನ್ನು ತೋರುವುದು ವಿಶೇಷ ಎನಿಸುತ್ತದೆ.

ಯುಗಾದಿ ಕಥಾಸಂಕಲನದ 'ಯುಗಾದಿ' ಗೋಪಣ್ಣ ಮಾಸ್ತರರ ಬದುಕಿನ ಸುತ್ತ ನೇಯ್ದ ಕಥೆ. ಬಳ್ಳಾರಿಯ ಹಳ್ಳಿಯೊಂದರಲ್ಲಿ 40 ವರ್ಷಗಳ ಕಾಲ ಕನ್ನಡ ಮಾಸ್ತರನಾಗಿ ಸೇವೆಸಲ್ಲಿಸಿ, ಸಾಫ್ಟ್‌ವೇರ್ ಎಂಜಿನಿಯರ್ ಮಗನ ಸಲುವಾಗಿ ಬೆಂಗಳೂರಿಗೆ ಬಂದು ಅಲ್ಲಿ ಎದುರಿಸುವ ಅನಾಥಪ್ರಜ್ಞೆಯನ್ನು ಕಥೆ ಬಿಚ್ಚಿಡುತ್ತದೆ. ತಾವು ಅನುಸರಿಸುವ ಸಂಪ್ರದಾಯಕ್ಕೂ, ಮಗ ಸ್ವೀಕರಿಸಿರುವ ಆಧುನಿಕತೆಗೂ, ತಾನು ಮಗನಿಗಾಗಿ ಹುಡುಕಿಕೊಡುವ ಸರಕಾರಿ ಕೆಲಸಕ್ಕೂ, ಮಗನೇ ಹುಡುಕಿಕೊಳ್ಳುವ ಮಲ್ಟಿನ್ಯಾಷನಲ್ ಕಂಪನಿಯ ಉದ್ಯೋಗಕ್ಕೂ, ತಾನು ಜೀವಮಾನವಿಡೀ ದುಡಿದು ನಿವೃತ್ತಿಯ ಕೊನೆಗಾಲದಲ್ಲಿ ಸಾಲ ಮಾಡಿ ಕಷ್ಟಪಟ್ಟು ಮನೆ ಕಟ್ಟುವುದಕ್ಕೂ, ಲಕ್ಷಗಟ್ಟಲೆ ಸಂಪಾದಿಸುವ ಮಗ ವೃತ್ತಿಯ ಆರಂಭದಲ್ಲೇ ಅಳುಕಿಲ್ಲದೆ ಮನೆ ಖರೀದಿಸುವುದಕ್ಕೂ, ಸಾಲ ಮಾಡಲು ತಾವು ಭಯ ಪಡುವುದಕ್ಕೂ ಮಗ ಸಾಲದ ಮೂಲಕವೇ ಎಲ್ಲ ಸಾಮಾನುಗಳನ್ನು ಮನೆಯ ಒಳಗೆ ತಂದಿರಿಸಿಕೊಳ್ಳುವುದಕ್ಕೂ, ಜೀವನಕ್ಕೋಸ್ಕರ ತಾನು ಮನೆ ಕಟ್ಟುವುದಕ್ಕೂ, ಲಾಭದ ಆಸೆಯಿಂದ ಮನೆ ಖರೀದಿಸುವ–ಮಾರುವ ಮಗನಿಗೂ, ತಾನು ನೋಡುವ ಕನ್ನಡ ಕಾರ್ಯಕ್ರಮಕ್ಕೂ, ಮಗ ನೋಡುವ ಇಂಗ್ಲೀಷ್ ಕಾರ್ಯಕ್ರಮಕ್ಕೂ, ತನ್ನೂರಿನ ಕನ್ನಡ ಶಾಲೆಗೂ ಬೆಂಗಳೂರಿನ ಕಾನ್ವೆಂಟ್‌ಗೂ ಹೋಲಿಸಿಕೊಳ್ಳುತ್ತಾ ಹೋಗುತ್ತಾರೆ ಗೋಪಣ್ಣ ಮಾಸ್ತರು.

ನಿವೃತ್ತಿಯ ಅನಂತರ ಎದುರಾದ ತನ್ನ ಒಂಟಿತನವನ್ನು ಕಳೆದುಕೊಳ್ಳಲು ಬೆಂಗಳೂರಿನಲ್ಲಿ ಕೆಲಸ ಹುಡುಕಲು ಪ್ರಯತ್ನಿಸಿ ಸೋತು, ಮಕ್ಕಳಿಗೆ ರಾಮಾಯಣ–ಮಹಾಭಾರತ ಕಥೆ ಹೇಳಲು ಪ್ರಯತ್ನಿಸಿ ಸೋತು ಜನರಿಂದ ಔಟ್‌ಡೇಟೆಡ್ ಆದ ಓಲ್ಡ್‌ಮ್ಯಾನ್ ಆಗಿ ಹೊರದೂಡಲ್ಪಟ್ಟು ಮನಃಶಾಂತಿಗಾಗಿ ರಾಯರ ಮಠಕ್ಕೆ ಹೋದರೆ ಅಲ್ಲೂ ದೇವಸ್ಥಾನಗಳೂ ವ್ಯವಹಾರದ ಕೇಂದ್ರಗಳಾಗಿ ಬದಲಾಗಿರುವುದು ಗೋಪಣ್ಣ ಮಾಸ್ತರನ್ನು ದಿಗಿಲುಗೊಳಿಸುತ್ತದೆ. ಹೊರಗಿನವರಿಗೆ ಲಕ್ಷಗಟ್ಟಲೆ ದುಡಿಯುವ ಮಗ–ಸೊಸೆ, ಫಳಫಳ ಹೊಳೆವ ಕಾರು, ಭವ್ಯ

ಬಂಗಲೆ–ಎಲ್ಲವೂ ಗೋಪಣ್ಣ ಮಾಸ್ತರು ಸ್ವರ್ಗದಲ್ಲಿ ಇರುವಂತೆ ತೋರಿದರೆ, ಅವರಿಗೆ ಎಲ್ಲರನ್ನೂ ಕಳಕೊಂಡು ತಾನೆಲ್ಲೋ ಅನಾಥನಾಗಿ ಬದುಕುತ್ತಿರುವ ಭಾವ ಕಾಡುತ್ತದೆ.

"ಮಲ್ಟಿ ನ್ಯಾಷನಲ್ ಕಂಪನಿನಾಗೆ ಕೆಲಸ ಮಾಡೋದು ಅಂದರೆ ಏನಂತ ಅಂದುಕೊಂಡಿ ನೀನು? ಕನ್ನಡ ಸಾಲಿ ಮಾಸ್ತರ ಕೆಲಸ ಅಂತ ಮಾಡೀ ಏನು?" ಎಂದು ಮಗ ಪ್ರಹ್ಲಾದನೇ ಆಡುವ ಮಾತು ಗೋಪಣ್ಣ ಮಾಸ್ತರರನ್ನು ಪಾತಾಳಕ್ಕೆ ದೂಡಿದಂತಾಗುತ್ತದೆ. ಆದರೆ ಕಥೆಯ ಕೊನೆಗೆ ಪ್ರಹ್ಲಾದನ ಮಡದಿ ರೇಖಾಳಿಗೆ ಪ್ರಸವದ ಸಮಯ ಬಂದಾಗ ಖಾಸಗಿ ಆಸ್ಪತ್ರೆಗಳು ಯಾವುವೂ ಸಿಗದೆ, ಸರ್ಕಾರಿ ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸಬೇಕಾದ ಸಂದರ್ಭ ಬಂದಾಗ, ಇದೇ ಸರ್ಕಾರಿ ಶಾಲೆಯಲ್ಲಿ ಗೋಪಣ್ಣ ಮಾಸ್ತರರ ಶಿಷ್ಯೆಯಾಗಿ ಸಾಧಾರಣ ಕುಟುಂಬದಲ್ಲಿ ಓದಿ ಸಾಮಾನ್ಯ ನರ್ಸ್ ಆಗಿರುವ ರಾಧಾಳೇ ನೆರವಿಗೆ ಬರುವುದು ಮುಖ್ಯವೆನಿಸುತ್ತದೆ. ಇಂಗ್ಲೀಷ್ ಕಲಿತು ಎಂಜಿನಿಯರಿಂಗ್ ಓದಿ ಅಮೇರಿಕಾದ ಕಂಪನಿಯಲ್ಲಿ ಕೆಲಸ ಗಿಟ್ಟಿಸಿ ವಿಮಾನದಲ್ಲೇ ಹಾರಾಡಿ ಎಲ್ಲವನ್ನೂ ಹಣದ ಮೂಲಕವೇ ಅಳೆಯುವ ಮಗ ಪ್ರಹ್ಲಾದನಿಗೂ, ಕನ್ನಡ ಶಾಲೆಯಲ್ಲಿ ಓದಿ ಕಷ್ಟಕಾಲದಲ್ಲಿ ಕೈಹಿಡಿದು ಮಾನವೀಯತೆಯನ್ನು ಮೆರೆಯುವ ಶಿಷ್ಯೆ ರಾಧಾಳಿಗೂ ಇರುವ ವ್ಯಾತ್ಯಾಸ ಅಪಾರವೆನಿಸುತ್ತದೆ, ಗೋಪಣ್ಣ ಮಾಸ್ತರರಿಗೆ. ಸಾಂಪ್ರದಾಯಿಕತೆ–ಆಧುನಿಕತೆ, ಕನ್ನಡ–ಇಂಗ್ಲೀಷ್, ವ್ಯವಹಾರ–ಮಾನವೀಯತೆ ನಡುವೆ ನಡೆಯುವ ಸಂಘರ್ಷವನ್ನು ಕಥೆ ಸೊಗಸಾಗಿ ಕಟ್ಟಿಕೊಡುತ್ತದೆ.

'ಹೆಡ್ ಹಂಟರ್' ಮಲ್ಟಿನ್ಯಾಷನಲ್ ಕಂಪನಿಗಳ ಒಳಮರ್ಮವನ್ನು ನಿವೇದಿಸುವ ಕಥೆ. ರಾಜು ತನ್ನದಲ್ಲದ ಕ್ಷೇತ್ರದ ಪ್ರಾಜೆಕ್ಟ್ ಒಂದನ್ನು ತೆಗೆದುಕೊಂಡು ಅದರಲ್ಲಿ ಯಶಸ್ಸು ಸಾಧಿಸದೆ, ತನ್ನ ಬಾಸಾದ ಸಂದೀಪನ ಆದೇಶದ ಮೇರೆಗೆ ಆ ಪ್ರಾಜೆಕ್ಟ್‌ನ ಎಲ್ಲರನ್ನೂ ಕಂಪನಿಯ ಕೆಲಸದಿಂದ ಬಿಡಿಸಬೇಕಾದ ಅನಿವಾರ್ಯತೆಗೆ ಒಳಗಾಗುತ್ತಾನೆ. ಅದರಲ್ಲಿ ಶಶಿಕಲಾಳನ್ನು ಕೆಲಸದಿಂದ ಹೊರ ಕಳುಹಿಸಬೇಕಾದಾಗ ಕಥೆಗೆ ಹೊಸತಿರುವು ಬಂದಂತೆ ಅವಳು ಹೆಡ್ ಹಂಟರ್ ಆಗಿ ಕೆಲಸ ಮಾಡುತ್ತಿರುವುದನ್ನು ತಿಳಿದು ಆಶ್ಚರ್ಯಗೊಳ್ಳುತ್ತಾನೆ. ಅಂದರೆ ಶಶಿಕಲಾ ಅಮೇರಿಕಾದ ಕಂಪನಿಯೊಂದಕ್ಕೆ ತಾನು ಕೆಲಸ ಮಾಡುತ್ತಿರುವ ಕಂಪನಿಯ ಅತ್ಯುತ್ತಮ ತಂತ್ರಜ್ಞರನ್ನು ಯಾರಿಗೂ ಗೊತ್ತಾಗದಂತೆ ಕಳುಹಿಸುತ್ತಿರುತ್ತಾಳೆ, ಆ ಮೂಲಕವೇ ಹೆಡ್ ಹಂಟರಾಗಿ ಹಣ ಸಂಪಾದಿಸುತ್ತಿರುತ್ತಾಳೆ. ಕಥೆಯ ಕೊನೆಗೆ ರಾಜುವೇ ಶಶಿಕಲಾಳ ಮೋಹಜಾಲದಲ್ಲಿ ಬೀಳುವುದು, ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇರುವ ಹಣದಾಸೆಯ, ಮೌಲ್ಯರಹಿತ, ನಂಬಿಕೆದ್ರೋಹಿ ನಡವಳಿಕೆಯನ್ನು ಬಿಂಬಿಸುತ್ತದೆ.

'ಕಣ್ತೆರೆದು ನೋಡಲ್ಲಿ, ಗೆದ್ದಲು ಮರ ಕೆಡವಲಿದೆ' ಕಥೆಯು ಕಂಪ್ಯೂಟರ್ ಯುಗದಲ್ಲಿನ ಸಾಫ್ಟ್‌ವೇರ್ ಇಂಜಿನಿಯರ್‌ಗಳ ಐಷಾರಾಮಿ ಬದುಕಿಗೆ ಮಾರುಹೋಗಿ ಅವರೊಂದಿಗೆ ಹೋಲಿಸಿಕೊಂಡು ತಮ್ಮ ಬದುಕನ್ನು ಹಾಳು ಮಾಡಿಕೊಳ್ಳುವವರ ಯಾತನಾಮಯ ಬದುಕನ್ನು ಹೇಳುತ್ತದೆ. ರಾಜು ಸಾಫ್ಟ್‌ವೇರ್ ಇಂಜಿನಿಯರಾಗಿ ಅಮೇರಿಕಾದ ಕಂಪನಿಯಲ್ಲಿ ದುಡಿಯುತ್ತಾ, ತಾನು ಪ್ರೀತಿಸಿದ ಸುಮಳನ್ನೇ ಮದುವೆಯಾಗಿ ಹೋದಾಗ, ಮೋಹನ ಅವನಂತೆಯೇ ತಾನೂ ಆಗಬೇಕೆಂದು ಹಟತೊಡುತ್ತಾನೆ. ತಾನು ಸಿವಿಲ್ ಇಂಜಿನಿಯರಿಂಗ್ ಓದಿ ಬಳ್ಳಾರಿಯಲ್ಲೊಂದು ಉದ್ಯೋಗವನ್ನು ಪಡೆದಿದ್ದರೂ ಅದನ್ನು ಬಿಟ್ಟು, ಬೆಂಗಳೂರಿಗೆ ಬಂದು ಸಾಫ್ಟ್‌ವೇರ್ ಕೋರ್ಸಿಗೆ ಸೇರಿ ಕಷ್ಟಪಟ್ಟು ಕಲಿತು ಕೆಲಸ ಪಡೆಯಲು ಅಲೆದಾಡುವ ಮೋಹನನ ಬದುಕನ್ನು ಕಥೆ ಹೇಳುತ್ತದೆ. ಕೆಲಸ ಎಷ್ಟು ಹುಡುಕಿದರೂ ಸಿಗದೆ, ಕೊನೆಗೊಮ್ಮೆ ರಾಜುವಿನ ಆಫೀಸಿನಲ್ಲೇ ಸಂದರ್ಶನದ ದಿನ ನಿರ್ಧಾರವಾದಾಗ, ಆ ರಾತ್ರಿ ರಾಜುವನ್ನು

ಕೊಂದು, ಅವನ ಹೆಂಡತಿಯನ್ನು ಭೋಗಿಸುವುದನ್ನು ಕನಸಿನಲ್ಲಿ ಕಂಡೇ ಹೆದರಿ ಹೋಗುವ ಮೋಹನನ ಮೂಲಕ ಕಥೆಯು ಹಣದಾಸೆಗೆ, ಐಷಾರಾಮಿ ಬದುಕಿಗೆ ಮಾರುಹೋಗಿ ತಮ್ಮ ಬದುಕನ್ನೇ ಕಳೆದುಕೊಳ್ಳುತ್ತಿರುವ ಯುವಪೀಳಿಗೆಯ ಸ್ವಭಾವವನ್ನು ಬಿಚ್ಚಿಡುತ್ತದೆ. ಇರುವ ಉದ್ಯೋಗದಲ್ಲೇ ಸಂತೃಪ್ತಿ ಪಡೆದು ಉನ್ನತಿಯನ್ನು ಪಡೆಯದೆ, ಮತ್ತೊಂದನ್ನು ಬಯಸಿ ಬೇಯುವ ಮೋಹನ 'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದಯ ಬಯಸುವವನು ವೀರನೂ ಅಲ್ಲ ಧೀರನೂ ಅಲ್ಲ' ಎನ್ನುವ ಅಲ್ಲಮನ ಮಾತಿನಂತಾಗುತ್ತಾನೆ. ಇಂದಿನ ಯುವಜನತೆ ಮೌಲ್ಯರಹಿತವಾಗಿ ಹಣದ ಹಿಂದೆ ನಾಗಾಲೋಟದಿಂದ ಓಡುತ್ತಿದೆ ಎನ್ನುತ್ತದೆ ಕಥೆ. ಮನಸ್ಸಿನಲ್ಲಿ ಮೂಡುವ ಈ ಮೋಹದ ಗೆದ್ದಲು ಹುಳುವೇ ಇಡೀ ಬದುಕಿನ ಸುಂದರ ಮರವನ್ನೂ ನಾಶಮಾಡಿ ಬಿಡಬಹುದು ಎಂದು ಕಥೆ ಎಚ್ಚರಿಸುತ್ತದೆ.

'ನಮ್ಮ ನಮ್ಮೊಳಗೆ' ಭಾರತದ ಬಹುಸಂಸ್ಕೃತಿಯನ್ನು ಬಿಚ್ಚಿಡುವ ಕಥೆ. ಭಯೋತ್ಪಾದನೆ ಕುರಿತು ನಮ್ಮ ಜನರಲ್ಲಿರುವ ಮನೋಭಾವವನ್ನು ಬದಲು ಮಾಡಲು ಕಥೆ ಒತ್ತಾಯಿಸುತ್ತದೆ. ಭಯೋತ್ಪಾದನೆ ಯಾವುದೋ ಒಂದು ಸ್ಥಳಕ್ಕೆ ಮೀಸಲಾದ ಸಂಗತಿಯಲ್ಲ, ಆ ಪ್ರದೇಶದಿಂದ ಬಂದವರೆಲ್ಲರೂ ಭಯೋತ್ಪಾದಕರಾಗಿರಬೇಕಿಲ್ಲ, ಅವರೂ ಕೂಡ ಎಲ್ಲರಂತೆ ಸಾಮಾನ್ಯ ಮನುಷ್ಯರು ಎಂದು ಹೇಳುತ್ತಾ, ಇದೇ ಬಗೆಯಲ್ಲಿರಬಹುದಾದ ದೇಶದೊಳಗಿರುವ ಪ್ರಾದೇಶಿಕ ಭಿನ್ನತೆಗಳನ್ನು ತುಂಬಿ ಪ್ರತ್ಯೇಕಿಸುವ ಸಂಗತಿಗಳು ರಾಷ್ಟ್ರಕ್ಕೆ ಅಪಾಯಕಾರಿ ಎನ್ನುವುದನ್ನೂ ಕಥೆ ತಿಳಿಸುವ ಪ್ರಯತ್ನ ಮಾಡುತ್ತದೆ. ಸಾಫ್ಟ್‌ವೇರ್ ಇಂಜಿನಿಯರಾಗಿ ಆಯ್ಕೆಯಾದ ಐವರು ಸ್ನೇಹಿತರ ಗುಂಪು ಕಲ್ಕತ್ತಾದಲ್ಲಿ ಬಂದು ಪಡೆದ ಅನುಭವಗಳನ್ನು ಇದು ಹೇಳುತ್ತದೆ. ತಮಿಳುನಾಡು, ಆಂಧ್ರ, ಕೇರಳ, ಕಾಶ್ಮೀರ, ಕರ್ನಾಟಕ ಈ ಐದು ರಾಜ್ಯಗಳಿಗೆ ಸೇರಿದವರು ಅವರು. ಕಲ್ಕತ್ತಾದಲ್ಲಿ ಉದ್ಯೋಗ ಸಿಕ್ಕ ಮೇಲೆ ಬಾಡಿಗೆ ಮನೆಗಾಗಿ ಹುಡುಕಾಟ ಮಾಡಿದ ಕಷ್ಟ, ಮನೆ ಸಿಕ್ಕ ಮೇಲೆ ಮನೆಯೊಡೆಯ ಕಾಶ್ಮೀರದವನೆಂದು, ಭಯೋತ್ಪಾದಕನೆಂದು ವಿಜಯಭಟ್‌ನನ್ನು ಕಾಡಿದ ಕಥೆಯನ್ನು ಹೇಳುತ್ತದೆ.

ಅನಂತರ ನಿಜಸಂಗತಿ ತಿಳಿದ ಮೇಲೆ ಮನೆಯೊಡೆಯನ ಸ್ವಭಾವದಲ್ಲಾದ ಬದಲಾವಣೆ, ಅವನ ಉಪಚಾರ, ಮಾನವೀಯತೆಯನ್ನೂ ಶ್ರುತಪಡಿಸುತ್ತದೆ. ಕಾಶ್ಮೀರದವನಾದರೂ ಕೂಡ ವಿಜಯ್ ಭಟ್‌ನ ಕುಟುಂಬ ಭಯೋತ್ಪಾದಕರ ದಾಳಿಗೊಳಗಾಗಿ ಮನೆ–ಮಠವನ್ನೆಲ್ಲ ಕಳೆದುಕೊಂಡು ಬೀದಿಪಾಲಾಗಬೇಕಾಗಿ ಬಂದುದು, ಅದಕ್ಕಾಗೇ ತಾನು ಈ ಸಾಫ್ಟ್‌ವೇರ್ ಕೆಲಸ ಹುಡುಕಿ ಈ ಕಡೆ ಬಂದೆ ಎಂದು ಆತ ಹೇಳುವ ಮಾತುಗಳು ಮುಖ್ಯವಾಗುತ್ತವೆ. ಕಾಶ್ಮೀರ ಎಂದಾಕ್ಷಣ ಭಯೋತ್ಪಾದಕರು ಮಾತ್ರ ಇರುವ ತಾಣ ಅಲ್ಲ ಎನ್ನುವುದನ್ನು ಕಥೆ ತಿಳಿಸುವ ಪ್ರಯತ್ನ ಮಾಡುತ್ತದೆ. ಅಲ್ಲೂ ಕೂಡ ದೇಶದೆಲ್ಲೆಡೆ ಇರುವಂತೆ ಸಾಮಾನ್ಯ ಜನರೂ ಇರುತ್ತಾರೆ ಎನ್ನುವುದನ್ನು ಸೊಗಸಾಗಿ ಕಟ್ಟಿಕೊಡುತ್ತದೆ.

ಅದರ ಜೊತೆಗೆ ಈ ಐವರು ಸ್ನೇಹಿತರು ಈಶಾನ್ಯ ಭಾರತದವರ ಹಾಸ್ಟೆಲ್‌ನಲ್ಲಿ ಆರಂಭದಲ್ಲಿ ಉಳಿಯಬೇಕಾಗಿ ಬಂದಾಗ, ಅವರು ಅನುಭವಿಸುವ ಕಷ್ಟವನ್ನೂ, ಕಥೆಯ ಕೊನೆಗೆ ಆ ಹಾಸ್ಟೆಲ್‌ನಲ್ಲಿದ್ದ ವಿದ್ಯಾರ್ಥಿಯೇ ಸಂದರ್ಶನಕ್ಕೆ ಬಂದು, ಕೆಲಸ ಪಡೆದ ಮೇಲೆ ನೀವು ದಕ್ಷಿಣ ಭಾರತದವರು ನಮ್ಮ ಹಾಸ್ಟೆಲ್‌ಗೆ ಬಂದಾಗ ನಮ್ಮ ಗಡಿಯನ್ನು ಆಕ್ರಮಿಸಿದಂತಾಗಿ ತಾವು ಹಾಗೆ ಮಾಡಿದೆವೆಂದು ಈಗ ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಾನೆ. ಉತ್ತರಭಾರತ, ದಕ್ಷಿಣ ಭಾರತ, ಈಶಾನ್ಯ ಭಾರತ, ಕಾಶ್ಮೀರ ಎಂದೆಲ್ಲ ಇರುವ ಭಿನ್ನ–ಭೇದಗಳು ಭಾರತವನ್ನು ಕಾಡುತ್ತಿದೆಯೆಂದು, ಆದರೆ ವಿಶಾಲವಾಗಿ ನೋಡಿದಾಗ ನಾವೆಲ್ಲ ಮನುಷ್ಯರು ಎನ್ನುವ

ಭಾವನೆ ಮೂಡಿಬರಬೇಕು ಎನ್ನುವುದನ್ನು ಈ ಕಥೆ ತಿಳಿ ಹೇಳುತ್ತದೆ.

'ಅಡೆ ತಡೆಗೆ ಕಂಗೆಡದೆ ನಡೆ' ಕಥೆಯು ಮನೆಯಲ್ಲೇ ಕುಳಿತು ಕೆಲಸ ಮಾಡುವ ಹೊಸ ವಿಧಾನವು ಅಮೇರಿಕಾ ಮೊದಲಾದ ದೇಶಗಳಂತೆ ನಮ್ಮಲ್ಲಿಯೂ ಬಂದ ಬಗೆಯನ್ನು ತಿಳಿಸುತ್ತದೆ. ಸತ್ಯ ಮನಸ್ಸಿಗೊಪ್ಪದ ಕೆಲಸದಿಂದ ಮನಸ್ಸಿಗಿಷ್ಟವಾದ ಕೆಲಸಕ್ಕೆ ಬದಲಾಗುವುದು, ಆ ಹೊಸ ಕೆಲಸಕ್ಕೆ ಬೇಕಾದ ಕೌಶಲಗಳನ್ನು ಅತೀವ ಶ್ರದ್ಧೆಯಿಂದ ಕಲಿಯುವುದನ್ನು ಕಥೆ ಹೇಳುತ್ತದೆ. ಆದರೆ ಪ್ರಾಜೆಕ್ಟ್‌ನ ಮುಖ್ಯವಾದ ಸಮಯದಲ್ಲೇ ಸತ್ಯ ರಸ್ತೆ ಅಪಘಾತಕ್ಕೆ ಸಿಕ್ಕಿ ಆಸ್ಪತ್ರೆ ಸೇರುತ್ತಾನೆ. ಅವನ ಕೆಲಸ ಕಳೆದುಹೋಯಿತು, ಅವನನ್ನು ಕೆಲಸದಿಂದ ತೆಗೆಯುತ್ತಾರೆ ಎಂದು ಕಸ್ತೂರಿ ಹೇಳುವ ಸಮಯದಲ್ಲಿಯೇ, ಸತ್ಯನಿಗೆ ಬೆನ್ನೆಲುಬಾಗಿ ನಿಂತ ರಾಜು ಅವನಿಗೆ ಆಸ್ಪತ್ರೆಯಿಂದಲೇ ಕೆಲಸ ನಿರ್ವಹಿಸುವುದಕ್ಕೆ ಬೇಕಾದ ನೆರವು ಕೊಟ್ಟು, ಪ್ರಾಜೆಕ್ಟ್‌ನ್ನು ಯಶಸ್ವಿಯಾಗಿ ಮುಗಿಸಿ ಆ ವರ್ಷದ ಅತ್ಯುತ್ತಮ ಉದ್ಯೋಗಿ ಎನ್ನುವ ಹೆಸರು ಸತ್ಯನಿಗೆ ಬರಲು ನೆರವಾಗುತ್ತಾನೆ. ಬಹುರಾಷ್ಟ್ರೀಯ ಕಂಪನಿಗಳಲ್ಲಿ ಇರುವ ಉದ್ಯೋಗಿ ಸಂಬಂಧಿ ದ್ವೇಷವೂ, ಉದ್ಯೋಗಿ ಸಂಬಂಧಿ ಪ್ರೋತ್ಸಾಹವೂ ಎರಡೂ ಒಟ್ಟೊಟ್ಟಿಗೆ ಇರುತ್ತವೆ, ಕೊಲ್ಲುವವರು ಇರುವಂತೆ, ಕಾಯುವವರೂ ಇರುತ್ತಾರೆ ಎನ್ನುವುದನ್ನು ಈ ಕಥೆ ಹೇಳುತ್ತದೆ.

ವಿಷಮಭಿನ್ನರಾಶಿ ಕಥಾಸಂಕಲನದ 'ನಿಯಮಬಾಹಿರ' ಐಟಿ ಕಂಪನಿಗಳಲ್ಲಿ ನಡೆಯುವ ಅಂಕಪಟ್ಟಿಯ ಮೋಸಜಾಲವನ್ನು ಬಿಚ್ಚಿಡುವ ಕಥೆ. ಅಪಾರ ಬುದ್ಧಿವಂತರಾದರೂ ಹಣದಾಸೆಗೆ ಸಿಕ್ಕಿಬಿದ್ದ ಎಷ್ಟೋ ಯುವಜನರು ಅಡ್ಡದಾರಿ ತುಳಿದು ತಮ್ಮ ಬದುಕನ್ನೇ ನಾಶಮಾಡಿ ಕೊಳ್ಳುತ್ತಿದ್ದಾರೆ. ಐಟಿ ಕಂಪನಿಯಲ್ಲಿ ಒಳ್ಳೆಯ ಸ್ಥಾನದಲ್ಲಿದ್ದ ಕಥೆಯ ನಿರೂಪಕನಿದ್ದ ಐಟಿ ಕಂಪನಿಗೆ ಹೊಸದಾಗಿ ಸೇರಿಕೊಳ್ಳಲು ಬಂದ ವೆಂಕಯ್ಯ ಆಂಧ್ರಪ್ರದೇಶದ ರಾಜಮಂಡ್ರಿಯ ಹಳ್ಳಿಯೊಂದರ ಕಡುಬಡತನದ ಹಿನ್ನೆಲೆಯುಳ್ಳ ಉತ್ಸಾಹಿ ಯುವಕ.ವೆಂಕಯ್ಯ ಕುರಿಕಾಯುವ ಕುಟುಂಬದಿಂದ ಬಂದರೂ, ವಿದ್ಯೆ ಒಲಿದ ಕಾರಣದಿಂದ ಬೆಂಗಳೂರಿನಲ್ಲಿ ಉದ್ಯೋಗ ಸಂಪಾದಿಸಿಕೊಂಡಿದ್ದ.

ಇಂಜಿನಿಯರಿಂಗ್‌ನಲ್ಲಿ ಕಡಿಮೆ ಅಂಕಗಳನ್ನು ಪಡೆದಿದ್ದರೂ, ಅವನ ನಾಲ್ಕು ವರ್ಷಗಳ ಅನುಭವ, ಅವನ ಚಾಣಾಕ್ಷತೆಯನ್ನು ಕಣ್ಣಾರೆ ಕಂಡ ಕಂಪನಿಯ ಉನ್ನತಾಧಿಕಾರಿ ಅವನಿಗೆ ಕಂಪನಿಯ ನಿಯಮಗಳನ್ನು ಮೀರಿ ಕೆಲಸ ಕೊಡುತ್ತಾನೆ. ಕೆಲಸಕ್ಕೆ ಸೇರಿದ ಮೇಲೆ ಎಲ್ಲರೊಂದಿಗೂ ಸುಲಭವಾಗಿ ಬೆರೆತುಹೋದ ವೆಂಕಯ್ಯ ಕೆಲಸದಲ್ಲಿ ಅಪಾರ ಮೆಚ್ಚುಗೆ ಪಡೆಯುತ್ತಾನೆ. ಎತ್ನಿಕ್ ಡೇ ಮೊದಲಾದವುಗಳಲ್ಲಿ ವಿಶಿಷ್ಟವಾಗಿ ಕಂಡು ಎಲ್ಲರ ಪ್ರೀತಿಯನ್ನೂ ಕೊಳ್ಳೆ ಹೊಡೆಯುತ್ತಾನೆ. ಇಂಗ್ಲೀಷ್ ಅಷ್ಟು ಸೊಗಸಾಗಿ ಬಾರದಿದ್ದರೂ ತನ್ನ ಕೌಶಲಗಳಿಂದ ಎಲ್ಲ ಕೆಲಸಗಳನ್ನೂ ನೀರು ಕುಡಿದಷ್ಟು ಸುಲಭವಾಗಿ ಮಾಡುತ್ತಿರುತ್ತಾನೆ.

ಇಷ್ಟಾಗಿಯೂ ಅವನಿಗೆ ವಿದೇಶಕ್ಕೆ ಹೋಗಬೇಕೆನ್ನುವ ಹಂಬಲ ತುಂಬಿರುತ್ತದೆ. ಕಂಪನಿಯ ಉನ್ನತಾಧಿಕಾರಿಯನ್ನು ಕಾಡಿಬೇಡಿ ಇಂಗ್ಲೆಂಡ್‌ಗೆ ಕೆಲಸದ ಮೇಲೆ ಹೋಗುತ್ತಾನೆ. ಅಲ್ಲಿ ಕಂಪನಿಯಿಂದ, ಅಲ್ಲಿನ ಎಲ್ಲ ಗ್ರಾಹಕರಿಂದ ಮೆಚ್ಚುಗೆಯನ್ನು ಪಡೆಯುತ್ತಾನೆ. ಆರು ತಿಂಗಳಿಗೆ ಹೋಗಿದ್ದವನನ್ನು, ಅಲ್ಲಿನ ಗ್ರಾಹಕರ ಒತ್ತಾಯದ ಮೇರೆಗೆ ಎರಡು ವರ್ಷಗಳವರೆಗೆ ಅಲ್ಲಿಯೇ ಇರಿಸಿಕೊಳ್ಳಲು ತೀರ್ಮಾನಿಸುತ್ತಾರೆ. ಆದರೆ ತನಗೆ ಇಂಗ್ಲೆಂಡ್ ಸಾಕಾಗಿದೆ ತಾನು ಅಮೇರಿಕಕ್ಕೆ ಹೋಗಬೇಕೆಂದು ವೆಂಕಯ್ಯ ಕೇಳಿಕೊಳ್ಳುತ್ತಾನೆ. ನಿರೂಪಕ ಅದನ್ನು ನಿರಾಕರಿಸಿದಾಗ, ಅನ್ಯಮಾರ್ಗಕ್ಕಿಳಿದ ವೆಂಕಯ್ಯ ಮತ್ತೊಂದು ಕಂಪನಿಗೆ ಸೇರಿ ಅಲ್ಲಿಂದ ಅಮೇರಿಕಕ್ಕೆ ಹೋಗಲು ಸಂಚು ಹೂಡುತ್ತಾನೆ. ಅನೇಕ ತೆಲುಗು ಇಂಜಿನಿಯರುಗಳಂತೆ

ಅದಕ್ಕಾಗಿ ನಕಲಿ ಪದವಿ ಪ್ರಮಾಣ ಪತ್ರ ಕೊಟ್ಟು, ಅದು ವೀಸಾ ಪರಿಶೀಲನೆಯ ಸಂದರ್ಭದಲ್ಲಿ ಗೊತ್ತಾಗಿ ವೆಂಕಯ್ಯ ಜೈಲು ಪಾಲಾಗುತ್ತಾನೆ.

ಬದುಕಿಗೊಂದು ನೀತಿ, ನಿಯಮಗಳು ಇರಬೇಕು. ಅವು ಕಬ್ಬಿಣದ ಕಡಲೆಯಂತೆ ಇರಬೇಕೆಂದಲ್ಲ. ಅವು ಬದುಕಿಗೆ ಪೂರಕವಾಗುವಂತಿರಬೇಕು. ಎಲ್ಲರ ಒಳಿತಿಗಾಗಿ ಕೆಲವೊಮ್ಮೆ ನಿಯಮಗಳಲ್ಲಿ ಸಡಿಲಿಕೆಯನ್ನು ಮಾಡಬಹುದೇ ಹೊರತು, ನಿಯಮವನ್ನೇ ಗಾಳಿಗೆ ತೂರಲು ಸಾಧ್ಯವಾಗುವುದಿಲ್ಲ. ನಿಯಮಗಳನ್ನು ಮುರಿಯುವುದರಲ್ಲಿ ಸದಾ ಆಸಕ್ತನಾಗಿದ್ದ ವೆಂಕಯ್ಯ ಆರಂಭದಲ್ಲಿ ಅದರಲ್ಲಿ ಯಶಸ್ಸನ್ನೂ ಸಾಧಿಸುತ್ತಾನೆ. ಆದರೆ ಆ ಯಶಸ್ಸೇ ಅವನ ಅಹಂಕಾರಕ್ಕೆ ಕಾರಣವಾಗಿ, ನೈತಿಕತೆಯನ್ನು ಮೀರಿ, ಹಣದ ಆಸೆಗೆ ಬಿದ್ದು ಅಡ್ಡಹಾದಿಯನ್ನು ಹಿಡಿದಿದ್ದಾನೆ, ನಕಲಿ ಅಂಕಪಟ್ಟಿ ಕೊಟ್ಟು ನಿಯಮ ಮೀರಿ ಸಿಕ್ಕಿಬಿದ್ದಿದ್ದಾನೆ, ಅವನ ಅವಸಾನವನ್ನು ಅವನೇ ಮಾಡಿಕೊಂಡಿದ್ದಾನೆ ಎನ್ನುತ್ತಾ ಕಥೆಗಾರರು ಐಟಿ ಕಂಪನಿಗಳಲ್ಲಿ ನಡೆಯುತ್ತಿರುವ ನೀತಿರಹಿತ, ಮೌಲ್ಯರಹಿತ ಯುವಪೀಳಿಗೆಯವರ ಬದುಕನ್ನು ಚಿತ್ರಿಸುತ್ತಾರೆ.

ಜಾಗತೀಕರಣದ ಜಗತ್ತಿನಲ್ಲಿ ಸಾಫ್ಟ್‌ವೇರ್‌ನ ಸೆಳೆತಕ್ಕೆ ಸಿಕ್ಕಿ ಬದುಕು ಕಟ್ಟಿಕೊಂಡವರ ಕಥೆ–ವ್ಯಥೆಯನ್ನು ಇಲ್ಲಿ ವಸುಧೇಂದ್ರರು ಕಟ್ಟಿಕೊಡುತ್ತಿದ್ದಾರೆ. ಬಡವರು, ಕೆಳಮಧ್ಯಮ ವರ್ಗದವರು, ಮಧ್ಯಮ ವರ್ಗದವರೂ ಕೂಡ ಸಾಫ್ಟ್‌ವೇರ್ ಕ್ಷೇತ್ರವನ್ನು ಪ್ರವೇಶಿಸಿ ಸುಖಮಯ ಜೀವನವನ್ನು ನಡೆಸಿರುವುದನ್ನು ಕಥೆಗಾರರು ಹೇಳುವಂತೆಯೇ, ಅದರ ಮತ್ತೊಂದು ಬದಿಯಲ್ಲಿ ಹಣದ ಅಮಲಿನಲ್ಲಿ ತೇಲುತ್ತಾ ಸಂಬಂಧಗಳ ಸೂಕ್ಷ್ಮತೆಗಳನ್ನು ಅರಿಯದೆ ಹಾದಿ ತಪ್ಪುತ್ತಿರುವ ಬಗ್ಗೆಯೂ ಮಾತನಾಡುತ್ತಾರೆ.ಕುಟುಂಬ ಸಂಬಂಧಗಳು ಕಣ್ಮರೆಯಾಗಿ ಕರುಣೆಯೇ ಇರದ ಸಮಾಜ ರೂಪುಗೊಳ್ಳುತ್ತಿರುವುದನ್ನು ನೋವಿನಿಂದ ನುಡಿಯುತ್ತಾರೆ. ನ್ಯಾಯ, ನಿಷ್ಠೆ, ಮೌಲ್ಯ ಜನರ ಮನಸ್ಸಿನಿಂದ ಮರೆತು ಹೋಗುತ್ತಿವೆ ಎನ್ನುತ್ತಿದ್ದಾರೆ. ಹಣದ ಮೇಲೇಯೇ ಎಲ್ಲವೂ ನಿಂತು, ಬದುಕೇ ಒಂದು ಬಗೆಯ ಲೆಕ್ಕಾಚಾರದಲ್ಲಿ ಸಾಗುತ್ತಿದೆ ಎನ್ನುತ್ತಾರೆ.

ಜಾಗತೀಕರಣ–ಸಾಫ್ಟ್‌ವೇರ್ ನೆಲೆಯಿಂದ ನೋಡಿದ ವಸುಧೇಂದ್ರರ ಕಥೆಗಳಲ್ಲಿನ ಮುಖ್ಯ ಅಂಶಗಳನ್ನು ಈ ರೀತಿ ಗುರುತಿಸಬಹುದು:

- ಬಳ್ಳಾರಿಯ ಪರಿಸರದಲ್ಲಾಗುತ್ತಿರುವ ಸೂಕ್ಷ್ಮ ಬದಲಾವಣೆಗಳನ್ನು ಸಂವೇದನಾಶೀಲರಾಗಿ ಕಥೆಯಾಗಿಸುವ ಕ್ರಿಯಾಶೀಲತೆ ಅವರ ಎಲ್ಲ ಬರವಣಿಗೆಗಳ ಮೂಲದ್ರವ್ಯ.
- ಮಲೆನಾಡನ್ನು ಬಿಟ್ಟು ಮೈಸೂರಿಗೆ ಬಂದ ಕುವೆಂಪು ಅವರಿಗೆ ಮಲೆನಾಡು ಕಾಡಿರುವಂತೆ, ಬಳ್ಳಾರಿಯನ್ನು ಬಿಟ್ಟು ಬೆಂಗಳೂರಿಗೆ ಬಂದ ವಸುಧೇಂದ್ರರಿಗೆ ಬಳ್ಳಾರಿಯ ನೆನಪುಗಳು ಕಾಡುವುದರ ಜೊತೆಗೆ, ಬೆಂಗಳೂರಿನ ಸಿಲಿಕಾನ್ ಸಿಟಿಯ ಕೃತಕತೆಯು ಅವರ ಕಥೆಗಳಲ್ಲಿ ದಾಖಲಾಗಿದೆ. ಗ್ರಾಮ–ನಗರಗಳ ಮುಖಾಮುಖಿಯೂ ಕಂಡುಬರುತ್ತದೆ.
- ಸಾಫ್ಟ್‌ವೇರ್ ಜಗತ್ತಿನ ಚಿನ್ನದ ಪಂಜರದೊಳಗೆ ಬಂಧಿಯಾಗಿರುವ ಮನುಷ್ಯರ ಮನಸ್ಸುಗಳ ಸುಖ–ದುಃಖಗಳ ಅವಲೋಕನ ಮಾಡುತ್ತಾರೆ. ಉದಾ: ಯುಗಾದಿ
- ಜಾಗತೀಕರಣ ಸಮಾಜ, ಕುಟುಂಬ, ಮನುಷ್ಯರ ಮನಸ್ಸುಗಳ ಮೇಲೆ ಬೀರುತ್ತಿರುವ ಪರಿಣಾಮಗಳ ಪರಿಣಾಮಕಾರಿ ಚಿತ್ರಣವಿದೆ.
- ಬದುಕಿನಲ್ಲಿ ನೊಂದ, ಜೀವನದಲ್ಲಿ ಕಹಿಯನ್ನು ಉಂಡ ಜನರಿಗೆ ಆತ್ಮವಿಶ್ವಾಸವನ್ನು ತುಂಬುವ ಕೆಲಸವನ್ನು ವಸುಧೇಂದ್ರರ ಹಲವು ಕಥೆಗಳು ಸೊಗಸಾಗಿ ಮಾಡುತ್ತವೆ.

ಪರಾಮರ್ಶನ ಪುಸ್ತಕಗಳು

1. ವಸುಧೇಂದ್ರ, ಮನೀಷೆ, ಛಂದ ಪುಸ್ತಕ, ಬೆಂಗಳೂರು, 2015
2. ವಸುಧೇಂದ್ರ, ಚೇಳು, ಛಂದ ಪುಸ್ತಕ, ಬೆಂಗಳೂರು, 2016
3. ವಸುಧೇಂದ್ರ, ಹಂಪಿ ಎಕ್ಸ್‌ಪ್ರೆಸ್, ಛಂದ ಪುಸ್ತಕ, ಬೆಂಗಳೂರು, 2016
4. ವಸುಧೇಂದ್ರ, ಯುಗಾದಿ, ಛಂದ ಪುಸ್ತಕ, ಬೆಂಗಳೂರು, 2017
5. ವಸುಧೇಂದ್ರ, ಮೋಹನಸ್ವಾಮಿ, ಛಂದ ಪುಸ್ತಕ, ಬೆಂಗಳೂರು, 2017
6. ಡಾ. ಶೈಲ ಯು, ಕೈಗನ್ನಡಿ, ಶ್ರೀ ಬೆನಕ ಪ್ರಕಾಶನ, ಮಂಗಳಗಂಗೋತ್ರಿ, 2012

ಮಿಣುಕುಗಳ
ಮುಟ್ಟಿದ ಮೇಲೂ
ಮಾನವ ದಿಟ್ಟಿಗೆ
ಮಿತಿಯಿದೆ ಎಂದರೇಕೆ?

ಶಂಕರ, ಅದ್ವೈತ, ಕ್ಯಾಂಟ್ ಮತ್ತು ವಿಚಾರವಾದ

ಶ್ರೀನಾಥ್ ಎಚ್. ಎಸ್.
ರಿನಾಯಿಸೆನ್ಸ್ ಎಕ್ಸೋಟಿಕಾ, ಜಕ್ಕೂರು ಪಾಲಿಟೇಶನ್ಸ್
ಬೆಂಗಳೂರು

ಓಜಸ್ಸು, ಸ್ಥೈರ್ಯ, ಸೂಕ್ಷ್ಮತೆ ಹಾಗೂ ಕಾರುಣ್ಯ ಇವುಗಳು ಒಟ್ಟುಗೂಡಿ ಶಂಕರರನ್ನುಸೃಷ್ಟಿಸಿದವು. ಇಷ್ಟೊಂದು ಉದಾತ್ತ ಗುಣವನ್ನು ಒಟ್ಟಿಗೆ ಸೇರಿಸಿ ಒಂದು ವಿಸ್ಮಯವನ್ನು ಸೃಜಿಸುವ ಕಾರ್ಯವನ್ನು ಪ್ರಕೃತಿ ಆಗೊಮ್ಮೆಯೋ, ಈಗೊಮ್ಮೆಯೋ ಮಾಡುತ್ತಾಳೆ.

ಎಂಟನೇ ಶತಮಾನದ ಆದಿಯಲ್ಲಿ ಶಂಕರರು ಹುಟ್ಟಿದ ಭಾರತವು ನೈತಿಕ ಅಧಃಪತನ ದಲ್ಲಿತ್ತು. ಅಲೆಮಾರಿ ಕುತರ್ಕಿಗಳ, ಸಂದೇಹವಾದಿಗಳ, ಗೊಡ್ಡು ಆಚರಣೆಗಳ ಆಗರವಾಗಿತ್ತು ಆ ಭಾರತ. ಸಾಂಖ್ಯರ ನಿರೀಶ್ವರವಾದ ಹಾಗೂ ಬೌದ್ಧ ಧರ್ಮದ ಅನಿಶ್ಚಿತಾವಾದಗಳು ಎಲ್ಲೆಡೆಯಲ್ಲೂ ಪ್ರಚಲಿತವಾಗಿ, ಉಪನಿಷತ್ತುಗಳ ಉನ್ನತ ತತ್ವಗಳು ವಿದ್ವತ್‌ಗೋಷ್ಠಿಗಳ ಚರ್ಚೆಗಳಿಂದ ದೂರವಾಗಿದ್ದವು.

ಕೊಂಗು ಚೇರ ರಾಜ್ಯದ ಕಾಲಡಿಯಲ್ಲಿ (ಇಂದಿನ ಕೇರಳ ರಾಜ್ಯ) ಒಂದು ನಂಬೂದರಿ ಬ್ರಾಹ್ಮಣ ವಂಶದಲ್ಲಿ ಹುಟ್ಟಿದ ಶಂಕರರು ಗೋವಿಂದಾಚಾರ್ಯರಿಂದ ಪೂರ್ವ ಮತ್ತು ಉತ್ತರ ಮೀಮಾಂಸೆ ಹಾಗೂ ಇತರೇ ಭಾರತೀಯ ದರ್ಶನಗಳಲ್ಲಿ ಪ್ರಾವಿಣ್ಯವನ್ನು ಪಡೆದರು. ಗೋವಿಂದಾಚಾರ್ಯರು ಸುಮಾರು ಕ್ರಿ.ಪೂ.200ರಲ್ಲಿ ಬಾದರಾಯಣರಿಂದ ರಚಿಸಲ್ಪಟ್ಟ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದು ಪ್ರಸಿದ್ಧಿಯಾಗಿದ್ದ ಗೌಡಪಾದರ ಶಿಷ್ಯರು. ಶಂಕರರು ಇನ್ನೂ ಬಾಲಕರಾಗಿದ್ದಾಗಲೇ ಮನೆಯ ಸುಖ–ಸೌಕರ್ಯಗಳನ್ನು ತ್ಯಜಿಸಿ ಸನ್ಯಾಸಿಯಾಗಿ ಕಾಲ್ನಡಿಗೆಯಲ್ಲಿ ಕಾಶಿಗೆ ತೆರಳಿದರು. ವಿದ್ವತ್ತಿನಿಂದ ಕಾಶಿಯ ವಿದ್ವಜ್ಜನರ ಮನಸೂರೆಗೊಂಡ ಶಂಕರರನ್ನು ಕಾಶಿಯ ವಿಶ್ವವಿದ್ಯಾಲಯವು ಶ್ರೇಷ್ಠ ರೀತಿಯಲ್ಲಿ ಸನ್ಮಾನಿಸಿ, ಒಂದು ಶಿಷ್ಯವೃಂದವನ್ನು ಜೊತೆಮಾಡಿ ವೇದಾಂತ ತತ್ವಗಳ ಪುನರುತ್ಥಾನ ಕಾರ್ಯಕ್ಕೆ ಅವರನ್ನು ನಿಯಮಿಸಿತು. ಮುಂದಿನ ಹತ್ತು ವರ್ಷಗಳಲ್ಲಿ ಶಂಕರರು ದಕ್ಷಿಣದ ಕೇರಳದಿಂದ ಉತ್ತರದ ಕಾಶ್ಮೀರದವರೆಗೂ, ಹಾಗೂ ಪಶ್ಚಿಮದ ದ್ವಾರಕೆಯಿಂದ ಪೂರ್ವದ ಪುರಿಯವರೆಗೂ ಸಂಚರಿಸಿ, ಅಸಂಖ್ಯ ವಿದ್ವತ್ ಸಭೆಗಳಲ್ಲಿ ಜಿಜ್ಞಾಸೆ, ವಾದ, ಮಂಡನೆಗಳ ಮೂಲಕ ವೇದಾಂತದ ಹಿರಿಮೆಯನ್ನು ಪುನಃಸ್ಥಾಪಿಸಿದರು. ಈ ಕಾರ್ಯಬಾಹುಳ್ಯದ ನಡುವೆಯೂ ಕಾಲಾವಕಾಶ ಕಲ್ಪಿಸಿಕೊಂಡು ಪ್ರಸ್ಥಾನತ್ರಯವೆಂದು ಕರೆಯಲ್ಪಡುವ ಮುಖ್ಯ ಉಪನಿಷತ್‌ಗಳಿಗೂ, ಭಗವದ್ಗೀತೆಗೂ ಹಾಗೂ ಬ್ರಹ್ಮ ಸೂತ್ರಗಳಿಗೂ ಶಂಕೆಗೆ ಆಸ್ಪದವಿಲ್ಲದಂತೆ ಸುಂದರ ಭಾಷ್ಯಗಳನ್ನು ಬರೆದಿದ್ದೇ ಅಲ್ಲದೆ ಅತೀಂದ್ರಿಯ ಜ್ಞಾನವನ್ನು ಸ್ಫುರಿಸುವ ಲಾಲಿತ್ಯಪೂರ್ಣ ಕಾವ್ಯಗಳನ್ನು ರಚಿಸಿ, ಭಾರತವನ್ನು ಒಂದು ಅಧ್ಯಾತ್ಮ ನೆಲೆಗಟ್ಟಿನಲ್ಲಿ ಹಿಡಿದಿಡಲು ದೇಶದ ನಾಲ್ಕು ಮೂಲೆಗಳಲ್ಲಿ ಮಠಗಳನ್ನು ಸ್ಥಾಪಿಸಿದರು. ಕಡೆಗೆ ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಕೇದಾರವನ್ನು ತಲುಪಿ ಕೇದಾರೇಶ್ವರನಿಗೆ ಪೂಜೆ ಸಲ್ಲಿಸಿ ದೇಶ ಸಂಚಾರದಲ್ಲಿ ಸಹಭಾಗಿಗಳಾಗಿದ್ದ ಶಿಷ್ಯರಿಗೆ ವಿದಾಯ ಹೇಳಿ ದೂರದಲ್ಲಿ ಕೈಬೀಸಿ ಕರೆಯುತ್ತಿದ್ದ ಹಿಮಾಚ್ಛಾದಿತ ಶಿಖರಗಳೆಡೆಗೆ ತಮ್ಮ

ಅಂತಿಮ ಪ್ರಯಾಣವನ್ನು ಮುಂದುವರೆಸಿದರು. ಇಂದು ಶಂಕರರ ಆ ಅನಂತದೆಡೆಗಿನ ಪ್ರಯಾಣದ ಗುರುತಾಗಿ ಉಳಿದಿರುವುದು ಕೇದಾರೇಶ್ವರ ದೇವಾಲಯದ ಅನತಿ ದೂರದಲ್ಲಿ ಹಿಮದಿಂದ ಮುಚ್ಚಿದ ಒಂದು ಮೂಲೆಯಲ್ಲಿ ಇರುವ ಉದ್ದಂಡವನ್ನು ಹಿಡಿದ ಒಂದು ಕೈನ ಕೆತ್ತನೆ ಮಾತ್ರ. ಅಲ್ಪಾಯುಷಿಗಳಾಗಿದ್ದು ಇಷ್ಟೊಂದು ಮಹತ್ಕಾರ್ಯಗಳನ್ನು ಸಾಧಿಸಿದ ಶಂಕರರ ಜೀವನ ಒಬ್ಬ ವ್ಯಕ್ತಿ ವರ್ಷಗಳಲ್ಲಿ ಕಿರಿಯನಾದರೂ ಗಳಿಗೆಗಳಲ್ಲಿ ವೃದ್ಧನಾಗಿರಲು ಸಾಧ್ಯವೆಂಬ ಸತ್ಯವನ್ನು ಎತ್ತಿ ಹಿಡಿಯುತ್ತದೆ.

ಅದ್ವೈತ

ಕರ್ಮ ಮತ್ತು ಮೋಕ್ಷ ಇವೆರಡೂ ಭಾರತೀಯ ಚಿಂತನೆಯ ಮುಖ್ಯ ಪರಿಕಲ್ಪನೆಗಳು. ಕರ್ಮದ ಪರಿಕಲ್ಪನೆಯ ಪ್ರಕಾರ ಒಬ್ಬ ವ್ಯಕ್ತಿಯ ಪ್ರಸ್ತುತ ಜೀವನವು ಅವನ ಹಿಂದಿನ ಕರ್ಮಗಳನುಸಾರವಾಗಿ ರೂಪಿತವಾಗಿರುತ್ತದೆ. ಅದರಂತೆ ಅವನ ಮುಂದಿನ ಜೀವನವು ಅವನ ಈಗಿನ ಕರ್ಮಗಳಿಂದ ರೂಪಿತವಾಗುತ್ತದೆ. ಆ ವ್ಯಕ್ತಿ ಗಳಿಸಿದ ಒಟ್ಟು ಕರ್ಮಗಳ ಮೂಟೆಗೇ ಸಂಚಿತವೆನ್ನುವುದು. ಒಬ್ಬ ವ್ಯಕ್ತಿಯು ತನ್ನ ಸಂಚಿತವನ್ನು ಸಂಪೂರ್ಣವಾಗಿ ಕ್ಷಯಿಸುವವರೆಗೂ ಅವನಿಗೆ ಜನ್ಮ–ಮರಣ–ಪುನರ್ಜನ್ಮಗಳ ಸೆರೆಯಿಂದ ಬಿಡುಗಡೆಯಿಲ್ಲ. ಈ ಸೆರೆಮನೆಯಿಂದ ಬಿಡುಗಡೆ ಪಡೆಯುವುದು ಎಲ್ಲರ ಮುಖ್ಯ ಗುರಿಯಾಗಬೇಕಾಗುತ್ತದೆ. ಈ ಬಿಡುಗಡೆಯನ್ನೇ ಮೋಕ್ಷವೆನ್ನುವುದು. ಈ ಜನನ–ಮರಣ–ಜನನಗಳ ಬಂಧನದಿಂದ ಮೋಕ್ಷ ಪಡೆಯಲು ಇರುವ ಉಪಾಯ ನಮ್ಮ ನಿಜ ಸ್ವರೂಪವನ್ನು ತಿಳಿಯುವುದು. ಈ ನಿಜ ಸ್ವರೂಪ ಅದ್ವೈತ ಸಿದ್ಧಾಂತದ ಪ್ರಕಾರ ಎಲ್ಲ ಸತ್ಯಗಳಿಗೂ ಮೂಲಭೂತವಾದ ಬ್ರಹ್ಮ ವಸ್ತುವೇ ಆಗಿರುತ್ತದೆ. ನಮ್ಮ ಮೂಲ ಸ್ವರೂಪ ಬ್ರಹ್ಮವಸ್ತುವಾಗಿದ್ದರೆ ನಮಗೆ ಅದರ ಅರಿವು ಏಕೆ ಇರುವುದಿಲ್ಲ? ಈ ಪ್ರಶ್ನೆಗೆ ಉತ್ತರ ಅವಿದ್ಯೆ. ಈ ಅವಿದ್ಯೆ ನಮಗೆ ಮೂಲ ಸತ್ಯವಾದ ಬ್ರಹ್ಮವಸ್ತುವನ್ನು ಮರೆಮಾಚಿ, ಮಾಯಾರೂಪವಾದ ಜಗತ್ತನ್ನು ನಿಜವೆಂಬ ತಪ್ಪು ಕಲ್ಪನೆಯನ್ನುಂಟು ಮಾಡುತ್ತದೆ. ಸಾಧಾರಣವಾಗಿ ಮಾಯೆ ಎಂಬ ಪದವನ್ನು ಭ್ರಮೆ ಅಥವಾ ಮಿಥ್ಯೆ ಎಂದು ಅರ್ಥೈಸಲಾಗುತ್ತದೆ. ಆದರೆ ಅದ್ವೈತ ಸಿದ್ಧಾಂತದ ಪ್ರಕಾರ ಮಾಯೆ ಎಂದರೆ ಕ್ಷಣಕ್ಷಣವೂ ಬದಲಾಯಿಸುವ ಇಂದ್ರಿಯ ಗೋಚರವಾದ ಭೌತಿಕ ಜಗತ್ತು. ಬ್ರಹ್ಮ ವಸ್ತುವಾದರೋ ನಿತ್ಯ, ಶಾಶ್ವತ ಹಾಗೂ ಇಂದ್ರಿಯ ಜ್ಞಾನಗಳಿಂದ ಹೊರಗಿರುವ ಅರಿವು. ನಮಗಿರುವ ಜ್ಞಾನವು ಶಂಕರರು ಸೂಚಿಸಿರುವಂತೆ ಸಂಪೂರ್ಣ ನಮ್ಮ ಇಂದ್ರಿಗಳ ಮೂಲಕ ದೊರೆತಿರುವ ಪ್ರಪಂಚ ಜ್ಞಾನ. ಅಂದರೆ ನಮ್ಮ ಜ್ಞಾನ ಸ್ಥಳ–ಕಾಲ, ಕಾರ್ಯ–ಕಾರಣ ಇವುಗಳ ಇತಿಮಿತಿಗಳಿಗೊಳಪಟ್ಟ ಒಂದು ಸೀಮಿತ ಅರಿವು. ಈ ಕಾರಣದಿಂದ ನಮಗೆ ಭೌತಿಕ ಜಗತ್ತಿನ ಹೊರಗಿರುವ ಇಂದ್ರಿಯಾತೀತ ವಸ್ತುವಿನ ಅರಿವಿರುವುದಿಲ್ಲ, ಹಾಗೂ ನಮ್ಮ ಇಂದ್ರಿಯ ಸೀಮಿತ ಜ್ಞಾನದಿಂದ ಇಂದ್ರಿಯಾತೀತ ವಸ್ತುವಿನ ಅರಿವನ್ನು ಪಡೆಯಲೆತ್ನಿಸುವುದು ನಿರರ್ಥಕ. ಹೀಗಿದ್ದಲ್ಲಿ ಇಂದ್ರಿಯಾತೀತವಾದ ಪರಬ್ರಹ್ಮ ವಸ್ತುವಿನ ಜ್ಞಾನದರಿವನ್ನು ಪಡೆಯುವುದು ಹೇಗೆ?

ಅಂತರ್ದೃಷ್ಟಿ ಅಥವಾ ಒಳದೃಷ್ಟಿಯಿಂದ ಮಾತ್ರ ಸಾಧ್ಯ ಎಂದು ಶಂಕರರು ಹೇಳುತ್ತಾರೆ. ಈ ಅಂತರ್ದೃಷ್ಟಿ ಯನ್ನು ಪಡೆಯುವ ಏಕೈಕ ಮಾರ್ಗವೆಂದರೆ ಐಶ್ವರ್ಯ, ಅಧಿಕಾರ, ಅಂತಸ್ತು, ಕೀರ್ತಿ ಮುಂತಾದ ಹೆಬ್ಬಯಕೆಗಳನ್ನು ಹಾಗೂ ಆಸೆ–ಆಕಾಂಕ್ಷೆ, ಕಾಮ–ಕ್ರೋಧ, ಮದ–ಮಾತ್ಸರ್ಯ ಇವುಗಳನ್ನು ಸಂಪೂರ್ಣವಾಗಿ ತೊರೆದು, ನಿರ್ವಿಕಾರ ಜೀವನವನ್ನು

ನಡೆಸುವ ಶಕ್ತಿಯನ್ನು ಪಡೆಯುವುದು. ಈ ಶಕ್ತಿಯನ್ನು ಸಂಪಾದಿಸಿದ ಮೇಲೆ ನಮಗೆ ಎಲ್ಲಾ ಸ್ಥಾವರ–ಜಂಗಮ, ಜಡ–ಚೇತನ, ಇವುಗಳೆಲ್ಲದರಲ್ಲೂ ಇರುವ ಹಾಗೂ ಇವೆಲ್ಲಕ್ಕೂ ಮೂಲವಾದ ಬ್ರಹ್ಮವಸ್ತುವಿನ ಅರಿವಾಗುತ್ತದೆ. ಈ ಅರಿವಿನಿಂದ ಜೀವಾತ್ಮ ಹಾಗೂ ಪರಮಾತ್ಮಗಳ ಬೇಧವು ಹೋಗಿ ನಮ್ಮನ್ನೂ ಸೇರಿದಂತೆ ಈ ಜಗತ್ತೆಲ್ಲವೂ ಆ ಬ್ರಹ್ಮವಸ್ತುವೇ ಎಂಬ ಸಾಕ್ಷಾತ್ಕಾರವಾಗುತ್ತದೆ. ಈ ಸಾಕ್ಷಾತ್ಕಾರವಾದೊಡನೆಯೇ ನಮ್ಮ ಪ್ರಾಪಂಚಿಕ ಕಷ್ಟ ಸುಖಗಳು ಮರೆಯಾಗಿ ನಾವು ಬ್ರಹ್ಮಾನಂದ ಸ್ಥಿತಿಯನ್ನು ತಲುಪುತ್ತೇವೆ.

ಸ್ವಾರಸ್ಯಕರ ವಿಷಯವೆಂದರೆ ಶಂಕರರು ಭೌತಿಕ ಜಗತ್ತಿನ ಜ್ಞಾನವನ್ನು ಮಿಥ್ಯೆ ಎಂದು ತಳ್ಳಿಹಾಕುವುದಿಲ್ಲ. ನಮ್ಮ ಇಂದ್ರಿಯಗಳ ಇತಿಮಿತಿಯಲ್ಲಿ ಈ ಜ್ಞಾನಕ್ಕೆ ಅದರದೇ ಆದ ಒಂದು ನೆಲೆಯಿರುತ್ತದೆ ಹಾಗೂ ಈ ಜ್ಞಾನವು ನಮ್ಮ ದೈನಂದಿನ ಬದುಕನ್ನು ನಡೆಸಲು ಮುಖ್ಯವಾಗುತ್ತದೆ. ನಮಗೆ ಇಂದ್ರಿಯಾತೀತ ಜ್ಞಾನದ ಅರಿವು ಉಂಟಾಗುವವರೆಗೂ ನಾವು ನಮ್ಮ ಇಷ್ಟದೇವರನ್ನು ಸೇರಿದಂತೆ ದೇವರುಗಳನ್ನು ಪೂಜಿಸುವುದು, ಬೇಡುವುದು ಯಾವ ರೀತಿಯಲ್ಲೂ ಅಸಂಗತವಲ್ಲವೆಂದು ಶಂಕರರು ತಿಳಿಸುತ್ತಾರೆ. ಇದೇ ಅಲ್ಲದೆ, ವೈಯಕ್ತಿಕ ದೇವರಲ್ಲಿನ ನಂಬಿಕೆ ನಮಗೆ ಸಾಕ್ಷಾತ್ಕಾರದ ಹಾದಿಯಲ್ಲಿ ಸಾಗಲು ಸಹಾಯಕವೂ ಆಗಬಹುದೆಂಬ ಸಾಧತೆಯನ್ನು ಶಂಕರರು ಒಪ್ಪುತ್ತಾರೆ. ಆದರೆ ಇಂದ್ರಿಯಾತೀತ ಬ್ರಹ್ಮಜ್ಞಾನವನ್ನು ಪಡೆದ ಜನರು ಸಹಸ್ರ ದೇಗುಲಗಳನ್ನು ಹೊಕ್ಕು ಸಹಸ್ರ ದೇವರುಗಳಿಗೆ ತಲೆ ಬಾಗಿದರೂ ನಿತ್ಯವಾದ ಬ್ರಹ್ಮ ವಸ್ತುವಿನಲ್ಲಿ ಲೀನರಾಗಿ ಬ್ರಹ್ಮಾನಂದದಲ್ಲಿ ತೇಲುತ್ತಿರುತ್ತಾರೆ.

ಇಮ್ಯಾನ್ಯುಯಲ್ ಕ್ಯಾಂಟ್

ಶಂಕರರ ಜನನವಾದ ಸಹಸ್ರ ವರ್ಷಗಳಾದ ಮೇಲೆ ಜನಿಸಿದ ಜರ್ಮನ್ ತತ್ವಜ್ಞಾನಿ ಕ್ಯಾಂಟ್ ತನ್ನ 'Critique of Pure Reason' ಅಥವಾ 'ಶುದ್ಧ ವಿವೇಚನೆಯ ವಿಶ್ಲೇಷಣೆ' ಎಂಬ ಬೃಹತ್ ಗ್ರಂಥದಲ್ಲಿ ಶಂಕರರ ವಿಚಾರಗಳನ್ನು ಎಷ್ಟು ಪ್ರತಿಪಾದಿಸಿದ್ದಾನೆಂದರೆ ಅವನು ಶಂಕರರ ಕೃತಿ ಚೌರ್ಯ ಮಾಡಿರಬಹುದೇ ಎಂಬ ಅನುಮಾನ ಹುಟ್ಟುತ್ತದೆ. ಅದೇ ರೀತಿ ಕ್ಯಾಂಟ್‌ನ 'Mind' ಅಥವಾ 'ಮನಸ್ಸು' ಇದರ ಕಲ್ಪನೆ ಕೂಡ ವೈಶೇಷಿಕ ಸಿದ್ಧಾಂತದ 'ಮನಸ್ಸಿಗೆ' ಎಷ್ಟು ಹತ್ತಿರವಾಗಿದೆಯೆಂದರೆ ಕ್ಯಾಂಟ್ ಭಾರತೀಯ ತತ್ವ ವಿಚಾರಗಳಿಂದ ಬಹಳಷ್ಟು ಪ್ರಭಾವಿತನಾಗಿದ್ದನೇ ಎಂಬ ಸಂದೇಹ ಸಹಜವಾಗಿ ಮೂಡುತ್ತದೆ. ಆದರೆ ಆ ಕಾಲದ ಯೂರೋಪಿನ ವಿಶ್ವವಿದ್ಯಾಲಯಗಳಲ್ಲಿ ಬೋಧಿಸುತ್ತಿದ್ದ ತತ್ವಜ್ಞಾನಿಗಳಿಗೆ ಭಾರತೀಯ ತತ್ವ ಚಿಂತನೆಗಳ ಬಗ್ಗೆಯಾಗಲೀ ಅಥವಾ ಶಂಕರರ ಬಗ್ಗೆಯಾಗಲೀ ಸ್ವಲ್ಪವೂ ತಿಳುವಳಿಕೆಯಿಲ್ಲದಿದ್ದ ಕಾರಣದಿಂದ ಕ್ಯಾಂಟ್ ಕೃತಿ ಚೌರ್ಯ ಮಾಡಿರಬಹುದೆಂದು ಯಾರೂ ಸಂದೇಹಪಡಲಾಗುವುದಿಲ್ಲ. ಆದರೆ ಕ್ಯಾಂಟ್‌ಗೆ ಶಂಕರರ ಬಗ್ಗೆಯಾಗಲೀ ಅಥವಾ ನ್ಯಾಯ–ವೈಶೇಷಿಕ ದರ್ಶನಗಳ ಬಗ್ಗೆಯಾಗಲೀ ಒಂದಿಷ್ಟಾದರೂ ಅರಿವಿದ್ದಿದ್ದರೆ ಅವನ ಕೆಲಸ ಹಗುರವಾಗಿ ಅವನಿಗೆ ಸಾಕಷ್ಟು ಸಮಯ ಉಳಿಯುತ್ತಿತ್ತು.

ಕೋನಿಕ್ಸ್ ಬರ್ಗ್‌ನ ಪ್ರೂಷದಲ್ಲಿ(ಇಂದಿನ ರಷ್ಯಾದ ಕಾಲಿನಿನ್‌ಗ್ರಾಡ್) ಕ್ರಿ.ಶ.೧೭೨೪ರಲ್ಲಿ ಜನಿಸಿದ ಕ್ಯಾಂಟ್ ತನ್ನ ಜೀವಿತದ ಮುಖ್ಯಭಾಗವನ್ನು ಬೋಧನೆಗೆ ಹಾಗೂ ಬರವಣಿಗೆಗೆ ಮುಡಿಪಾಗಿಟ್ಟಿದ್ದನು. ಕೋನಿಕ್ಸ್‌ಬರ್ಗ್‌ನ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದ ಕ್ಯಾಂಟ್ ನಾಚಿಕೆಯ ಸ್ವಭಾವದ ಒಬ್ಬ ಶಾಂತ ವ್ಯಕ್ತಿಯಾಗಿದ್ದನು. ಸಮಯ ನಿಷ್ಠೆ ಅವನ ಮುಖ್ಯ ಗುಣಗಳಲ್ಲೊಂದಾಗಿದ್ದು, ಬೆಳಗಿನ ಉಪಹಾರದಿಂದ ಹಿಡಿದು ರಾತ್ರಿ ಮಲಗುವವರೆಗೂ ಎಲ್ಲಾ

ಕಾರ್ಯಗಳಿಗೂ ಒಂದು ನಿಗದಿತ ವೇಳೆಯನ್ನು ಗೊತ್ತುಪಡಿಸಿ ಅದರಂತೆ ನಡೆಯುತ್ತಿದ್ದನು: ಪ್ರತಿದಿನ ಸಂಜೆ ಅವನು ತನ್ನ ಮನೆಯ ಮುಂದಿನ ಲಿಂಡನ್ ಸಾಲುಮರಗಳ ಹಾದಿಯಲ್ಲಿ ವಾಯುವಿಹಾರಕ್ಕೆ ಹೊರಟನೆಂದರೆ ಅವನ ನೆರೆಹೊರೆಯ ಜನರಿಗೆ ಸಮಯವೆಷ್ಟೆಂಬುದು ನಿಖರವಾಗಿ ತಿಳಿಯುತ್ತಿತ್ತು. ಈ ಶಾಂತ ಸ್ವಭಾವದ ಐದು ಅಡಿ ಎತ್ತರದ ವ್ಯಕ್ತಿಯಿಂದ ಯಾರೂ ಕ್ರಾಂತಿಕಾರಕ ಕಾರ್ಯವನ್ನು ನಿರೀಕ್ಷಿಸಿರಲಿಲ್ಲ. ಆದರೆ ಅವನು ತನ್ನ ಐವತ್ತೇಳನೆಯ ವಯಸ್ಸಿನಲ್ಲಿ ತನ್ನ **"Critique of Pure Reason"** ಗ್ರಂಥವನ್ನು ಪ್ರಕಟಿಸಿದಾಗ ಯುರೋಪ್ ಬೆಚ್ಚಿ ಬಿತ್ತು. ಅದರಲ್ಲಿನ ಕೆಲ ಯೋಚನೆಗಳು ಎಷ್ಟು ಪ್ರಖರವಾಗಿದ್ದವೆಂದರೆ ಕ್ರೈಸ್ತ ಪಾದ್ರಿಗಳು ತಮ್ಮ ನಾಯಿಗಳಿಗೆ 'ಕ್ಯಾಂಟ್' ಎಂದು ಹೆಸರಿಟ್ಟು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿಕೊಂಡರು. ಅದರಂತೆ ಅವನು ತನ್ನ ಅರವತ್ತಾರನೇ ವಯಸ್ಸಿನಲ್ಲಿ 'Religion within the Limits of Pure Reason' ಅಥವಾ 'ಶುದ್ಧ ವಿವೇಚನೆಯ ಚೌಕಟ್ಟಿನಲ್ಲಿ 'ಧರ್ಮ' ಎಂಬ ಗ್ರಂಥವನ್ನು ಪ್ರಕಟಿಸಿದಾಗ ಅಸಮಾಧಾನಗೊಂಡ ಪ್ರೂಷದ ದೊರೆ ಇಮ್ಮಡಿ ಫ್ರೆಡ್ರಿಕ್ ವಿಲಿಯಮ್ (Fredrick William II-) ತಾನು ಇನ್ನು ಮುಂದೆ ಏನನ್ನೂ ಬರೆಯುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಟ್ಟ ಮೇಲೆ ಕ್ಯಾಂಟ್‌ನನ್ನು ಕ್ಷಮಿಸಿ, ಶಿಕ್ಷೆಯಿಂದ ಪಾರು ಮಾಡಿದನು. ಒಬ್ಬ ವ್ಯಕ್ತಿಯನ್ನು ಅವನ ಮುಖ ನೋಡಿ ಖಂಡಿತ ಅಳೆಯಲಾಗುವುದಿಲ್ಲ.

ಕ್ಯಾಂಟ್ ಹುಟ್ಟಿದ ಯುರೋಪ್ ಒಂದು ಸಂಕ್ರಮಣ ಕಾಲದಲ್ಲಿತ್ತು. ಹಳೆಯ ವಿಚಾರ, ನಂಬಿಕೆಯನ್ನು ಜನರು ಪರೀಕ್ಷೆಗೆ ಒಳಪಡಿಸುತ್ತಿದ್ದರು. ಅದು ವಾಲ್ಟೇರ್, ಜಾನ್‌ಲಾಕ್, ಡೇವಿಡ್ ಹ್ಯೂಮ್ ಮೊದಲಾದವರ ಯುರೋಪ್ ಆಗಿತ್ತು. ಫ್ರೆಂಚ್ ಕ್ರಾಂತಿಗೆ ಪೂರಕವಾಗುವ ವಾತಾವರಣ ಸೃಷ್ಟಿಯಾಗುತ್ತಿತ್ತು. ಶತಮಾನಗಳ ಕಾಲ ಪ್ರಶ್ನಾತೀತವಾಗಿದ್ದ ಆಚಾರ, ವಿಚಾರ, ನಂಬಿಕೆಗಳನ್ನು ವೈಚಾರಿಕತೆ ಪ್ರಶ್ನಿಸಲಾರಂಭಿಸಿತ್ತು. ಆದರೆ ಈ ಎಲ್ಲವನ್ನು ಪ್ರಶ್ನಿಸಲಾರಂಭಿಸಿದ ವೈಚಾರಿಕತೆಯ ಯೋಗ್ಯತೆ ಏನು? ವಿಚಾರ ಎಂದರೆ ಏನು? ವಿಚಾರಗಳ ಮೂಲವಾದ ಮನಸ್ಸು ಎಂದರೆ ಏನು?

ಈ ಎಲ್ಲಾ ಪ್ರಶ್ನೆಗಳನ್ನೂ ಜಾನ್ ಲಾಕ್(೧೬೮೯) ತನ್ನ 'Human Understanding' ಅಥವಾ 'ಮನುಕುಲದ ಲಕ್ಷಣದ ತಿಳುವಳಿಕೆ' ಎಂಬ ಗ್ರಂಥದಲ್ಲಿ ಉತ್ತರಿಸಲು ಪ್ರಯತ್ನಿಸಿದನು. ನಮ್ಮ ಜ್ಞಾನವೆಲ್ಲಾ ನಮ್ಮ ಸುತ್ತಲಿನ ಭೌತಿಕ ಪ್ರಪಂಚದಿಂದ, ಇನ್ನೂ ನಿಖರವಾಗಿ ಹೇಳುವುದಾದರೆ ನಮ್ಮ ಇಂದ್ರಿಯಗಳಿಂದ ಬರುತ್ತದೆ. ಆಗ ತಾನೇ ಹುಟ್ಟಿದ ಮಗುವಿನ ಮನಸ್ಸು ಒಂದು 'tabula rasa', ಒಂದು ಬಿಳಿಯ ಖಾಲಿ ಹಾಳೆ. ಆ ಮಗು ಬೆಳೆಯುತ್ತಿದ್ದಂತೆ ಅವನ ಇಂದ್ರಿಯ ಲೇಖನಿ ಆ ಹಾಳೆಯ ಮೇಲೆ ಬರೆಯುತ್ತಾ ವಿಚಾರ, ನಂಬಿಕೆ ಇವುಗಳನ್ನೂ ಮನಃಪಟಲದಲ್ಲಿ ಮೂಡಿಸುತ್ತದೆ. ಮನಸ್ಸೆಂಬ ವಸ್ತು ಈ ಬರಹವನ್ನು ಗ್ರಹಿಸಿ ನಮಗೆ ನಮ್ಮ ಸುತ್ತಲಿನ ಪ್ರಪಂಚದ ಅರಿವನ್ನು ಮೂಡಿಸುತ್ತದೆ. ನಮ್ಮ ಇಂದ್ರಿಯಗಳಿಗೆ ನಮ್ಮ ಭೌತಿಕ ಜಗತ್ತನ್ನು ಬಿಟ್ಟು ಬೇರೇನೂ ಗ್ರಹಿಸಲು ಸಾಧ್ಯವಿಲ್ಲವಾದುದರಿಂದ ಈ ಜಗತ್ತಿನಲ್ಲಿ ಭೌತ ವಸ್ತುವನ್ನು ಬಿಟ್ಟು ಬೇರೇನೂ ನಿಜವಲ್ಲವೆಂಬ ಭೌತವಾದವನ್ನು ಲಾಕ್ ಪ್ರತಿಪಾದಿಸಿದ.

ಈ ವಾದ ಸರಿಯಲ್ಲವೆಂದು ಬಿಷಪ್ ಜಾರ್ಜ್ ಬರ್ಕ್ಲಿ ಹೇಳಿ, ಲಾಕೀಯ ವಿಶ್ಲೇಷಣೆಯಂತೆ ನಮ್ಮ ನಿಜವಾದ ಅರಿವು ನಮ್ಮ ಇಂದ್ರಿಯಗಳ ಮೂಲಕ ಮನಸ್ಸಿನಲ್ಲಿ ಚಿತ್ರಿತವಾದ ವಿಚಾರಗಳು ಹಾಗೂ ಭಾವನೆಗಳು. ಆದ್ದರಿಂದ ಈ ವಿಚಾರ ಹಾಗೂ ಭಾವನೆಗಳನ್ನು ಬಿಟ್ಟು ಬೇರೇನೂ ಇರಲು ಸಾಧ್ಯವಿಲ್ಲ. ಈ ಕಾರಣ ಜಗತ್ತೆಂಬುದು ನಮ್ಮ

ಮನಸ್ಸಿನಲ್ಲಿರುವ ಯೋಚನೆಗಳ ಒಂದು ಮೊತ್ತ. ಇದರಿಂದ ಯೋಚನೆಗಳನ್ನು ಬಿಟ್ಟು ಮತ್ಯಾವುವೂ ಜಗತ್ತಿನಲ್ಲಿ ಇರಲಸಾಧ್ಯ ಎಂಬ ಭಾವನಾವಾದ ಅಥವ ವಿಚಾರವಾದವನ್ನು ಇವನು ಮುಂದಿಟ್ಟನು. ಆದರೆ ಈ ಜಗತ್ತೆಂಬುದು ಕೇವಲ ಒಂದು ವಿಚಾರದ ಸಮೂಹ ಎಂಬ ವಾದವನ್ನು ನಮ್ಮ ಮನಸ್ಸು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುತ್ತದೆಯೆ? ಉದಾಹರಣೆಗೆ ಸುಡುಬಿಸಿಲಿನ ಮಧ್ಯಾಹ್ನ ಮರದ ನೆರಳಿನಲ್ಲಿ ಕುಳಿತು ಶೀತಲ, ನೊರೆಭರಿತ ಬಿಯರ್ ಕುಡಿಯುತ್ತಿರುವ ವ್ಯಕ್ತಿ ಅವನು ಸವಿಯುತ್ತಿರುವುದು ಕೇವಲ ಒಂದು ಯೋಚನೆ ಅಥವಾ ಹಲವು ಯೋಚನೆಗಳ ಸಮಾಹ ಮಾತ್ರ ಎಂದು ಒಪ್ಪಿಕೊಳ್ಳಲು ಸಾಧ್ಯವೇ? ಸಾಧ್ಯ ಎಂದು ಹೇಳುತ್ತಾನೆ ಬರ್ಕ್ಲಿ. ಒಂದು ವೇಳೆ ಆ ವ್ಯಕ್ತಿ ಇದ್ದಕ್ಕಿದ್ದಂತೆ ನೋಡುವ, ಕೇಳುವ, ಸ್ಪರ್ಶಿಸುವ, ಸವಿಯುವ ಆಘ್ರಾಣಿಸುವ ಶಕ್ತಿಯನ್ನು ಕಳೆದುಕೊಂಡರೆ ಅವನ ಪಾಲಿಗೆ ಉಳಿಯುವುದು ಅವನ ಮನಸ್ಸಿನಲ್ಲಿ ಆಗಲೇ ಉಳಿದಿರುವ ಬಿಯರ್ ಎಂಬ ವಸ್ತುವಿನ ಒಂದು ಕಲ್ಪನೆ ಮಾತ್ರ. ಒಂದು ವೇಳೆ ಈ ಬಿಯರ್ ಎಂಬ ವಸ್ತುವಿನ ಕಲ್ಪನೆಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲಾ ಯೋಚನೆ, ಅನುಭವ ಹಾಗೂ ಜ್ಞಾನವನ್ನು ಅವನ ಮನಸ್ಸಿನಿಂದ ಸಂಪೂರ್ಣವಾಗಿ ಅಳಿಸಿ ಹಾಕಿದರೆ ಆ ವ್ಯಕ್ತಿಯ ಪಾಲಿಗೆ ಬಿಯರ್ ಎಂಬ ವಸ್ತುವೇ ಇರುವುದಿಲ್ಲ. ಆದ್ದರಿಂದ ಜಗತ್ತಿನಲ್ಲಿ ನಮ್ಮ ಮನಸ್ಸಿನಲ್ಲಿರುವ ಯೋಚನೆಗಳನ್ನು ಬಿಟ್ಟು ಬೇರೇನೂ ಇರಲು ಅಸಾಧ್ಯ. ಜಗತ್ತು ಯೋಚನೆಗಳ ಅಥವ ಭಾವನೆಗಳ ಒಂದು ಕಟ್ಟಡ, ಹಾಗೂ ಅದರಲ್ಲಿ ಭೌತವಸ್ತುವೆಂಬುದಾವುದೂ ಇಲ್ಲ. ನಮ್ಮ ಮನಸ್ಸೆಂಬ ವಸ್ತು ನಶಿಸಿ ಹೋದರೆ ಜಗತ್ತೇ ಮಾಯವಾಗುತ್ತದೆ.

ಆದರೆ ಮನಸ್ಸೆಂಬುದು ನಿಜವಾದ ಒಂದು ವಸ್ತುವೇ? ಅತ್ಯಂತ ಗೊಂದಲ ಉಂಟು ಮಾಡಿದ 'Treatise on Human Nature' ಅಥವಾ 'ಮನುಜ ಸ್ವಭಾವ ಕುರಿತ ಶಾಸ್ತ್ರ ಗ್ರಂಥ' ಎಂಬ ಪುಸ್ತಕದಲ್ಲಿ ಸ್ಕಾಟ್ಲೆಂಡಿನ ತತ್ವಜ್ಞಾನಿ ಡೇವಿಡ್ ಹ್ಯೂಮ್ ಮನಸ್ಸು ಒಂದು ವಸ್ತುವೇ ಆಗಿದ್ದರೆ ನಮ್ಮ ಮಿಕ್ಕ ಅಂಗಗಳಂತೆ ಅದನ್ನು ಮುಟ್ಟಿ ನೋಡಲು ಸಾಧ್ಯವೇ ಎಂದು ಪ್ರಶ್ನಿಸುತ್ತಾನೆ. ಇದು ಅಸಾಧ್ಯವಾದ್ದರಿಂದ ಮನಸ್ಸೆಂಬುದು ಕೂಡ ನಮ್ಮ ಯೋಚನೆ, ಭಾವನೆ ಮುಂತಾದವುಗಳ ಒಟ್ಟು ಮೊತ್ತಕ್ಕೆ ನಾವು ಕೊಟ್ಟಿರುವ ಒಂದು ಹೆಸರು ಅಷ್ಟೆ, ಹಾಗೂ ನಿಜವಾಗಿ ಮನಸ್ಸೆಂಬ ವಸ್ತುವೇ ಇಲ್ಲ ಎಂಬ ವಿಲಕ್ಷಣ ವಾದವನ್ನು ಮುಂದಿಟ್ಟ. ಇದೇ ವಾದವನ್ನು ಇನ್ನೂ ಸ್ವಲ್ಪ ಎಳೆದು ಇಂದ್ರಿಯಗಳಿಗೆ ಅಗೋಚರವಾದ ಆತ್ಮವೂ ಕೂಡ ಕಾಲ್ಪನಿಕ ಎಂದು ಹೇಳಿದನು. ಬರ್ಕ್ಲಿ ಈ ಜಗತ್ತಿನಲ್ಲಿ ಮನಸ್ಸು ಎಂಬ ವಸ್ತು ಬಿಟ್ಟು ಬೇರಾವುದೂ ಇಲ್ಲ ಎಂದು ಹೇಳಿದ. ಹ್ಯೂಮ್ ಮನಸ್ಸು ಮತ್ತು ಆತ್ಮ ಇವರೆಡೂ ಇಲ್ಲವೆಂದು ಹೇಳಿದ. ಈ ರೀತಿ ಇವರೀರ್ವರೂ ಸೇರಿ ಈ ಜಗತ್ತಿನಲ್ಲಿ ಭೌತ ವಸ್ತುವಾಗಲೀ, ಮನಸ್ಸಾಗಲೀ, ಆತ್ಮವಾಗಲೀ ಯಾವುದೂ ಇಲ್ಲವೆಂಬ ಒಂದು ವಿಚಿತ್ರ ಸ್ಥಿತಿಯನ್ನು ಸೃಷ್ಟಿಸಿದರು. ಈ ವಿಚಾರ–ವಿನಿಮಯಗಳನ್ನು ಕೇಳಿದ ಒಬ್ಬ ವ್ಯಕ್ತಿ 'No matter, never mind' ಎಂಬ ಚತುರೋಕ್ತಿಯಿಂದ ವಿವಾದಗಳಿಗೆ ತೆರೆ ಎಳೆದ.

'ಭೌತಿಕ ವಸ್ತು, ಆತ್ಮ, ಮನಸ್ಸು ಇವಾವು ಇಲ್ಲದ ಈ ಶುಷ್ಕ, ಶೂನ್ಯ ಜಗತ್ತಿನಲ್ಲಿ ಮತ್ತೆ ಇರುವುದಾದರೂ ಏನು? ನಮ್ಮ 'ಭಾವೋದ್ರೇಕಗಳು ಮಾತ್ರ ಎಂದು ರೂಸೋ ಉತ್ತರಿಸುತ್ತಾನೆ. ರೂಸೋವಿನ ಈ ಯೋಚನೆಯನ್ನೇ ಇನ್ನಿಷ್ಟು ಬೆಳೆಸಿದ ಹ್ಯೂಮ್ ಕೂಡ ನಮ್ಮ ವೈಚಾರಿಕತೆ ನಮ್ಮ 'ಭಾವೋದ್ರೇಕಗಳಿಗೆ ಸೇವಕನಾಗಿ ಮಾತ್ರ ಇರಬೇಕು ಎಂದು ಘೋಷಿಸಿದ. ಈ 'ಭಾವೋದ್ರೇಕ ವಾದವು ಎಷ್ಟು ಜನಪ್ರಿಯವಾಯಿತೆಂದರೆ ಆ ಕಾಲದ

ಶ್ರೀಮಂತ ಮಹಿಳೆಯರು ಯಾವುದೇ ಒಂದು 'ಭಾವೋದ್ವೇಗಕ್ಕೆ ಒಳಪಟ್ಟಾಗ ಪ್ರಜ್ಞೆತಪ್ಪಿ ಬೀಳುವುದನ್ನು ಒಂದು ಸುಸಂಸ್ಕೃತಿಯ ಲಕ್ಷಣವನ್ನಾಗಿ ಮಾಡಿದರು.

ಈ ಎಲ್ಲಾ ಬೆಳವಣಿಗೆಗಳನ್ನೂ ಮೃದು ಸ್ವಭಾವದ ಕ್ಯಾಂಟ್ ಬಹಳ ಕಳವಳದಿಂದ ಗಮನಿಸುತ್ತಿದ್ದನು. ಹೇಗಾದರೂ ಮಾಡಿ ವೈಚಾರಿಕತೆ, ಮನಸ್ಸು ಸಾಧ್ಯವಾದರೆ ದೇವರನ್ನು ಈ ಗೊಂದಲದಿಂದ ಪಾರು ಮಾಡಬೇಕೆಂಬ ನಿರ್ಧಾರ ತೆಗೆದುಕೊಂಡು ಕ್ಯಾಂಟ್ ಈ ಮಹತ್ಕಾರ್ಯಕ್ಕೆ ತನ್ನನ್ನೇ ತಾನು ಸಂಪೂರ್ಣವಾಗಿ ಅರ್ಪಿಸಿಕೊಂಡನು. ಹತ್ತು ದೀರ್ಘ ವರ್ಷಗಳ ಪರಿಶ್ರಮದ ಫಲ ಅವನ 'Critique of Pure Reason' ಅಥವಾ 'ಶುದ್ಧ ಜ್ಞಾನದ ವಿಶ್ಲೇಷಣೆ' ಎಂಬ ಎಂಟನೂರಾ ಎಪ್ಪತ್ತು ಪುಟಗಳ ದೀರ್ಘ ಗ್ರಂಥ. ಪಾರಿಭಾಷಿಕ ಪದಗಳಿಂದ ಕೂಡಿದ ಶುಷ್ಕ ಶೈಲಿಯ ಈ ಗ್ರಂಥದಲ್ಲಿ ಕ್ಯಾಂಟ್ ತಾನು ಈ ಎಲ್ಲಾ ವಿವಾದಗಳಿಗೂ ತೆರೆ ಎಳೆದು, ಕಾಡುತ್ತಿದ್ದ ಎಲ್ಲ ಪ್ರಶ್ನೆಗಳಿಗೂ ಸಮಂಜಸ ಉತ್ತರವನ್ನು ಹುಡುಕಿದ್ದೇನೆಂದು ಘೋಷಿಸಿದ.

ಕ್ಯಾಂಟ್ ಮನಸ್ಸಿನ ಕಾರ್ಯವನ್ನು ಎರಡು ಸ್ತರಗಳಲ್ಲಿ ವಿಶ್ಲೇಷಿಸುತ್ತಾನೆ. ಶುದ್ಧ ಜ್ಞಾನದ ವಿಶ್ಲೇಷಣೆಯ ಮೊದಲ ಭಾಗವಾದ 'Transcendental Esthetic' ಅಥವಾ 'ಇಂದ್ರಿಯಾತೀತ ಸಂವೇದನೆಗಳ ವಿಶ್ಲೇಷಣೆ'ಯಲ್ಲಿ ಕ್ಯಾಂಟ್ ಮನಸ್ಸೆಂಬುದು ಕೇವಲ ಯೋಚನೆಗಳ, ಭಾವನೆಗಳ ಒಂದು ಸಮೂಹ ಮಾತ್ರವಲ್ಲ, ಅದು ಒಂದು ನಿರಂತರ ಕಾರ್ಯನಿರತ ಮಾಧ್ಯಮ. ನಮಗೆ ಇಂದ್ರಿಯಗಳ ಮೂಲಕ ಹರಿದು ಬರುವ ಅಸಂಖ್ಯ ಉದ್ದೀಪನಗಳಲ್ಲಿ ಯಾವುದು ಪ್ರಸಕ್ತ ಸಮಯಕ್ಕೆ ಅನ್ವಯಿಸುವುದೋ ಅವುಗಳನ್ನು ಮಾತ್ರ ಆಯ್ದುಕೊಂಡು ಈ ಉದ್ದೀಪನಗಳನ್ನು ಸ್ಥಳ–ಕಾಲಗಳ ಮಿತಿಯಲ್ಲಿ ವಿಶ್ಲೇಷಿಸಿ ಅವುಗಳನ್ನು ಒಂದು ತಿಳುವಳಿಕೆಯಾಗಿ ಮಾರ್ಪಡಿಸುವ ಕಾರ್ಯವನ್ನು ಮನಸ್ಸು ಎಂಬ ಮಾಧ್ಯಮ ಮಾಡುತ್ತದೆ. ಉದಾಹರಣೆಗೆ 'ಇಂಥ ಸ್ಥಳದಲ್ಲಿ ಇಟ್ಟ ಒಂದು ವಸ್ತು. ನೆನ್ನೆಯೋ, ಮೊನ್ನೆಯೋ ಅನುಭವಿಸಿದ ಒಂದು ಸಂವೇದನೆ.' ಒಂದು ಸೇಬಿನ ಹಣ್ಣು ಮೊದಲು ಬಣ್ಣ, ವಾಸನೆ, ರೂಪ, ರುಚಿ ಮುಂತಾದವುಗಳ ಒಂದು ಸಮೂಹ. ಈ ಇಂದ್ರಿಯ ಸಂವೇದನೆಗಳು ತಮಗೆ ತಾವೇ 'ಸೇಬಾಗಿ' ಮಾರ್ಪಟ್ಟು ನಮಗೆ ಗೋಚರವಾಗುತ್ತದೆಯೇ? ಲಾಕ್ ಹಾಗೂ ಹ್ಯೂಮ್ ಪ್ರಕಾರ ಅದು ಸಾಧ್ಯ. ಆದರೆ ಕ್ಯಾಂಟ್ ಅದು ಆ ರೀತಿ ಆಗದು ಎಂದು ವಾದಿಸುತ್ತಾನೆ. ನಮಗೆ ಬರುವ ನೂರಾರು ಇಂದ್ರಿಯ ಸಂವೇದನೆಗಳಲ್ಲಿ 'ಸೇಬಿಗೆ' ಸಂಬಂಧಪಟ್ಟ ಸಂವೇದನೆಗಳನ್ನು ಮಾತ್ರ ಗ್ರಹಿಸಿ ಅದನ್ನು 'ಸೇಬು' ಎಂಬ ತಿಳುವಳಿಕೆಯನ್ನು ಉಂಟು ಮಾಡಲು ನಮಗೆ ಒಂದು ಮಾಧ್ಯಮಬೇಕಾಗುತ್ತದೆ. ಅಂಥ ಮಾಧ್ಯಮವೇ ಮನಸ್ಸು ಎಂದು ಕ್ಯಾಂಟ್ ಪ್ರತಿಪಾದಿಸುತ್ತಾನೆ. ಮನಸ್ಸು ನಿಷ್ಕ್ರಿಯ ವಸ್ತುವಾಗಿರದೆ ಒಂದು ಕ್ರಿಯಾಶೀಲ ಮಾಧ್ಯಮ ಎಂಬುದನ್ನೂ ಮತ್ತೊಂದು ಉದಾಹರಣೆಯಿಂದ ತಿಳಿಯಬಹುದು. ತನ್ನ ಮಗುವಿನ ಮಗ್ಗುಲಲ್ಲಿ ಮಲಗಿರುವ ತಾಯಿಯ ಕಿವಿಗೆ ಸುತ್ತಮುತ್ತಲಿನ ಶಬ್ದಗಳಾವುವೂ ಕೇಳವು. ಆದರೆ ತನ್ನ ಕಂದನ ಕ್ಷೀಣ ಅಳು ಅವಳನ್ನು ಆಳವಾದ ನಿದ್ರೆಯಿಂದ ಎಬ್ಬಿಸುತ್ತದೆ. ಇದರಿಂದ ನಿರಂತರವಾಗಿ ಇಂದ್ರಿಯಗಳ ಮೂಲಕ ಬಂದ ಉದ್ದೀಪನಗಳಲ್ಲಿ ಪ್ರಸ್ತುತ ಸಂದರ್ಭಕ್ಕೆ (ಮಗುವಿನ ಸುಖ ಹಾಗೂ ಸುರಕ್ಷೆ) ಇವುಗಳನ್ನು ಮಾತ್ರ ಆರಿಸಿ ತೆಗೆದುಕೊಂಡು ಅವನ್ನು ಒಂದು ಅರಿವಾಗಿ (ತನ್ನ ಮಗುವಿಗೆ ಹಸಿವೆಂಬ ಅರಿವು) ಪರಿವರ್ತಿಸುವ ಕಾರ್ಯ ಒಂದು ಕ್ರಿಯಾಶೀಲ ಮಾಧ್ಯಮಕ್ಕೆ ಮಾತ್ರ ಸಾಧ್ಯ. ಆದ್ದರಿಂದ 'ಮನಸ್ಸು' ಹ್ಯೂಮ್ ಹೇಳಿದಂತೆ ಕೇವಲ ಒಂದು ಹೆಸರು ಮಾತ್ರವಲ್ಲ ಅಥವಾ ಲಾಕ್ ಹೇಳಿದಂತೆ ನಮ್ಮ

ಆಲೋಚನೆಗಳ ಹಾಗೂ ಭಾವನೆಗಳ ಒಂದು ನಿಷ್ಕ್ರಿಯ ಉಗ್ರಾಣವೂ ಅಲ್ಲ.

ಆರಿಸಿಕೊಂಡ ಇಂದ್ರಿಯ ಸಂವೇದನೆಗಳನ್ನು ಒಂದು ಅರಿವನ್ನಾಗಿ ಪರಿವರ್ತಿಸಿದರೆ ಮನಸ್ಸಿನ ಕಾರ್ಯ ಮುಗಿಯಿತೇ? ತನ್ನ 'Transcendental Analytic' ಅಥವಾ 'ಇಂದ್ರಿಯಾತೀತ ವಸ್ತು ವಿಶ್ಲೇಷಣೆ'ಯಲ್ಲಿ ಈ ಪ್ರಶ್ನೆಯನ್ನು ಕ್ಯಾಂಟ್ ವಿಶ್ಲೇಷಿಸುತ್ತಾನೆ. ತಾನು ಆರಿಸಿ ತೆಗೆದುಕೊಂಡ ಸಂವೇದನೆಗಳನ್ನು ಅರ್ಥ ಬರುವ ಗುಂಪುಗಳನ್ನಾಗಿ ವಿಂಗಡಿಸಿ ಅವುಗಳನ್ನು ಅರಿವನ್ನಾಗಿ ಪರಿವರ್ತಿಸಿದ ಮೇಲೆ ಕ್ರಿಯಾಶೀಲ ಮನಸ್ಸು ಎರಡನೆಯ ಹಂತದಲ್ಲಿ ಈ ಅರಿವನ್ನು ಗ್ರಹಿಕೆಯನ್ನಾಗಿ ಪರಿವರ್ತಿಸುತ್ತದೆ. ಇಲ್ಲಿ ಗ್ರಹಿಕೆ ಎಂದರೆ ನಮ್ಮ ಬೇರೆ ಬೇರೆ ಸಂವೇದನೆಗಳ ಹಾಗೂ ವಿವಿಧ ರೀತಿಯ ಅನುಭವಗಳ ನಡುವ ಇರುವ ಕಾರ್ಯ–ಕಾರಣ, ದೇಶ–ಕಾಲ, ಇವುಗಳ ಚೌಕಟ್ಟಿನಲ್ಲಿ ಇರುವ ಸಂಬಂಧಗಳು, ಹಾಗೂ ಈ ಸಂಬಂಧಗಳನ್ನು ನಿಯಂತ್ರಿಸುವ ಎಲ್ಲಕ್ಕೂ ಅನ್ವಯಿಸುವ ಸೂತ್ರಗಳು ಅಥವಾ ನಿಯಮಗಳು, ಒಂದು ಮಾತಿನಲ್ಲಿ ಹೇಳುವುದಾದರೆ ಮನಸ್ಸು ಎರಡನೆಯ ಹಂತದಲ್ಲಿ ಅರಿವನ್ನು ಜ್ಞಾನವನ್ನಾಗಿ ಪರಿವರ್ತಿಸುತ್ತದೆ.

ಈ ಮೇಲೆ ಉಲ್ಲೇಖಿಸಿದಂತೆ ಕ್ಯಾಂಟ್‌ನ ಮನಸ್ಸನ್ನು ಕುರಿತ ವಿಶ್ಲೇಷಣೆ ವೈಶೇಷಿಕ ದರ್ಶನದ 'ಮನಸ್ಸಿನ' ವಿಶ್ಲೇಷಣೆಗೆ ಬಹಳ ಹೊಂದಿಕೊಳ್ಳುತ್ತದೆ. ವೈಶೇಷಿಕ ದರ್ಶನದ ಪ್ರಕಾರ ಮನಸ್ಸು ಯಾವ ಸಂವೇದನೆ ಸಮಂಜಸವೋ ಅದನ್ನು ಆರಿಸಿ ಉಳಿದವುಗಳನ್ನು ನಿರಾಕರಿಸುತ್ತದೆ. ಮನಸ್ಸು ಇಲ್ಲದಿದ್ದರೆ ತಿಳುವಳಿಕೆ ಅಸಾಧ್ಯ. ಉದಾಹರಣೆಗೆ 'ಮನಸ್ಸು' ಮನಸ್ಸು ಮಾಡದಿದ್ದರೆ, ಅಂದರೆ ಬೇರೆ ಯಾವುದೋ ವಿಷಯದಲ್ಲಿ ಮುಳುಗಿದ್ದರೆ ಕಣ್ಣು ತೆರೆದಿದ್ದರೂ ಅದು ಏನನ್ನೂ ನೋಡುವುದಿಲ್ಲ, ಕಿವಿ ತೆರೆದಿದ್ದರೂ ಅದು ಏನನ್ನೂ ಕೇಳಿಸಿ ಕೊಳ್ಳುವುದಿಲ್ಲ. ಆದ್ದರಿಂದ ಮನಸ್ಸು "ಎರಡು ರೀತಿಯ ಕಾರ್ಯಗಳನ್ನು ಮಾಡುತ್ತದೆ. ಮೊದಲನೆಯದಾಗಿ, ಅದು ಅರಿವು ಅಥವ ಜ್ಞಾನವನ್ನು ಉಂಟು ಮಾಡುತ್ತದೆ. ಎರಡನೆಯದಾಗಿ, ನಮ್ಮ ಅರಿವನ್ನು ಒಂದೆರಡು ವಸ್ತುಗಳಿಗೆ ಮಾತ್ರ ಅನ್ವಯಿಸುವಂತೆ ಮಾಡಿ ಸಂವೇದನೆಗಳ ಕ್ಷೇತ್ರ ಅಥವಾ ಬಾಹುಳ್ಯವನ್ನು ತಗ್ಗಿಸುತ್ತದೆ."

'ಈಗ ಎಲ್ಲಕ್ಕಿಂತ ಮುಖ್ಯವಾದ ಪ್ರಶ್ನೆ. ನಮ್ಮ ಜ್ಞಾನವೆಲ್ಲ ನಮ್ಮ ಇಂದ್ರಿಯ ಗ್ರಹಿಕೆಯ ಸೀಮೆಯಲ್ಲೇ ಇರುತ್ತದೆಯೆ? ಯಾವುದೇ ವಸ್ತುವಿಗೆ ನಮ್ಮ ಇಂದ್ರಿಯ ಗ್ರಹಿಕೆಯಿಂದ ಮುಕ್ತವಾದ ಅದರದೇ ಸತ್ಯ ಅಥವಾ ಆ ವಸ್ತುವಿನ ಶುದ್ಧ ಸತ್ಯ ತಿಳಿಯಲು ಸಾಧ್ಯವೇ? ತನ್ನ 'Transcedental Dialectic' ಅಥವಾ 'ಇಂದ್ರಿಯಾತೀತ ಜಿಜ್ಞಾಸೆ'ಯಲ್ಲಿ ಕ್ಯಾಂಟ್ ಒಂದು ವಸ್ತುವಿನ ಸತ್ಯ ಅಥವಾ ಸ್ವರೂಪ ಎರಡು ರೀತಿಯಲ್ಲಿ ಇರಲು ಸಾಧ್ಯವೆಂದು ಹೇಳುತ್ತಾನೆ. ಮೊದಲನೆಯದು ಆ ವಸ್ತುವಿನ ಶುದ್ಧ ಸತ್ಯ ಅಥವ ಸ್ವ–ಸ್ವರೂಪ (The thing in itself); ಎರಡನೆಯದು ಆ ವಸ್ತುವಿನ ನಮ್ಮ ಇಂದ್ರಿಯ ಗೋಚರ ಅರಿವು. ಅವನಿಗಿಂತಲೂ ಸಾವಿರ ವರ್ಷಗಳ ಹಿಂದೆಯೇ ಹೇಳಿದ ಶಂಕರರ ಮಾತುಗಳನ್ನೇ ಧ್ವನಿಸುತ್ತಾ ಕ್ಯಾಂಟ್ ಯಾವುದೇ ವಸ್ತುವಿನ ಸ್ವ–ಸ್ವರೂಪವನ್ನು ನಮ್ಮ ಸಾಧಾರಣ ಇಂದ್ರಿಯ ಗ್ರಹಿಕೆಯ ಮಾರ್ಗದಿಂದ ತಿಳಿಯಲು ಸಾಧ್ಯವಿಲ್ಲವೆಂದು ಹೇಳುತ್ತಾನೆ. ನಮ್ಮ ಇಂದ್ರಿಯಗಳಿಗೆ ದಾಸರಾದ ನಾವು ಒಂದು ವಸ್ತುವಿನ ಸ್ವ–ಸ್ವರೂಪವನ್ನು ಊಹಿಸಬಹುದೇ ಹೊರತು ಖಚಿತವಾಗಿ ತಿಳಿಯಲಸಾಧ್ಯ. ಆದ್ದರಿಂದ ಭೌತಿಕ ಜಗತ್ತಿನ ನಿಜ ಸ್ವರೂಪ ನಮಗೆ ಯಾವಾಗಲೂ ಅಗೋಚರವಾಗಿಯೇ ಉಳಿಯುತ್ತದೆ. 'ಇದೇ ಅಲ್ಲದೆ ಒಬ್ಬ ವ್ಯಕ್ತಿಯ ಇಂದ್ರಿಯ ಸೀಮಿತ ಜ್ಞಾನ ಅವನ ಮಟ್ಟಿಗೆ ಮಾತ್ರ ನಿಜವಾಗಿರಲು ಸಾಧ್ಯ. ಏಕೆಂದರೆ ಅದೇ ವಸ್ತುವಿನ ಬೇರೆ ವ್ಯಕ್ತಿಯ ಇಂದ್ರಿಯ

ಸೀಮಿತ ಜ್ಞಾನ ಇವನ ಇಂದ್ರಿಯ ಗ್ರಾಹ ಜ್ಞಾನಕ್ಕಿಂತ ಬೇರೆಯಾಗಿರುತ್ತದೆ.

'ತನ್ನ ವಿಶ್ಲೇಷಣೆಯನ್ನು ಹೀಗೆ ಮುಂದುವರಿಸುತ್ತಾ ಕ್ಯಾಂಟ್ ವಿಜ್ಞಾನವು 'ಭೌತಿಕ ಪ್ರಪಂಚವನ್ನು ಮಾತ್ರ ತಿಳಿಯಲೆತ್ನಿಸುವುದರಿಂದ ಇಂದ್ರಿಯಾತೀತ ಜ್ಞಾನವು ಯಾವಾಗಲು ವಿಜ್ಞಾನದ ಹೊರಗೇ ಉಳಿಯುತ್ತದೆ ಎಂದು ಹೇಳಿ ವಿಜ್ಞಾನದ ಮಿತಿಯನ್ನು ಗುರುತಿಸುತ್ತಾನೆ.

ಅದರಂತೆ ಅವನು ಧರ್ಮದ ಮಿತಿಯನ್ನೂ ಗುರುತಿಸುತ್ತಾ ಅದು ದೇವರು, ಆತ್ಮ, 'ಆಯ್ಕೆಯ ಸ್ವಾತಂತ್ರ್ಯ' ಮುಂತಾದ ಇಂದ್ರಿಯಾತೀತ ವಿಷಯಗಳನ್ನು ಇಂದ್ರಿಯಸೀ ಮಿತ ಜ್ಞಾನದ ನೆಲೆಯಿಂದ ಅರ್ಥೈಸುವ ವಿಫಲ ಕಾರ್ಯವನ್ನು ಬಿಟ್ಟು ಜನರಿಗೆ ಒಳಿತು–ಕೆಡುಕು ಇವುಗಳ ಬಗ್ಗೆ ತಿಳುವಳಿಕೆ ನೀಡಿ ಅವರನ್ನು ಸನ್ಮಾರ್ಗಕ್ಕೆ ತರುವ ಕಾರ್ಯಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಬೇಕೆಂದು ತಿಳಿಸುತ್ತಾನೆ. ಈ ಮಾತುಗಳನ್ನು ಕೇಳಿದ ಚರ್ಚ್‌ನ ಧರ್ಮಗುರುಗಳು ತಮ್ಮ ನಾಯಿಗಳಿಗೆ 'ಕ್ಯಾಂಟ್' ಎಂದು ಹೆಸರಿಟ್ಟಿದ್ದು ಯಾರಿಗೂ ಆಶ್ಚರ್ಯವನ್ನು ಉಂಟು ಮಾಡಲಾರದು.

ಮುಕ್ತಾಯ

ಶಂಕರರು ಮತ್ತು ಕ್ಯಾಂಟ್ ಇಬ್ಬರೂ ಸತ್ಯದ ಹಿಂದಿನ ಇಂದ್ರಿಯಾತೀತ ಪರಮಸತ್ಯ ಅಥವಾ ನಿಜಸ್ವರೂಪವನ್ನು ನಮ್ಮ ಇಂದ್ರಿಯಜ್ಞಾನದ ಪರಿಮಿತಿಯಲ್ಲಿ ತಿಳಿಯಲಸಾಧ್ಯ ಎಂದು ಹೇಳುತ್ತಾರೆ. ಇವರಿಬ್ಬರ ನಿಲುವುಗಳ ನಡುವಿನ ಹೋಲಿಕೆ ಇಲ್ಲಿಗೇ ಮುಕ್ತಾಯವಾಗುತ್ತದೆ. ಕ್ಯಾಂಟ್‌ನ ಪ್ರಕಾರ ನಾವು ವಸ್ತುವಿನ ನಿಜಸ್ವರೂಪದ ಬಗ್ಗೆ ಊಹೆ ಮಾಡಲಿಹುದೇ ವಿನಃ ಅದನ್ನು ತಿಳಿಯಲಸಾಧ್ಯ. ಆದರೆ ಶಂಕರರು(ವೇದಾಂತ) ಸತ್ಯಗಳ ಹಿಂದಿನ ಇಂದ್ರಿಯಾತೀತ ಪರಮಸತ್ಯವಾದ ಬ್ರಹ್ಮವಸ್ತುವನ್ನು ತಿಳಿಯುವುದೇ ಅಲ್ಲದೆ ಅನುಭವಿಸಲೂ ಸಾಧ್ಯವೆಂದು ಹೇಳಿ, ಆ ಬ್ರಹ್ಮವಸ್ತುವನ್ನು ತಿಳಿದವನು ನಿಷ್ಕಳಂಕ ಬ್ರಹ್ಮಾನಂದದಲ್ಲಿ ಕರಗಿ ಹೋಗುತ್ತಾನೆಂದು ಖಚಿತವಾಗಿ ತಿಳಿಸುತ್ತಾರೆ. ಒಂದು ರೀತಿ ಪಾಶ್ಚಾತ್ಯ ತತ್ವಶಾಸ್ತ್ರವು ಎಲ್ಲಿ ಕೊನೆಗೊಳ್ಳುತ್ತದೋ ಅಲ್ಲಿ ಭಾರತೀಯ ತತ್ವಚಿಂತನೆಯು ಆರಂಭವಾಗುತ್ತದೆ.

ಗ್ರಂಥ ಋಣ

1. Story of Philosophy, Will Durant
2. Our Oriental Heritage (Story of Civilization), Will Durant
3. Outlines of Indian Philosophy, M. Hiriyanna
4. Vedanta or the Science of Reality, K.A. Krishnaswamy Iyer

✠✠✠

ಒಂದು ಪ್ರತಿಕ್ರಿಯೆ

ಡಾ. ಮೋಹನ ಕುಂಟಾರ್ ಅವರ ಸಂಸ್ಕೃತ–ಕನ್ನಡ ಭಾಷಾಂತರ ಪ್ರಕ್ರಿಯೆ ಎಂಬ ಲೇಖನವನ್ನು ಕುತೂಹಲದಿಂದಲೇ ಓದಿದೆ. ಲೇಖನದ ಆರಂಭದಲ್ಲೇನೋ – ಹಾಗೆ ನೋಡಿದರೆ ಭಾರತದ ಬಹುತೇಕ ಭಾಷೆಗಳಿಗೆ ಸಂಸ್ಕೃತ ಭಾಷೆ ಆಕರದ ಸ್ಥಾನದಲ್ಲಿದೆ. ಈ ಅರ್ಥದಲ್ಲಿಯೇ ಸಂಸ್ಕೃತವನ್ನು ಕನ್ನಡದ ತಾಯಿ ಎಂಬ ರೀತಿಯ ಹೇಳಿಕೆಗಳು ಪ್ರಚಾರಕ್ಕೆ ಬಂದಿವೆ... –ಹೀಗೆ ಸಂಸ್ಕೃತದ ಬಗೆಗೆ ಗೌರವಪೂರ್ವಕವಾಗಿ ಕೆಲವು ಮಾತುಗಳಿದ್ದರೂ ಮುಂದೆ ಹೋದಂತೆ– 'ಸಂಸ್ಕೃತ ಗ್ರಾಂಥಿಕ ಭಾಷೆ. ಅದು ಎಂದಿಗೂ ಆಡುನುಡಿಯಾಗಿರಲಿಲ್ಲ. ಮಾತಿನ ಬಳಕೆಯಲ್ಲಿರುವ ಭಾಷೆಯಂತೆ ನಿರಂತರ ಬದಲಾಗದ ಕಾರಣಕ್ಕೆ ಅದರ ವ್ಯಾಕರಣದ ಸ್ವರೂಪವೂ ಅಷ್ಟೇ ಖಚಿತವಾಗಿ ಬದಲಾವಣೆ ಆಗದೆ ಉಳಿದಿದೆ. ಬರವಣಿಗೆಯ ಭಾಷೆಯಾಗಿರುವುದರಿಂದ ಅದಕ್ಕೆ ನಿಖರವಾದ ವ್ಯಾಕರಣ ಲಕ್ಷಣಗಳನ್ನು ಹೇಳುವುದು ಸಾಧ್ಯವಾಗಿದೆ. ಅದರಲ್ಲಿ ಪ್ರಾದೇಶಿಕ ವೈವಿಧ್ಯವೂ ಇಲ್ಲವಾಗಿದೆ...' ಎಂದು ಅವರು ಬರೆದಿರುವುದಕ್ಕೆ ಕಾರಣ ಲೇಖಕರ ಪೂರ್ವಾಗ್ರಹಪೀಡಿತ ದೃಷ್ಟಿಯೋ, ಅಧ್ಯಯನದ ಕೊರತೆಯೋ ಅರ್ಥವಾಗಲಿಲ್ಲ. ಮಹಾಮಹೋಪಾಧ್ಯಾಯ ಎನ್. ರಂಗನಾಥ ಶರ್ಮಾಅವರ ಸಂಸ್ಕೃತಂ ನಾಮ ದೈವೀ ವಾಕ್ ಇತ್ಯಾದಿ ಪುಸ್ತಕಗಳನ್ನೋ, ಚಮೂ ಕೃಷ್ಣ ಶಾಸ್ತ್ರಿಯವರ ಜ್ಞಾನೇಧರ್ಮಃ, ಉತ ಪ್ರಯೋಗೇ? ಎಂಬ ಪುಸ್ತಕವನ್ನೋ ಪರಿಶೀಲಿಸಿದ್ದರೆ ಸಂಸ್ಕೃತ ಒಂದು ಕಾಲದಲ್ಲಿ ಆಡುನುಡಿಯಾಗಿದ್ದ ಬಗೆಗೆ ಅವರಿಗೆ ಮನವರಿಕೆ ಆಗುತ್ತಿತ್ತು. ಹೆಚ್ಚೇಕೆ, ಭಟ್ಟೋಜೀ ದೀಕ್ಷಿತನ ಸಿದ್ಧಾಂತ ಕೌಮುದಿಯಲ್ಲಿ ಬಂದಿರುವ ಅನೇಕ ಉದಾಹರಣೆಗಳನ್ನು ಗಮನಿಸಿದ್ದರೂ ಅದು ಸ್ಪಷ್ಟವಾಗುತ್ತಿತ್ತು. ಏಕೆಂದರೆ ಸಂಸ್ಕೃತ ಆಡು ಮಾತಾಗಿರದಿದ್ದರೆ ಆ ಶಬ್ದಗಳು ಸೃಷ್ಟಿಯಾಗುವ ಸಾಧ್ಯತೆಯೇ ಇರಲಿಲ್ಲ. ಹಾಗೇ ಸಂಸ್ಕೃತದಲ್ಲಿ ಪ್ರಾದೇಶಿಕ ವೈವಿಧ್ಯವಿತ್ತು ಎಂಬುದೂ ಪತಂಜಲಿಯ ಮಹಾಭಾಷ್ಯದ ಉದಾಹರಣೆಗಳ ಮೂಲಕ ಸ್ಪಷ್ಟವಾಗುತ್ತದೆ.

ಇನ್ನು–ಸಂಸ್ಕೃತ ಭಾಷೆಯ ಕೃತಿಗಳ ಬಹುತೇಕ ಕನ್ನಡ ಅನುವಾದಗಳೂ ಸಹ ಸಾಮಾನ್ಯ ಕನ್ನಡಗಳಿಗಿಂತ ಹೆಚ್ಚು ಗ್ರಾಂಥಿಕವಾಗಿ ಜಟಿಲವಾಗಿ ಸಂಸ್ಕೃತ ಭೂಯಿಷ್ಠವಾಗಿದ್ದರಿಂದ ಅವುಗಳ ಓದೂ ಕ್ಲಿಷ್ಟವೆನಿಸಿತು–ಎಂಬ ವಾಕ್ಯದಲ್ಲಿ ಅವರು ಬಹುತೇಕ ಎಂಬ ಶಬ್ದವನ್ನು ಬಳಸಿರುವುದರಿಂದ ಅವರ ವಾದವನ್ನು ಹೇಗೋ ಒಂದಷ್ಟು ಮಟ್ಟಿಗೆ ಒಪ್ಪಬಹುದಾದರೂ ರಂಗನಾಥ ಶರ್ಮಾ ಅವರ ವಾಲ್ಮೀಕಿ ರಾಮಾಯಣದ, ಎ.ಆರ್. ಕೃಷ್ಣಶಾಸ್ತ್ರಿಯವರ ವಚನ ಭಾರತ ಮತ್ತು ಕಥಾಮೃತಗಳ, ಬನ್ನಂಜೆ ಗೋವಿಂದಾಚಾರ್ಯರ ಕಾದಂಬರಿಯ ಕನ್ನಡ ಅನುವಾದಗಳು ಅವರ ಗಮನಕ್ಕೇ ಬಂದಂತಿಲ್ಲ ಎಂದು ಹೇಳಬೇಕೆನಿಸುತ್ತದೆ.

ಕೃತಿಗಳ ಸಮಗ್ರ ಆಶಯಗಳನ್ನು ಬದಿಗಿಟ್ಟು ಅಲ್ಲಿ ಹುದುಗಿರುವ ಜೀವನ ಸಂಬಂಧಿ ಹಾಗೂ ಸಾದೃಶ (ಇದು ಸಾದೃಶ್ಯ ಇರಬಹುದೆ?) ವಿವರಗಳ ಮೂಲಕವೂ ಸಂಸ್ಕೃತ ಸಾಹಿತ್ಯವನ್ನು ಅನುವಾದಗಳ ಮೂಲಕ ಆಪ್ತಗೊಳಿಸಬಹುದೆಂದೆನಿಸುತ್ತದೆ–ಎಂಬ ಹೇಳಿಕೆಯಂತೂ ಅನುವಾದ ಮೂಲದ ಆಶಯಕ್ಕೆ ಬದ್ಧವಾಗಿರದಿದ್ದರೂ ಪರವಾಗಿಲ್ಲ ಎಂಬ ಅರ್ಥವನ್ನು ಧ್ವನಿಸುವಂತಿದ್ದು ಅದಿಲ್ಲದೆಯೂ ಸಾದೃಶವಿವರಗಳ ಮೂಲಕ ಸಂಸ್ಕೃತ ಸಾಹಿತ್ಯವನ್ನು ಆಪ್ತಗೊಳಿಸಬಹುದೆಂದೆನಿಸುತ್ತದೆ–ಅಂದರೆ ಹಾಗೆ ಮಾಡಬೇಕು–ಎಂಬ ಎಷ್ಟುಮಾತ್ರಕ್ಕೂ ಸ್ವೀಕಾರಾರ್ಹವಲ್ಲದ ಸೂಚನೆಯನ್ನು ಕೊಡುತ್ತದೆ.

ಡಾ. ವಿಶ್ವಾಸ
ಸಂಸ್ಕೃತ ಭಾರತೀ, ಮಂಗಳೂರು

✠✠✠

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 8, Issue 4, April - June 2020
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್

ಬಂಟ್ವಾಳ ಮೂಡ ಶಾಖೆಯಲ್ಲಿ

ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com